

‘ಹಂಗಾಮಾ’ ಎನ್ನುವ ಪತ್ರಿಕೆ ಇತ್ತು. ವೆಂಕಟರಮಣ ಗೌಡರು ತಮ್ಮ ಎಲ್ಲಾ ಕನಸುಗಳನ್ನು ಒಟ್ಟುಗೂಡಿಸಿ ಹುಟ್ಟುಹಾಕಿದ ಮಿನಿ ‘ಭಾವನಾ’ ಅದು. ಅಲ್ಲಿ ಕಾಣಿಸಿಕೊಂಡ ಕನಸುಗಂಗಳ ಹುಡುಗಿ ‘ಗಾನಾ’. ಆ ನಂತರ ಬದುಕಿನ ಬಂಡಿ ಸಾಕಷ್ಟು ದೂರ ನಡೆದು ಬಂತು. ಹಂಗಾಮಾ ಬದಲಿಗೆ ಒಂದು ‘ಅವಧಿ’ ಮೂಡಿ ಬಂತು. ಆಶ್ಚರ್ಯ ಎಂಬಂತೆ ಗಾನಾ ಬದಲಿಗೆ ಒಬ್ಬ ‘ಚೇತನಾ’ ಮೂಡಿಬಂದರು.

ಗಾನಾ, ಚೇತನಾ ಹೀಗೆ ದ್ವಿಪಾತ್ರದ ಹುಡುಗಿಯ ಸಂಕಲನ ಈಗ ಬೆಳಕು ಕಾಣುತ್ತಿದೆ. ನೇರ ಮಾತು, ಬೇಕಾದಷ್ಟೇ ಮಾತು ಚೇತನಾರ ಗುಣ.

ಚೇತನಾ ತೀರ್ಥಹಳ್ಳಿ ‘ಉಘೀಟ್’ ಎಂಬ ಕವನ ಸಂಕಲನ ತಂದಿದ್ದರು . ಕನ್ನಡ ಪುಸ್ತಕ ಪ್ರಾಧಿಕಾರ ಇದರ ಬೆನ್ನಿಗಿತ್ತು. ಈಗ ಮಿನಿ ಮಿನಿ ಕಥೆಗಳ ‘ಭಾಮಿನಿ ಷಟ್ಪದಿ’ ನಿಮ್ಮ ಕೈಯಲ್ಲಿ.

ಚೇತನಾ ತೀರ್ಥಹಳ್ಳಿ

# ಭಾ ಮಿ ನಿ ಷಟ್ಪದಿ



ಪ್ಯಾಪಿರಸ್

**ಮೇಫ್ಲವರ್ ಮೀಡಿಯಾ ಹೌಸ್ ಪ್ರಕಟಣೆ**

ಪ್ಯಾಪಿರಸ್ ಅಂದ್ರೆ ಪೇಪರ್, ಪೇಪರ್ ಅಂದ್ರೆ ಕಾಗದ.
ಕಾಗದ ಇಲ್ದೆ ಪ್ರಕಾಶನ ಹೇಗೆ?ಅದಕ್ಕೇ ನಾವು 'ಪ್ಯಾಪಿರಸ್'

*BHAMINI SHATPADI*- collection of articles by Chetana Teerthahalli,
Published by PAPYRUS, an initiative of Mayflower Media House.

Copyright: Chetana Teerthahalli
Contact:


Mayflower Media House
1, Yamunabai road, unit 5, first floor
Madhavnagar, Bangalore-560 001, India
Contact: 080- 2237 4436 mayflowermh@gmail.com

ರೇಖಾಚಿತ್ರಗಳು: ಪ ಸ ಕುಮಾರ್
ಮುಖಪುಟ ವಿನ್ಯಾಸ: ಅಪಾರ
ಮುಖಪುಟದ ಫೋಟೋ: ಡಿಜಿ ಮಲ್ಲಿಕಾರ್ಜುನ

ಮುದ್ರಣ: ಇಳಾ ಮುದ್ರಣ
ಮೊದಲ ಮುದ್ರಣ: 2008
ಪುಟ: 82
ಬೆಲೆ: ರೂ



*ನನ್ನ ಪ್ರತಿ ಹೆಜ್ಜೆಗೂ*
*ಬೆಂಬಲವಾಗಿರುವ ಚೈತನ್ಯದ ಚಿಲುಮೆ*
*ಚಕ್ರವರ್ತಿ ಸೂಲಿಬೆಲೆಗೆ,*
*ಈ ಪುಸ್ತಕ ಅರ್ಪಣೆ*



**ಕೃತಜ್ಞತೆಗಳು**

ಅಪ್ಪ, ಅಮ್ಮ
ವೆಂಕಟ್ರಮಣ ಗೌಡ
ಜಿ.ಎನ್ ಮೋಹನ್
ನಟರಾಜ್ ಹುಳಿಯಾರ್
ಜೋಗಿ
ಅಪಾರ
ಪ.ಸ. ಕುಮಾರ್
ಮಲ್ಲಿಕಾರ್ಜುನ್
ಮತ್ತು
ಇಲ್ಲಿನ ಕಥೆಗಳ ಎಲ್ಲ ಪಾತ್ರಗಳು

# ಹೇಳಲಿಕ್ಕಿನ್ನೂ ಸಾಕಷ್ಟು ಬಾಕಿ ಇದೆ...

ತುಟಿಯ ರಂಗು ಕಳೆದಿದೆ.
ಇಲಾಸ್ಟಿಕ್ ಸ್ಮೈಲೂ...
ಇನ್ನು ಮುಂದೆ ಮುಖವಾಡದ ಅಗತ್ಯವಿಲ್ಲ.

ಕಣ್ ಬಿಟ್ಟಾಗಿನಿಂದ ಕಂಡಿದ್ದು ಗುಬ್ಬಚ್ಚಿ ಗೂಡಂಥ ಬೆಚ್ಚನೆ ಸಂಸಾರ. ಅಲ್ಲಿ ಕುಂತು ಹೆಣೆದ ಕನಸುಗಳೂ ಬೆಚ್ಚಬೆಚ್ಚನೆಯವೇ. ಇದ್ದಕ್ಕಿದ್ದ ಹಾಗೇ ಒಮ್ಮೆ, ಬೆಂಕಿ ಬಿತ್ತು ನಿದ್ದೆಗೆ! ಅದರ ಸುತ್ತ ಅವನ ಶಲ್ಯದ ತುದಿಗೆ ಸೆರಗು ಕಟ್ಟಿಕೊಂಡ ನಾನು, ತಲೆ ತಗ್ಗಿಸಿ ಪ್ರದಕ್ಷಿಣೆ ಬಂದೆ. ಕನಸುಗಳೆಲ್ಲ ಬೆಂಕಿಯೊಳಗೆ ಸುರಿದುಬಿದ್ದವು. ಹಾಗಂತ ಗೊತ್ತಾಗುವ ಹೊತ್ತಿಗೆ ಸುತ್ತಮುತ್ತ ಹೊಗೆ ತುಂಬಿ ದಮ್ಮುಕಟ್ಟಿತ್ತು. ಒಂದೇ ಸಮ ಉರಿ. ಕಣ್ಣಲ್ಲೂ, ಎದೆಯಲ್ಲೂ. ಸತ್ತಿದ್ದು ಸಾಕು ಅನಿಸಿತು. ಬದುಕಲಿಕ್ಕೆ ಹೊಸ ಗಾಳಿ ಬೇಕಲ್ಲ? ಬಾಗಿಲು ತೆರೆದರೆ ಹೊಸ್ತಿಲು.
ದಾಟದೆ ಉಳಿಯುವುದು ಹೇಗೆ ಸಾಧ್ಯವಿತ್ತು?

ಕೆಲವು ಜನರಿದ್ದರು. “ಛೆ! ಹೊಸ್ತಿಲು ದಾಟುವುದೇ?” ಅಂದರು. “ಎಷ್ಟು ಜನ ಹಾಗೆ ಹೊಗೆಯಲ್ಲಿ ಕೆಮ್ಮುತ್ತ ಉಳಿದಿಲ್ಲ!?”
ಕೇಳಿಸುತ್ತದೆ ನನಗೂ. ಬದುಕಿನೊಲೆ ಹೊಗೆಯೆದ್ದು ದಮ್ಮುಗಟ್ಟಿ ಕೆಮ್ಮುತ್ತಿರುವ ಸಾವಿರ ಸಾವಿರ ದನಿಗಳು. ಒಂದೊಂದರದ್ದು ಒಂದೊಂದು ಬಗೆ. ಅವಕ್ಕೆಲ್ಲ ಮದ್ದು ಎಲ್ಲಿದೆ? ಬಲೆ ಕಟ್ಟಿಕೊಂಡ ಜೇಡಗಳ ಹಾಗೆ ಹೊಗೆ ಗೂಡಲ್ಲಿ ಬಾಳೋದು ಕೆಲವರಿಗೆ ಇಷ್ಟ. ಅಂಥ ಬದುಕಿಗೆ ಯಾವಾಗಲಾದರೂ ಸರ್ಟಿಫಿಕೇಟು ಸಿಕ್ಕರೂ ಸಿಗಬಹುದನ್ನೋ ದೂರದ ಆಸೆ ಬಹುಶಃ.

~

ಹಾಗೆ ನೋಡಿದರೆ ನನಗಾದ ನಷ್ಟ ಏನೂ ಇಲ್ಲ. ನನ್ನ ನಂಬಿಕೆಯನ್ನ ಅಂವ ಕಳೆದುಹಾಕಿದ್ದ. ಶ್ರದ್ಧೆ, ಮಗು, ಮಮತೆ, ಎಲ್ಲವನ್ನೂ ಕಿತ್ತು-ಕೊಂಡ. ಪ್ರೀತಿ, ಇತ್ಯಾದಿಗಳೆಲ್ಲ ತಂತಾನೇ ಬಿದ್ದುಹೋದವು. ಹೀಗೆ ಕೈತಪ್ಪಿ ಹೋದ ಬದುಕನ್ನ ನೆನೆಯುತ್ತ ಮೂಲೆ ಹಿಡಿದ ಒಂದೊಂದೆ ಬಿಂಬಗಳು ಕಾಣತೊಡಗಿದವು, ಕಾಡತೊಡಗಿದವು. ಆ ಎಲ್ಲ ಬಿಂಬಗಳಡಿ 'ಅವನ'ಂಥವನ ನೆರಳು!

'ಎಲಾ ಗಂಡಸೇ!' ಒಳಗು ಬಂಡೆದ್ದಿತು. ನೋಯುತ್ತಲೆ ನೊಂದಿತು. ಕಾಲ್ತುಳಿತಕ್ಕೆ ಸಿಕ್ಕ ಹಾವು ಹೆಡೆ ಬೀಸಿದಂತೆ ಬಂಡಾಯ. ಮತ್ತೆಲ್ಲ, ಬರವಣಿಗೆಯ ಮೆರವಣಿಗೆ.

ಮೊದಲೊಂದಷ್ಟು ಮಂದಿ ಹೆದರಿಸಿದರು. ಆಮೇಲೆ ಹೆದರಿದರು. ಮತ್ತಷ್ಟು ಮಂದಿ ಗೊಣಗುತ್ತ, ಹಿಂದೆ ಹಿಂದೆ ನೂರಾಒಂದು ಮಾತಾಡಿದರು.

'ಕಾವಲುಗಾರ ಪಡೆ', ಎಲ್ಲ ಬಿಟ್ಟವಳು ಅಂದು ಮುಖ ತಿರುಗಿಸಿತು.

~

ಯಾಕೋ ಬರಿ ಮಾತು ಮಾತು ಬೇಸರ ತರಿಸಿತು. ನ್ಯಾಯವಿಲ್ಲದಿದ್ದರೂ ಪರಿಹಾರ ಸಿಗಬೇಡವೆ? ಹಾಗಂದುಕೊಂಡೆ. ರಾತ್ರಿ ಅಮ್ಮನ ಬಳಿ ಕಾನೂನು ಮಾತಾಡಿದೆ.

ಮಾರನೇ ದಿನ ಅವಳು ಫೋನು ಮಾಡಿದಳು. 'ಬೆಳಗಿನ ಜಾವ ಕನಸಲ್ಲಿ ನಿನ್ನ ಹೆಣ ಬಿದ್ದಿತ್ತು ಕಣೇ' ಅಂದಳು...

~

ಇಲ್ಲ... ಇನ್ನೂ ಎಲ್ಲವೂ ಮುಗಿದುಹೋಗಿಲ್ಲ.
ಹೇಳಲಿಕ್ಕಿನ್ನೂ ಸಾಕಷ್ಟು ಬಾಕಿಯಿದೆ.....

ವಂದೇ,
ಚೇತನಾ ತೀರ್ಥಹಳ್ಳಿ



# ಕಂಬನಿಯಲ್ಲಿ ನಿಮ್ಮದೆಷ್ಟು ನಮ್ಮದೆಷ್ಟು?

ಕವಿಯ ಕಂಬನಿಯಲ್ಲಿ ಕವಿಯದ್ದೆಷ್ಟು ಪರರದ್ದೆಷ್ಟು ಎಂದು ಲೆಕ್ಕ ಹಾಕುತ್ತ ಕೂರುವವನು ಒಳ್ಳೆಯ ವಿಮರ್ಶಕನೂ ಅಲ್ಲ, ಓದುಗನೂ ಆಗಲಾರ ಎಂಬ ನಂಬಿಕೆಯನ್ನು ಬಲಗೊಳಿಸಿದ್ದು ಚೇತನಾ ತೀರ್ಥಹಳ್ಳಿ ಅವರ 'ಭಾಮಿನಿ ಷಟ್ಪದಿ'. ಒಂದು ಕೃತಿ ಒಬ್ಬ ಓದುಗನನ್ನು ಎಷ್ಟರ ಮಟ್ಟಿಗೆ ಒಳಗೊಳ್ಳುತ್ತದೆ ಹಾಗೂ ಅವನ ಪಾಲಿಗೆ ಎಷ್ಟರ ಮಟ್ಟಿಗೆ ತೆರೆದುಕೊಳ್ಳುತ್ತದೆ ಅನ್ನುವುದು ಆಯಾ ಓದುಗನ ಅನುಭವ, ಆರ್ದ್ರತೆಗೆ ಸಂಬಂಧಿಸಿದ್ದು. ಹೀಗಾಗಿ ಪ್ರತಿಯೊಂದು ಕೃತಿಯೂ ಒಬ್ಬೊಬ್ಬನ ಪಾಲಿಗೂ ವಿಶಿಷ್ಟ, ವಿಭಿನ್ನ ಮತ್ತು ತನ್ನದೇ ಆದ ಅರ್ಥಗಳನ್ನು ಹೊರಡಿಸುತ್ತಾ ಹೋಗುತ್ತದೆ. ಅದು ಇರಬೇಕಾದದ್ದೂ ಹಾಗೆಯೇ.

ಇಂಗ್ಲಿಷಿನಲ್ಲಿ compassion ಎಂಬ ಪದವಿದೆ. ಕನ್ನಡದಲ್ಲಿ ಅದಕ್ಕೆ ಸಮಾನಾರ್ಥಕ ಪದ ಸಹಾನುಭೂತಿ. ಅದನ್ನು ನಾವು ಅನುಕಂಪ ಅನ್ನುವ ಅರ್ಥದಲ್ಲಿ ಬಳಸುತ್ತಿದ್ದರೂ ಅದರ ಮೂಲ ಅರ್ಥ ಸಹ–ಅನುಭೂತಿ. ಇಂಗ್ಲಿಷಿನಲ್ಲೂ ಅದೇ ಅರ್ಥ: com-passion. ಇನ್ನೊಬ್ಬರ ಭಾವನೆಯಲ್ಲಿ ಭಾಗಿಯಾಗುವುದು. ಬೇಡನ ಬಾಣಕ್ಕೆ ಪ್ರಾಣ ಕಳೆದುಕೊಂಡ ಕಾಮಮೋಹಿತ ಕ್ರೌಂಚದ ಸಾವಿಗೆ ಜೊತೆಗಾತಿ ಕ್ರೌಂಚ ಕಣ್ಣೀರಿಡುತ್ತಿದ್ದಾಗ ವಾಲ್ಮೀಕಿ ಅನುಭವಿಸಿದ್ದು ಅದನ್ನೇ ಇರಬೇಕು; ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀ ಸಮಾಃ, ಯತ್ಕ್ರೌಂಚ ಮಿಥುನಾದೇಕಮವಧೀಃ ಕಾಮಮೋಹಿತಮ್. ಆ ಕ್ಷಣದ ಕೋಪ, ನೋವು, ದುಃಖ ಎಲ್ಲವೂ ಒಂದೇ ಮಾತಲ್ಲಿ ಹೊರಹೊಮ್ಮಿದ್ದು ಹಾಗೆ.

ತೀವ್ರತೆಯೇ ಬರಹಗಾರನ ಶಕ್ತಿ. ಅನುಭವಕ್ಕೆ ಬಂದದ್ದು ಮಾತುಗಳಲ್ಲಿ ಸೋರಿಹೋಗದ ಹಾಗೆ ದಾಟಿಸುವುದು ಸಾಧ್ಯವಾಗಲಿ ಎಂಬ ಆಶೆಯಿಂದಲೇ ಚೇತನಾ ತೀರ್ಥಹಳ್ಳಿ ಬರೆ–ಯುತ್ತಾರೆ. ತನಗನ್ನಿಸಿದ್ದನ್ನು ಹೇಳುವುದಕ್ಕೆ ತನ್ನದೇ ಆದ ನಿರೂಪಣಾ ಶೈಲಿಯನ್ನೂ ಕಂಡುಕೊಂಡಿದ್ದಾರೆ. ಅವರು ಆಡುತ್ತಿರುವ ಮಾತುಗಳಲ್ಲಿರುವ ಪ್ರೀತಿ, ಆಕ್ರೋಶ ಮತ್ತು ತ್ಯಕ್ತಭಾವ ತನಗೆ ಬೇಕಾದಂಥ ಅಭಿವ್ಯಕ್ತಿ ಕ್ರಮವನ್ನು ತಾನಾಗೇ ಹುಡುಕಿಕೊಂಡಂತಿದೆ. ಈ ಸಾಲುಗಳನ್ನೊಮ್ಮೆ ಓದಿ:

> ಮತ್ತೆ ಮತ್ತೆ ಕ್ಲಿಪ್ಪು ಟಪಟಪಾರೆನಿಸಿ ಜುಟ್ಟು ಬಿಗಿದಳು.
>
> ಅವಳಿನ್ನೂ ಈಗ ತಾನೆ ಹದಿಹರೆಯ ಕಳೆದವಳಂತೆ ಇದ್ದಾಳೆ. ಪ್ರಪೋಸು ಮಾಡಬರುವ ಹುಡುಗರಿಗೆ 'ಎಂಟು ವರ್ಷದ ಮಗು ಫ್ರೀ' ಅಂದು ಕೆಣಕುತ್ತಾ ಬೇಸ್ತುಬೀಳಿಸುತ್ತಾಳೆ. ಹೀಗೇ ಅಲೆಯುತ್ತಿರುತ್ತಾಳೆ ದಿನವೆಲ್ಲ. ದುಡಿತ ಮುಗಿದರೂ ಮನೆ ಸೇರದೆ, ನಾಟಕ, ಉಪನ್ಯಾಸ, ಸೆಮಿನಾರುಗಳಲ್ಲಿ ಕಳೆದುಹೋಗುತ್ತಾಳೆ. ಅವಳ ವ್ಯಾನಿಟಿ ಬ್ಯಾಗಲ್ಲಿ ಸೇಫ್ಟಿಪಿನ್ನಿನ ಗೊಂಚಲು. ಕಾಲಿಗೆ ಬೆಲ್ಟಿಲ್ಲದ ಚಪ್ಪಲಿ. ಒಂಟಿಹೆಣ್ಣಿನ 'ಬೆಲೆ' ಗೊತ್ತಿದೆ ಅವಳಿಗೆ.
>
> ಅವಳ ರಾತ್ರಿಗಳೆಲ್ಲ ಬಾಲ್ಕನಿಗಳಲ್ಲಿ ಕುಂತೇ ಕಳೆಯುತ್ತದೆ.

ಕವಿ ಸುಡುಸುಡುವ ಹೋಳಿಗೆಯ ಹೆಂಚು ಇದ್ದ ಹಾಗೆ. ಅದು ತನ್ನನ್ನು ಬೆಂಕಿಗೆ ಒಡ್ಡಿ–ಕೊಂಡು ಕಾದು ಕೆಂಡವಾಗಿರುತ್ತದೆ. ಆದರೆ ಹೋಳಿಗೆಯನ್ನು ಎಷ್ಟು ಬೇಕೋ ಅಷ್ಟು ಸುಟ್ಟು, ಹದವಾಗಿಸಿ, ಸವಿಯಾಗಿಸಿ ನಮ್ಮ ಕೈಗಿಡುತ್ತದೆ, ಕೈಗೆ ನಾಲಗೆಗೆ ಹಿತವಾದ ಬಿಸುಪಷ್ಟೇ ತಾಕುವಂತೆ.

ಚೇತನಾ ಬರಹಗಳೂ ಹಾಗೆ ನಮ್ಮನ್ನು ಸುಡದಂತೆ, ಬಿಸುಪು ಆರದಂತೆ, ನಮ್ಮೊಳಗಿನ ಸುಡುಕೆಂಡ ನೆನಪಾಗುವಂತೆ, ಕೆಂಡದ ಹಾದಿಯಲ್ಲಿ ನಡೆದವರ ಬಗ್ಗೆ ಪ್ರೀತಿ ಮೂಡುವಂತೆ ಮಾಡುತ್ತವೆ.

^

ಅಂಕಣ ಬರಹಗಾರರ ಕಷ್ಟ ಸುಖ ಒಂದೆರಡಲ್ಲ. ಅನಿಸಿದ್ದು ಅಂಕಣದೊಳಗೆ ಪಡಿಮೂಡುವಂತೆ ಮಾಡುವುದು, ಆ ಕ್ಷಣದ ಭಾವವನ್ನು ಕವನಕ್ಕೆ ಒಗ್ಗಿಸಿದಷ್ಟೇ ಕಷ್ಟ. ಇಂಥದ್ದರಲ್ಲಿ ಪದಗಳನ್ನು ದುಂದುವೆಚ್ಚ ಮಾಡದ ಚೇತನಾ, ಸಂಭಾಷಣೆಯ ರೂಪದಲ್ಲಿ, ತನ್ನ ವಿಶಿಷ್ಟ ಲಹರಿಯಲ್ಲಿ, ಕಾವ್ಯದ ಸಾಲುಗಳೇನೋ ಅನ್ನಿಸುವಂತೆ ಹೇಳಿಬಿಡುತ್ತಾರೆ. ಹೀಗಾಗಿ ಅವರ ಸಾಲುಗಳಿಗೆ ಕವಿತೆಯ ಸಂದಿಗ್ಧತೆ ಪ್ರಾಪ್ತವಾಗಿದೆ.

> ತಂದೆ ಅವಮಾನಿಸಲಾರ ಮಗನನ್ನ, ಅವಮಾನಿಸಲಾರ ಹೆಂಡತಿಯನ್ನ.
>
> 'ಹಾದಿ ಬೀದಿಯ ಮಾತಿಗೆ ಮಮತೆ ನೊಂದಿತು'.

ಚೇತನಾರ 'ಬಿಸಾಡು ಆ ಹಳೆಯ ನೋವುಗಳನ್ನು..' ಓದುತ್ತಿದ್ದಂತೆ ಎಂದೋ ಓದಿದ ನ್ಯೂಜಿಲೆಂಡಿನ ಬರಹಗಾತಿ ಕೆಥರೀನ್ ಮ್ಯಾನ್ಸ್‌ಫೀಲ್ಡ್ ಬದುಕು ಬರಹದ ನೆನಪು. ಡಿ ಎಚ್ ಲಾರೆನ್ಸ್ ಸಹವರ್ತಿಯಾಗಿದ್ದ ಕೆಥರೀನ್, ಗಾಢ ಏಕಾಂತ, ಕಾಯಿಲೆ, ಮಾತ್ಸರ್ಯದ ನಡುವೆ ಬದುಕಿದವಳು. ಅವಳ ಬರಹಗಳಲ್ಲಿ ಮಧ್ಯಮ ವರ್ಗದ ವೈವಾಹಿಕ ಮತ್ತು ಸಾಂಸಾರಿಕ ಬದುಕಿನ ದುಗುಡಗಳು ಪ್ರಜ್ಞಾಪ್ರವಾಹವಾಗಿ ಹರಿದಿವೆ. ತನ್ನ ಪ್ರಜ್ಞೆಯ ಒಂದು ಭಾಗವಾಗಿರುವ ದುಮ್ಮಾನಗಳನ್ನು ಚೇತನಾ ದಾಟಿಸುವ ಕ್ರಮದಲ್ಲೇ ನಳನಳಿಸುವ ಹೊಸತನವಿದೆ. ಆದರೆ, ಶೈಲಿಯನ್ನು ಮೆಚ್ಚಿಕೊಳ್ಳುವ ಭರದಲ್ಲಿ ಸಂವೇದನೆಯನ್ನು ಕಡೆಗಣಿಸುವ ಅಪಾಯವೂ ಇದೆ ಎನ್ನುವುದನ್ನು ಮರೆಯಬಾರದು.

ಏಕಕಾಲಕ್ಕೇ 'ಭಾಮಿನಿ ಷಟ್ಪದಿ' ಮೀರಲಾಗದವರ ಕಷ್ಟವೂ, ಮೀರಬೇಕು ಅಂದುಕೊಂಡವರ ಭರವಸೆಯೂ ಆಗಿ ನಮ್ಮನ್ನು ತಲುಪುತ್ತದೆ. ಅನುದಿನದ ಅಂತರಗಂಗೆಯನ್ನು ತಮ್ಮ ತೀವ್ರ ಜೀವನೋತ್ಸಾಹ, ಛಲ ಮತ್ತು ಶ್ರಮಜೀವನದ ಮೂಲಕ ದಾಟಲು ಹೊರಟವರನ್ನು ಹುರಿದುಂಬಿಸುತ್ತದೆ. ಸೀತೆ, ರಾಧೆ, ಯಶೋಧರೆ, ಅಹಲ್ಯೆಯರ ಕುರಿತು ಬರೆಯುವ ಹೊತ್ತಿಗೆ ಚೇತನಾರಲ್ಲಿ ಕಾಣಿಸುವ ಗೊಂದಲ ಕೂಡ ಸಹಜವಾದದ್ದೇ. ಅದನ್ನು ತನ್ನ

ನಿಲುವು ಎಂಬಂತೆ ಅವರು ದಾಖಲಿಸುವುದಿಲ್ಲ. ಅದು ಕೂಡ ಜಂಗಮ ಭಾವವಾಗಿಯೇ ಹೊರಹೊಮ್ಮುತ್ತದೆ. ಹೀಗಾಗಿ ಗೊತ್ತಿರುವ ಗೌತಮನ ಕತೆಯಲ್ಲೂ ಚೇತನಾ ಚಿಂತನೆ ಹಣಿಕಿಹಾಕುತ್ತವೆ:

> ಇಂದ್ರ ಮೈತುಂಬ ಕಣ್ಣು ಹೊತ್ತು ಕುರುಡನಂತೆ ಸ್ವರ್ಗದ ಹಾದಿ ಹಿಡಿದ. ಅಹಲ್ಯೆ ಮೈತುಂಬ ಸೆರಗು ಹೊದ್ದು ಗಂಡನೆದುರು ಬೆತ್ತಲಾದಳು'.

ದ್ರೌಪತಿಯ ಅಂತರಂಗವನ್ನು ಬಿಚ್ಚಿಡುವ ಹೊತ್ತಿಗೆ ಚೇತನಾ ಮತ್ತಷ್ಟು ಆಳಕ್ಕಿಳಿಯುತ್ತಾರೆ.

> ಐವರಿಗೂ ಪರ ಸತಿಯಾಗಿಯೇ ದೂರವಾಗುತ್ತಾ, ಪರಿಪೂರ್ಣ ಪ್ರೇಮಕ್ಕಾಗಿ ಹಂಬಲಿಸುತ್ತಾ, ನಡುನಡುವೆ ಕರ್ಣನ ಕೈ ಹಿಡಿದಿದ್ದರೆ ಅಂದುಕೊಳ್ಳುತ್ತಾ ಪತಿವ್ರತೆಯ ಪಟ್ಟ ನಿಭಾಯಿಸುತ್ತಾ ಉಳಿದುಹೋದಳು.

ಇಂಥ ಸೂಕ್ಷ್ಮ ಗ್ರಹಿಕೆಗಳಲ್ಲಿ ಚೇತನಾ ಮುಖಾಮುಖಿಯಾಗುತ್ತಾರೆ. ಅಂಕಣ ಬರಹದ ಮಿತಿಗಳನ್ನು ಮೀರುತ್ತಾರೆ. ಅಲ್ಲಲ್ಲಿ ಕವಿಯಾಗುತ್ತಾರೆ. ಮಗುವಿನ ಹುಟ್ಟಿಗೆ ನಾವೊಂದು 'ಪಿಳ್ಳೆ' ನೆವ ಮಾತ್ರ ಎಂದು ಬರೆದು ಬೆಚ್ಚಿಬೀಳಿಸುತ್ತಾರೆ. 'ಪಿಳ್ಳೆ' ಅಂದರೂ ಮಗುವೇ.

ಒಮ್ಮೆ ಇಡಿಯಾಗಿ ಓದಿ, ಆಗೊಮ್ಮೆ ಈಗೊಮ್ಮೆ ಒಂದೊಂದೇ ಬರಹವನ್ನು ಓದುತ್ತಾ ನಮ್ಮ ಅನುಭವದ ಪರಿಧಿಯನ್ನು ವಿಸ್ತರಿಸಿಕೊಳ್ಳಬಹುದಾದ ಅನೇಕ ಬರಹಗಳು ಇಲ್ಲಿವೆ. ಇವನ್ನು ಅಂಕಣಬರಹಗಳೆಂದೋ, ಪ್ರಬಂಧಗಳೆಂದೋ, ಲಹರಿಗಳೆಂದೋ ಕರೆದರೆ ಈ ಬರಹಕ್ಕಿರುವ ಬಹುಮುಖೀ ಸಾಧ್ಯತೆಗಳನ್ನು ಸೀಮಿತಗೊಳಿಸಿದಂತಾಗುತ್ತದೆ.

ಷಟ್ಪದಿಯ ಪಂಜರದಿಂದ ಭಾಮಿನಿ ಆಚೆ ಬಂದಿದ್ದಾಳೆ; ಆ ನೆನಪೇ ಈಗ ಪಂಜರದಂತೆ ಕಾಣಿಸುತ್ತಿದೆ. ಬಿಡುಗಡೆಗಾಗಿ ಕಾತರಿಸುವ ವಿಷಣ್ಣ ಮನಸ್ಸಿನಿಗೆ ಅಕ್ಷರವೇ ಮುದ್ದಿಸುವ ತುಟಿಯಾಗುವ ಪವಾಡಕ್ಕೆ ಕಣ್ತುಂಬುತ್ತಿದೆ.

–ಜೋಗಿ



# ಪರಿವಿಡಿ

ಹೂತಿಟ್ಟ ಹೆಣಗಳನ್ನು ಹೊರಗೆಳೆದು/15 ಶುರುವೇ ಆಗದ ಪ್ರೇಮ ಕಥೆ/16 ಮಂದಿಯ ಮಧ್ಯೆ ಹೀಗೊಂದು ದಾಂಪತ್ಯ ಕಥಾ/17 ಕೊನೆಗೂ ಒಂದು ಸೀರೆ/18 ಧರ್ಮೇಚ ಅರ್ಥೇಚ ಕಾಮೇಚ ಮೋಸು/20 ನಾಲ್ಕು ಮಾತಿಗೂ ಮಕ್ಕಳು ಹುಟ್ಟೋಕೂ/20 ಮತ್ತೆಂದೂ ಹುಟ್ಟದ ಮಗಳು/22 ಅಮ್ಮ ಆಗ್ಲಿಕ್ಕೆ ಹೆರಲೇಬೇಕಾ/23 ಒಳಗಿಲ್ಲ ಎನುವಾಗ/24 ಮಗು/26 ನೋವಿನ ಮುಂದೆ ನಿರಂತರ ಯುದ್ಧ/27 ವೇದವ್ಯಾಸ ಮಗನಲ್ಲವೇನೆ?/28 ಕೈಲಾಗದವನ ಪೌರುಷ!/29 ಚಂದ್ರವಂಶದ ದೀಪದಡಿ/31 ದ್ರೌಪದಿಯ ಅಂತರಂಗ/32 ಸೀತೆಯೆಂಬ ಬದನೆಕಾಯಿ ಪುರಾಣ/34 ಅಹಲ್ಯೆಯೆಂಬ ಆತ್ಮ ವಂಚನೆ/ 35 ರಾಧೆಯ ಪಾಲು/37 ಯಶೋಧರೆಯ ಪ್ರಶ್ನೆಗಳು/38 ಬಿಲ್ವ ಮಂಗಳನ ವೇಶ್ಯೆ/ 39 ಪುಟ್ಟ ಹುಡುಗಿ ಭಾಗೀರಥಿ/41 ಕವಿತೆಗಳಲ್ಲ ಇವು ಸಖಿಯರೇ/42 ಕಾಯುತ್ತಲೇ ಇದ್ದ ಭೀಷ್ಮ/43 ಗಂಡಸಾಗಲು ಪರದಾಡಿದವನ ಮರೆಯಲಾಗುತ್ತಿಲ್ಲ/44 ಎಂಥಾ ಉದಾರಿ ಗಂಡ/45 ಗಂಡಸಿನ ಪ್ರೀತಿ ಅಂದ್ರೆ ಇದೇನಾ?/46 ಅಂವ ಬೇಕು ನಂಗೆ!/47 ಹೀಗೂ ಒಂದು ನಿವೇದನೆ/48 ಬಿಸಾಡು ಆ ಹಳೆಯ ನೋವುಗಳನ್ನೂ/50 ಎರಡು ಜಡೆ ಒಂದಾಗದು/51 ಎಂದೆಂದೂ ಮುಗಿಯದ ಕಥೆ/53 ಆ ಮಾತುಗಳಲ್ಯಾಕೋ ಅಮ್ಮ ಸಿಗಲೇ ಇಲ್ಲ/55 ಅಣಕಿಸುತಿದೆ ಸಹಾಯವಾಣಿ ನಂಬರು/56 ಅಪ್ಪನ ದಾರಿ ಕಾಯುತ್ತ/58 ಸಂಸಾರವೆಂಬ ಹೆಣ/60 ಅಂವ ಕೊಟ್ಟ ಕಾರಣಗಳು/63 ನಾನೂ ಗಿರ ಗಿರ ಗಿರ ಗಿರ/64 ಕಳಸಗನ್ನಡಿ ಹಿಡಿದು ನಿಂತವಳು/65 ಹೆಣ್ಣು ಜನ್ಮ/67 ಚುಕ್ಕಿ ಚಿತ್ತಾರವಾಗೋದು ಹೀಗೆ/68 ಅವಳ ಹೆಸರಲ್ಲೀಗ ಕನಸುಗಳಿಲ್ಲ/69 ಅಹಂಕಾರಗಳ ಎದುರು ಒಂದು ಗೆಲುವು/71 ಎದುರು ಸಾಲಿನ ಆಂಟಿಯರು/72 ಅವಳಿಗೊಂದು ಮದುವೆಯಾಯಿತು/75 ಸಾಯುವ ತೆವಲಿನ ಹೆಂಗಸರು/77 ಬೇತಾಳ ಪ್ರಶ್ನೆ/78

# ಹೂತಿಟ್ಟ ಹೆಣಗಳನ್ನು ಹೊರಗೆಳೆದು...

“ಹೂತಿಟ್ಟ ಹೆಣಗಳನ್ನ ಹೊರಗೆಳೆದು ಅಳೋದು ಅಂದ್ರೆ ಇದೇ!” ಹರವಿಕೊಂಡ ಕಥೆಗಳನ್ನ ಕಂಡು ಗೆಳೆಯ ರೇಗಿದ, “ಯಾಕೇ ನೀನು ಹಿಂಗೆ?”

ನನ್ನಲ್ಲಿರುವ ಬಂಡವಾಳ ಅದೇ ಅಲ್ವೇ? ಹೊಟ್ಟೆ ಹೊರೆಯಲಿಕ್ಕೆ ಗೋರಿ ತೋಡುವ ಹೆಣ್ಮಕ್ಕಳು ಅದೆಷ್ಟಿಲ್ಲ? ಮತ್ತೆ ನಾನು ಗೋರಿಕಲ್ಲು ಬಗೆಯತೊಡಗಿದೆ. ಹಾಗೆ ನೋಡಿದರೆ, ಎದೆಎದೆ ಬಡಕೊಂಡು ರುಡಾಲಿ ಪೋಸು ಕೊಡುವಂಥದ್ದು ನನಗೇನೂ ಆಗಿರಲಿಲ್ಲ. ಬಹುತೇಕ ಗಂಡಸರ ಹಾಗೆ ಅಂವ ಕೂಡ ಕಂಡೆರಡು ಬೇಲಿ ಜಿಗಿದಿದ್ದ, ಸಿಕ್ಕಲ್ಲಿ ಕುಂತು ಉಂಡಿದ್ದ. ಮತ್ತೇನಿಲ್ಲ, ಅಪ್ಪ ಕೊಟ್ಟೊಂದು ಸರ, ಜೋಡಿ ಓಲೆ, ಮದುವೆ ಕಾಲದ್ದೊಂದೆರಡು ಬಳೆ ಎಲ್ಲೋ ಗಿರವಿ ಇಟ್ಟು ಕಳೆದಿದ್ದ, ಅಷ್ಟೇ.

ಜೊತೆಗೆ, ಎಲ್ಲ ಟೀವಿ ಸೀರಿಯಲ್ಲುಗಳ ಹಾಗೆ ಮನೆ ಸೇರಿದ ನಾದಿನಿ, ಬೆನ್ನಿಗೊಬ್ಬಳು ಅತ್ತೆ. ದಿನದಿನಾ ರಗಳೆ, ಜಗಳ, ರೋತೆ! ಎದೆಯಲ್ಲಿ ಹೂತಿರುವ ಈ ಕಥೆಗಳು ಶುದ್ಧ ಹಳಸಲು ಅನ್ನೋದು ನನಗೂ ಗೊತ್ತು. ಅಮ್ಮ, ಅಜ್ಜಿ, ಪಕ್ಕದ ಮನೆ ಆಂಟಿ... ಎಷ್ಟೋ ಜನರ ಕಣ್ಣಲ್ಲಿ ಹನಿಯಾಗಿ, ಗಂಟಲ ಬಿಗುವಾಗಿ, ಸೆರಗಿನ ತುದಿಯಾಗಿವೆ ಅನ್ನೋದೂ ಗೊತ್ತು. ಅಷ್ಟೇ ಅಲ್ಲ, ಈ ಎಲ್ಲ ಕಥೆಗಳು ಸತ್ತು ವರ್ಷಗಳೇ ಉರುಳಿಹೋಗಿವೆ ಕೂಡಾ.

ಆದರೂ, ಸೂತಕ ಮಾತ್ರ ಕಳೆದಿಲ್ಲ. ಊಹೂಂ... ನನಗೇ ಕಳಕೊಳ್ಳುವ ಮನಸಿಲ್ಲ!

ಮತ್ತೆ ಗೆಳೆಯ ಗಡ್ಡ ನೀವುತ್ತ ಕವಿತೆ ಅಂದ,

"ಹೆಣ ಸಿಂಗರಿಸೋದು ನಿಲ್ಲಿಸು.
ಪಿರಮಿಡ್ಡಿಂದ ಹೊರಗೆ ಬಾ.
ಕತ್ತಲಿದ್ದರೇನಂತೆ?
ಆಕಾಶ ನೋಡು!
ಎಷ್ಟೊಂದು ಚಿಕ್ಕೆಗಳು...
ನಡುವಲ್ಲಿ ಚಂದಿರ!"

ತಲೆ ಎತ್ತಿದೆ ನಾನೂ. ಅರೆ! ಹೌದಲ್ಲ? ಬೆಳ್ಳನೆ ನಗು ಚಂದ್ರಮ. ಮಿಣಮಿಣಕಿ ತಾರೆಗಳು ಹೇಗೆಲ್ಲ ಮಿಟುಕುತ್ತಿವೆ!

ನೆನಪಿನ ಮಮ್ಮಿ ಬೂದಿಯಾಗಿರಲಿಲ್ಲ...

ಚಂದ್ರನಲ್ಲಿ ಇಂವ ಕಂಡ.
ಮತ್ತೆ, ಸುತ್ತಲೆಲ್ಲ ನನ್ನ ಸವತಿಯರು!



---

## ಶುರುವೇ ಆಗದ ಪ್ರೇಮ ಕಥೆ

ಸುಂದರಿ...

ಅವಳ ಸವಿಗೆ ದುಂಬಿ ದಂಡು. ದಂಡಿನಲ್ಲೊಬ್ಬ ಪ್ರೇಮ ಪೂಜಾರಿ. ಹಗಲಿರುಳೂ ಅವಳದೇ ಸುತ್ತಮುತ್ತ. ಆದರವನ ಪ್ರೇಮಕ್ಕೆ ಬೆಲೆಯೇ ಇಲ್ಲ ಅವಳಲ್ಲಿ. ಅಸಲು, ಪ್ರೀತಿ ಅಂದರೇನೆಂಬುದರ ಅರಿವೇ ಇಲ್ಲ ಅವಳಿಗೆ. ಒಳಗಿಂದೊಳಗೆ ಎಂಥದೋ ತಿರಸ್ಕಾರ. ಅವನ ಬಳಿ ಬೈಕೂ ಇಲ್ಲವಲ್ಲ!

ಹೀಗಿರುವಾಗೊಮ್ಮೆ ಸುಂದರಿಯ ಮದುವೆ. ಈಗವಳು ಗಂಡನ ಹಿಂದೆಮುಂದೆ. ಅವನೋ!? ಒಣ ಕಾಗದದ ಚೂರುಗಳ ಹಿಂದೆಹಿಂದೆ... ಬರಡು ಬೆಂಚು, ಟೇಬಲ್ಲುಗಳನಪ್ಪಿ ಸಪಾಟು ಮಲಗುವನಾತ, ದುಡ್ಡುಬಾಕ!

ರಂಭೆ ರೂಪದವಳ ಕಡೆಗಣ್ಣಲೂ ನೋಡದವನ ಅರಸಿಕತೆಗೆ ಮರಗುತ್ತಾಳವಳು. ಭಾವನೆಗಳೇ ಇಲ್ಲದ ರಾತ್ರಿಗಳಲ್ಲಿ ರಬ್ಬರಿನಂತಾಗುತ್ತಾಳೆ, ಕಚ್ಚಿಕೋ ಅನ್ನುತ್ತಾಳೆ. ಹೆಣದಂತೆ ಮಲಗುತ್ತಾಳೆ.



ಅವನ ನೆನಪಾಗುತ್ತದೆ. ಅವನ ಪ್ರೀತಿಯ ಹೊಳಪು ಕಣ್ ಚುಚ್ಚುತ್ತದೆ. ಮಗ್ಗುಲಾಗಿ ಮುಲುಗುತ್ತಾಳೆ.

"ಹುಡುಗಾ! ನನ್ನ ಜೀವನವಿಂದು ನೀನಿತ್ತ ಶಾಪ!!" ಬಿಕ್ಕುತ್ತಾಳೆ.

ಅಲ್ಲೆಲ್ಲೋ ಆ ಹುಡುಗನ ಹೃದಯ ಹಿಂಡುತ್ತಿರುತ್ತದೆ. ಶುರುವೇ ಆಗದ ಪ್ರೇಮಗಾಥೆ ಮುಗಿದೂ ಹೋಗುತ್ತದೆ.



---

## ಮಂದಿಯ ಮಧ್ಯೆ ಹೀಗೊಂದು ದಾಂಪತ್ಯ ಕಥಾ

"ಮಳೇಲಿ ಅಳು ಕಾಣೋಲ್ಲ. ಅತ್ತು ಬಿಡು..."

ಅಂವ ಛಕ್ಕನೆ ತಿರುಗಿದ. "ಚಾಪ್ಲಿನ್ನನ ಡೈಲಾಗು ಕದೀಬೇಡ" ಅಂತ ಕೂಗಬೇಕನಿಸಿತು. ಇಲ್ಲ. ಅವಳೆದುರು ಅವನ ಬಾಯಿ ಹೊರಡೋಲ್ಲ. ಅವಳ ಹತ್ರ ಅಂಥದೇನಿತ್ತೋ? ಅಂವ ಪೂರಾ ಲಾಚಾರಾಗಿಹೋಗಿದ್ದ. ಚಾಲಾಕಿ ಹುಡುಗಿ. ಒಳ್ಳೆ ಏಣಿಯನ್ನೆ ಹುಡುಕಿದ್ದಳು!

"ನಂಗೊತ್ತು, ನನ್ನ ಬಿಟ್ಟು ನೀ ಸುಖವಾಗಿರೋಲ್ಲ ಅಂತ. ಆದ್ರೆ ನನ್ ಮೇಲೆ ನಿಂಗೆ ಗೌರವ ಇಲ್ಲ. ನಾನು ತೀರ ಸ್ವಾಭಿಮಾನಿ. ಅವಮಾನ ಸಹಿಸ್ಕೊಂಡು ಇರಲಾರೆ..."

"ಸುಳ್ ಹೇಳ್ತಿದೀ ನೀನು. ನಾ ಯಾವತ್ತೂ ಹಾಗೆ ಮಾಡಿಲ್ಲ!"

"ಹೌದೋ! ಸಧ್ಯಕ್ಕೆ ನಾ ಬಾಯಿ ಮುಚ್ಲೇಬೇಕು. ನೀ ಹೇಳಿದ ಮಾತಿಗೆ ನನ್ ಕಿವಿಗಳ್ನ ಬಿಟ್ರೆ ಬೇರೆ ಸಾಕ್ಷಿ ಇಲ್ಲ ನೋಡು!"

"ಆಹಾ! ಒಳ್ಳೆ ಮಾತುಗಾತಿ!!"

ಅವಳು ಕಿನಾರೆಯಲ್ಲಿ ನಿಂತು ಕೂಗ್ತಲೇ ಇದ್ದಳು. ಅಂವ ಒದ್ದೆ ಮರಳಲ್ಲಿ ಕಾಲೂರುತ್ತ ಹೊರಟೇ ಹೋದ. ಅಂದಿಗೆ ಅವರ ಆರು ವರ್ಷಗಳ ಬಂಧ ಕಳಚಿಬಿದ್ದಿತ್ತು. ಅದನ್ನ ಅವರು 'ಪ್ರೀತಿ' ಅಂದ್ಕೊಂಡಿದ್ದರು.

ಅಂವ ರಾತ್ರಿ ಪೂರಾ ಬಾರಲ್ಲಿ ಕುಂತು, "ನೀನೇ ಸಾಕಿದಾ ಗಿಣೀ..." ಕೇಳಿ ಕೇಳಿ ಅತ್ತ.
ಆಗ, ಮಳೆ ಬರ್ತಿರಲಿಲ್ಲ.

~

ಶುರುವಲ್ಲಿ ಅವಳು ಅವನನ್ನ ಪ್ರೀತಿಸಿದ್ದೇನೋ ಹೌದು. ಒಳ್ಳೆ ಕಥೆಗಾತಿ. ಅಂವ ಕೂಡ ಚೆನ್ನಾಗಿ ಬಳಸಿಕೊಂಡ... ಅವಳ ಕಥೆಗಳನ್ನ.

ಮಹತ್ವಾಕಾಂಕ್ಷೆಯ ಹುಡುಗ. ಪೇಪರ್ರು, ಪಾಲಿಟಿಕ್ಸು, ಪಿಚ್ಚರ್ರು– ಜನರ ಕಣ್ ಕುಕ್ಕಲಿಕ್ಕೆ ಇವು ಮೂರೇ ಹೆದ್ದಾರಿಗಳು ಅಂದ್ಕೊಂಡಹಾಗಿತ್ತು ಅವ.

ಹುಡುಗಿ, ಹೆಗಲು ಕೊಟ್ಟಳು. ಇನ್ನೂ ಏನೇನೋ... ಕೊಟ್ಟಳು!

“ಎಲ್ಲ ಯಶಸ್ವಿ ಪುರುಷನ ಹಿಂದೆ...” ಜನ ಆಡಿಕೊಂಡರು.
ಹೊಟ್ಟೆಯಲ್ಲೇನೋ ಉಪ್ಪು ಖಾರ! ಎಲ್ಲ ಮುಸುಕಿನ ಗುದ್ದು.

ಹುಡುಗಿ ಬಲಿಯತೊಡಗಿದ್ದಳು. ಅವನ ದಗಲಬಾಜಿತನ ಕಣ್ಣಿಗೆ ರಾಚುತ್ತಿತ್ತು. ಪ್ರೀತಿ ಎಲ್ಲೋ ತೆಳುವಾಗ್ತಿದೆ ಅನಿಸತೊಡಗಿತು. ಪೂರ್ತಿ ಕಳಕೊಳ್ಳುವ ಮುಂಚೆ ಹೊರಬಿದ್ದರೆ ಸಾಕು ಅಂದುಕೊಂಡಳು. ಆ ಹೊತ್ತಿಗೆ ಅವಳ ಹೆಸರು, ಅವನನ್ನೂ ಮೀರಿ ಬೆಳೆಯುತ್ತಿತ್ತು.

ಅದೊಂದು ದಿನ, ಎಂಥದೋ ವ್ಯವಹಾರದ ಮಾತು. “ನೀ ಹೋದರೆ ಕೆಲಸ ಆಗೋದು ಖಂಡಿತ. ನಿನ್ನ ಮುಖಕ್ಕೇ ಜನ ಬೀಳ್ತಾರೆ” ಅವನಂದ.

ಹಾಗೆಲ್ಲ ಸರಳವಾಗಿರಲಿಲ್ಲ ಅವನ ಮಾತು. ಕಣ್ಣಲ್ಲೇನೋ ಅಸಹ್ಯಕರ ಸನ್ನೆ, ದನಿಯಲ್ಲಿ ಕುಹಕ.

“ಊರಿಗೆ ಹೋಗಿ ಬರ್ತೀನಿ” ಅಂದವಳೇ ಬ್ಯಾಗಿಗೆ ಬಟ್ಟೆ ತುಂಬತೊಡಗಿದಳು. ನಾಲ್ಕು ತಿಂಗಳು ಪೂರಾ ಕಡಲ ಹೊಯ್ಗೆಯಲ್ಲಿ ಆಡುತ್ತ ಉಳಿದುಬಿಟ್ಟಳು.
‘ನಿನ್ನ ಮುಖಕ್ಕೇ...’ ನೆನಪಾದಾಗಲೆಲ್ಲ ಕಪ್ಪೆಗೂಡು ಕೆಡವಿ ನಕ್ಕಳು.

~

ಇವಳ ಪಾಲಿನ ಕಥೆ ಕೇಳಿದ ಮಂದಿ, “ಅಯ್ಯೋ! ಪಾಪ” ಅಂದರು.
ಅವನ ಗೋಳು ಕೇಳಿದವರು, ಅವಳನ್ನ ಬಯ್ದುಕೊಂಡರು!



# ಕೊನೆಗೂ ಒಂದು ಸೀರೆ!

ಎಷ್ಟು ಸಂಭಾಳಿಸಿದರೂ ಜಾರುತ್ತ ಕಾಡ್ತಿದ್ದ ಸೀರೆ ಮೇಲೆ ರೇಗಿ ಹೋಗಿತ್ತು.

ಅದೂ ಸಾವಿಗೆ ಸಾಥ್ ನೀಡ್ತಿಲ್ಲ!

“ಸಾವಿನ ಮಾತ್ಯಾಕೇ ಆಡ್ತೀ?” ಗೆಳತಿ ಕೇಳಿದ್ದಳು.

ನನ್ನಲ್ಲಿ ಅಂಥದ್ದೇನು ಅರೆ ಆಗಿರೋದು? ಹಾಳಾದವ! ಯಾರದೋ ಪಲ್ಲು....



ಫ್ಯಾನಿಗೆ ಸೀರೆ ಕಟ್ಟಲು ಹೋಗಿ ಆಯ ತಪ್ಪಿದಳು. ಮಂಚದ ಮೇಲೆ ಪೇರಿಸಿಟ್ಟಿದ್ದ ಖುರ್ಚಿಗಳು ಧುಡುಮ್ಮನೆ ಉರುಳಿದವು.

“ಅಂವ ಆ ಭೋಸುಡಿಯನ್ನ ಮದುವೆಯೊಂದು ಆಗಬೇಕಿತ್ತು... ಆಮೇಲೆ ತೋರಿಸ್ತಿದ್ದೆ!!” ಸುಮ್ಮಸುಮ್ಮನೆ ಅವಡುಗಚ್ಚಿದಳು.

ಸರೀ... ಯಾರನ್ನ? ಓ ಅವತ್ತು ಫೋನಲ್ಲಿ ನಕ್ಕಿದ್ದಳಲ್ಲ, ಅವಳನ್ನ? ಗಂಡುಡುಗೆಯ ಸ್ಕೂಟಿ ಹುಡುಗಿ, ಇವಳನ್ನ? ಅವಳ ವೈಯ್ಯಾರಿ ಅಮ್ಮ ಡುಮ್ಮಿ ಹೆಂಗಸನ್ನ? ಕಳ್ಳ! ಒಂದೇ ಮನೆಯ ಕನ್ನ ಎಷ್ಟು ದಿನ ಕೊರೆದಾನು?

ಅಲಮಾರಿಯ ಸೀರೆಗಳೆಲ್ಲ ರಾಶಿ ಬಿದ್ದವು. ನಾಲಾಯಕ್ಕು ಗಂಡು, ಒಂದು ಕರ್ಚೀಫಾದರೂ ಕೊಡಿಸಿದ್ದಿದ್ದರೆ... ಎಲ್ಲ ತವರಿನಿಂದ ತಂದಿದ್ದು. ಅವೂ ಇವನ ಹಾಗೆ ಜಾರಲು ಕಲಿತಿದ್ದು ಯಾವಾಗ!?

ಹ್ಞ! ಕೊನೆಗೂ ಒಂದು ಸೀರೆ! ಕಟ್ಟುವ ಹೊತ್ತಿಗೆ ನೀರಾಗಿ ಇಳೀತಿದ್ದಳು. ಹಾಗೆ ಕಟ್ಟಿದ್ದ ಫ್ಯಾನನ್ನೇ ತಿರುಗಿಸಿ ಹಾಯಾದಳು. ಸ್ಯುಸೈಡ್ ನೋಟು ರೊಯ್ಯನೆ ಹಾರಿತು.

“ತಥ್! ಇದನ್ನೂ ‘ನನ್ನ ಕೊನೆಯ ಕಥೆ’ ಅಂತ ಕತೆ ಕಟ್ಟಿಯಾರು ಮತ್ತೆ!” ಪರಪರನೆ ಹರಿದು ಬಿಸಾಡಿದಳು.

ಮೇಲೇನೋ ಕಟ್ಟಿಯಾಯ್ತು, ಕೆಳಗೆ ಗಂಟು ಹಾಕೋದು ಹೇಗೆ?

“ಅವಳು ಫ್ರಿಜಿಡ್” ಅಂವ ಯಾರ ಹತ್ತಿರವೋ ‘ಪಾಪ’ ಆಗುತ್ತಿದ್ದ. ಕೊಂದೇ ಬಿಡಬೇಕನಿಸಿತ್ತು.

ಅರೆ! ಗಂಟು ಹಾಕೋದು ಹೇಗೆ?

ಅಮ್ಮನ ತಾಕೀತು, “ಸೆರಗಲ್ಲಿ ಗಂಟು ಹಾಕ್ಕೊಳೋದನ್ನ ಕಲಿ ಮೊದ್ಲು!”

ಅಂತೂ ಕುಣಿಕೆ ರೆಡಿ. ಅಂವ, ಅವಳು, ಮತ್ತೊಬ್ಬಳು, ಎಲ್ಲ ಸುತ್ತ ಸುತ್ತಿ ಸುತ್ತಿ ...

ಈಗ ಕುತ್ತಿಗೆ ಗಿರಿಯುತ್ತೆ, ಉಸಿರು ಕಟ್ಟುತ್ತೆ. ಕಣ್‌ಕತ್ತಲು. ಕೈ–ಕಾಲು ವಿಲವಿಲ... ನಾಲಿಗೆ ಹೊರಬರುವುದೇನೋ? ಪಿಚ್ಚರಲ್ಲಿ ತೋರಿಸುವ ಹಾಗೆ!

ಊಹೂಂ...
ಫ್ಯಾನಿಂದ ಸೀರೆ ಸರಕ್ಕನೆ ಕಳಚಿತ್ತು.
ಗಂಟು,
ನಿಂತಿರಲಿಲ್ಲ!
ಬಿಕ್ಕಿ ಬಿಕ್ಕಿ ನಕ್ಕಳು. ಎದೆ ಬಿರಿಯುತ್ತಿತ್ತು. ನಗು ನಡಗುತ್ತಿತ್ತು.



ಆಮೇಲೆ?

ಗೊತ್ತಿಲ್ಲ!

# ಧರ್ಮೇಚ ಅರ್ಥೇಚ ಕಾಮೇಚ ಪೋಸು!

ಅಲ್ಲಿ, ಆಲ್ಬಮ್ಮಿನ ಹಾಳೆಗಳಲ್ಲಿ ನೀನು ನಗುತ್ತಿದ್ದೀ.

ನನ್ನ ಹಣೆಗೆ ಸಿಂಧೂರ, ಕೊರಳಿಗೆ ಹಾರ. "ಬಲೀ ಕಾ ಬಕ್ರಾ" ಅಂದರೆ ಅದೇ ಅಂತ ಈಗ ಹೊಳೆಯುತ್ತಿದೆ ನನಗೆ! ಅಗೋ, ಅಲ್ಲಿ ಲಾಜಾ ಹೋಮಕ್ಕೆ ಅರಲು ಸುರಿಯುತ್ತಿದ್ದಾನೆ ಅಣ್ಣ.

ಈಗ ಇಲ್ಲಿ? ಉರಿದು ಬೂದಿ ಆಗಿದ್ದೇನೆ ನಾನು, ಅಸ್ತಿತ್ವವೆ ಇಲ್ಲದಂತೆ... ಎದೆ ತುಂಬ ಪ್ರೇಮವಿದೆ ಬಾರೆ ಅಂದವ ನೀನು, ಹನಿಯನ್ನೂ ಕೊಡದೆ ಯಾಕೆ ಸತಾಯಿಸಿಬಿಟ್ಟೆ?

ನೀ ಸಿಗದೇ ಸಿಕ್ಕುಬಿಟ್ಟೆ ಅಂದುಕೊಂಡೆ. ಸಿಗುವ ಮೊದಲೇ ಕಳಕೊಂಡೂ ಬಿಟ್ಟೆ!

ಅದ್ಯಾರು ಹೇಳು, ಮಂಟಪದಲ್ಲಿ ಕಳಸಗನ್ನಡಿ ಹಿಡಿದು ನಿಂತವಳು? ಮನೆ ತುಂಬುವ ಮೊದಲೇ ಒಡೆದು ಹಾಕಿದ್ದಳಲ್ಲ! ಕುಣಿಯಲಾರದೇ ನೆಲ ಡೊಂಕು ಅನ್ನುತ್ತ ಮರಳಿ ಮರಳಿ ಬಂದವಳು?

ಅವಳೊಡೆದ ಕನ್ನಡಿ ಮತ್ತೂ ನೂರು ಚೂರಾಯಿತು. ಬಿಕ್ಕಲೂ ಆಗುತ್ತಿಲ್ಲ ನನಗೀಗ. ಒಡೆದುಹೋಗಿದೆ ಎದೆ ಕೂಡ. ನನ್ನದೇ ಪ್ರತಿಬಿಂಬಕ್ಕೆ ತಡಕಾಡುತ್ತಿದ್ದೇನೆ ನಾನು. ಎಷ್ಟೆಂದು ಚೂರುಗಳನಾಯ್ದು ತೇಪೆ ಹಾಕಲಿ ಹೇಳು?

ಮತ್ತೂ...

ಆಲ್ಬಮ್ಮಿನ ಹಾಳೆಗಳಲ್ಲಿ ಧರ್ಮೇ ಚ, ಅರ್ಥೇ ಚ, ಕಾಮೇ ಚ ಪೋಸು ಕೊಟ್ಟು ನಗುತ್ತಲೇ ಇದ್ದೀಯ ನೀನು!



# ನಾಲ್ಕು ಮಾತಿಗೂ ಮಕ್ಕಳು ಹುಟ್ಟೋಕೂ ಏನು ಸಂಬಂಧ?

ಘಮ್ಮನೆ ಮಲ್ಲಿಗೆ ಮಾಲೆ ನೇತುಬಿಟ್ಟ ಹೂಮಂಚ. ಗೋಡೆ ತುಂಬೆಲ್ಲ ಸೆಲ್ಲೋಟೇಪಲ್ಲಿ ಬಿಗಿದು ನಿಂತ ಕೆಂಪು ಗುಲಾಬಿಗಳು. ರೂಮಿನ ತುಂಬ ಪೋಲಿ ಪೋಲಿ ಸ್ಲೋಗನ್ ಹೊತ್ತ ಪೋಸ್ಟರುಗಳು. ಮಂಚದಡಿ ಎರಡು ಮೂರು ಅಲರಮ್ ಗಡಿಯಾರ. ಕಿಟಕಿ ಸಂದಿಯಲ್ಲಿ ಬಲೂನು. ಅಲ್ಲೆಲ್ಲೋ ಆಚೆ, ಪಟಾಕಿಗಳ ದಾಂಧಲೆ...

ಅವನ ಪಟಾಲಮ್ಮು ಸಾಕಷ್ಟು ಮೆಹನತ್ತು ಮಾಡಿಯೇ ಕೋಣೆ ಸಿಂಗರಿಸಿತ್ತು. ಅವನಕ್ಕ ತಂಗಿಯರು ಸುಮ್ಮಸುಮ್ಮನೆ ನಗುತ್ತ ನನ್ನನ್ನ ಅಲ್ಲಿ ಕೂರಿಸಿ, ಅಂವನ್ನೂ ಒಳದಬ್ಬಿ, ಬೀಡಾ ಬಾಯಿಗಿಡಿಸಿ ಫೋಟೋ ತೆಗೆದು ಹೋದರು.



ಅಂವ ಬಂದು ಕುಂತ. ಹೊರಗೆ ಗೆಳೆಯರು ಬೀರು ಕುಡಿದು ಮಸ್ತಿ ಏರಿ ಚೇರು ಮುರೀತಿದ್ದರೆ, ಇಂವ ಕುಂತಲ್ಲೆ ಏನೋ ಕಳಕೊಂಡವರ ಹಾಗೆ ಚಡಪಡಿಸ್ತಿದ್ದ.

ನಾನು ಕಾಯುತ್ತಿದ್ದೆ. ಎದೆ ತುಂಬ ಮಾತಿನ ನಕ್ಷತ್ರ ಹೊತ್ತು ಕುಳಿತಿದ್ದೆ. ಅಂವ, "ಈಚೆ ತಿರುಗೇ ಗೊಂಬೆ" ಅನ್ನಲಿ ಅಂತ ಕೆನ್ನೆ ಕೆಂಪು ಮಾಡ್ಕೊಂಡು ಕಾಯುತ್ತ ಕುಳಿತಿದ್ದೆ.

"ನಮಗೆ ಇಷ್ಟ್ ಬೇಗ ಮಕ್ಳು ಬೇಡ ಆಯ್ತಾ? ಆಮೇಲೆ ಫ್ರೆಂಡ್ಸ್ ಎಲ್ಲ ಛೇಡಿಸ್ತಾರೆ" ನಿರ್ಲಿಪ್ತ ದನಿ ಅವನ ದಿಕ್ಕಿನಿಂದ ಹೊರಟಿತು. ಹಾಗೆ ಹೇಳಿದವನೇ, ಅಂವ ದಿಂಬು ಅವುಚಿ ಮಲಗಿಬಿಟ್ಟ! ಎದೆಯೊಳಗಿನ ಹಾಡೆಲ್ಲ ದಳದಳ ಕಣ್ಣೀರಾಗಿ ಹರಿದುಬಿತ್ತು.

~

ನಗುವಿನ ನಾಲ್ಕು ಮಾತಿಗೂ ಮಕ್ಕಳು ಹುಟ್ಟೋದಕ್ಕೂ ಏನು ಸಂಬಂಧ? ಗೊತ್ತಾಗಲಿಲ್ಲ. ರಾತ್ರಿಯೆಲ್ಲ ಅದನ್ನೆ ಯೋಚಿಸುತ್ತ ನಿದ್ದೆ ಬಿಟ್ಟೆ. ಬೆಳಗಾಗೆದ್ದು ಮುಖ ನೋಡಿದ ನಾದಿನಿ, "ಹೋ! ರಾತ್ರಿಯೆಲ್ಲ ಗಮ್ಮತ್ತಾ?" ಅಂತೇನೇನೋ ಪೋಲಿ ಮಾತಾಡಿ ರೇಗಿಸಿದಳು.

~

"ಅಂವ ಹೂವಂಥ ಹುಡುಗ. ಅವಳಿಗೆ ಒಂದೂ ಗಟ್ಟಿ ಮಾತು ಹೇಳೋಲ್ಲ ನೋಡು!" ಜನದ ಸರ್ಟಿಫಿಕೇಟು. ಅಪ್ಪ ಅಮ್ಮ ಕೂಡ ಹೇಳಿದ್ದುಂಟು, "ಅಂವ ಕೋಲೆ ಬಸವನಂಥವ, ಪಾಪ!"

ಪಾಪದವ...!!

ನನ್ನ ಹತ್ತಿರ ಅವನ ಮಾತಿಲ್ಲ. ಇದ್ದರೂ ಅದು ಎದೆಗೆ ಹತ್ತಿರವಲ್ಲ. ಹನಿಮೂನಿಗೆ ಗೆಳೆಯನ್ನ ಕರಕೊಂಡು ಬಂದವನ ಹತ್ತಿರ, ನನಗಾಗಿ ಮಾತಿಲ್ಲ.

ಕಾರಲ್ಲಿ ಸದಾ ನನಗೆ ಹಿಂದಿನ ಸೀಟು, ಅವನ ಮಾತಿಲ್ಲ. ಸೋಫಾದಲ್ಲಿ ಪಕ್ಕ ಹೋಗಿ ಕುಂತರೆ ಮುಖ ತಿರುಗಿಸುವ, ಅವನ ಹತ್ತಿರ ಮಾತಿಲ್ಲ. ಗೆಳೆಯರೊಟ್ಟಿಗೆ ಕುಂತು ಹರಟುವಾಗ ನಾ ಎದುರು ಬಂದರೆ, ಮತ್ತೆ... ಮಾತಿಲ್ಲ!

ಯಾರೋ ಹೇಳಿದರು, "ಅವಂಗೆ ಹೆಂಡ್ತಿ ಅಂದ್ರೆ ಅದೆಷ್ಟು ಗೌರವ!?"

~

ಮದುವೆಯಾಗಿ ಐದನೇ ವರ್ಷ. ಮಕ್ಕಳಿಲ್ಲ. ಮನೆ ಮಂದಿ 'ಬರ ಬಿದ್ದವಳು' ಅಂತ ಆಡಿಕೊಂಡರು. ಸಾಲದ್ದಕ್ಕೆ ನನ್ನ ಮನೆತುಂಬಿಸಿಕೊಂಡ ವರ್ಷವೇ ಅಡಿಕೆ ರೇಟು ತನ್ನ ಸಹಜ ನೆಲೆಗೆ ಬಂದಿತ್ತು. ಬಾಯಲ್ಲಿ ಗುಟಖಾ ಸಿಡಿಸುತ್ತ ಸಾಹುಕಾರರು "ರೇಟು ಕುಸೀತು" ಅಂತ ವರಲಿಕೊಂಡರು. ಅತ್ತೆ ಎದುರಾಎದುರೇ "ಇವಳು ಕಾಲಿಟ್ಟಿದ್ದೇ ಹಿಂಗಾಯ್ತು, ದರಿದ್ರ

ಲಕ್ಷ್ಮೀ!" ಅಂದಳು. ಅಂವ ಮಾತ್ರ ನೆಮ್ಮದಿಯಾಗಿ ಸಾಲದ ಮೇಲೆ ಸಾಲ ಮಾಡಿ ತುಪ್ಪ ಕುಡಿಯುತ್ತ ಉಳಿದುಬಿಟ್ಟ.

~

ಕೊಟ್ಟಿಗೆಯ ಗೌರಿ ಹಾಯಾಗಿ 'ಅಂಬಾ' ಅಂದುಕೊಂಡು ಮಲಗಿದೆ. ತಿನ್ನುತ್ತ, ಕುಡಿಯುತ್ತ, ಹಾಲು ಸುರಿಸುತ್ತ. ನಾನೂ ಹೊತ್ತು ಹೊತ್ತಿಗೆ ತಿನ್ನುತ್ತೇನೆ. ದರಿದ್ರಳಾಗುತ್ತ, ಬಂಜೆಯಾಗುತ್ತ... ಸುಮ್ಮನೆ ಬಿದ್ದಿದ್ದೇನೆ.

ಹೀಗೇ ಆಗೀಗ ಊರು–ಮನೆಯಿಂದ ಊಟಕ್ಕೆ ಕರೆ ಬರುತ್ತೆ. ಆಗೆಲ್ಲ ಮನೆ ಮಂದಿ ಒತ್ತಾಯ ಮಾಡಿ ನನ್ನ ಹೊರಡಿಸ್ತಾರೆ. ಯಾರಯಾರದೋ ಸೀರೆ– ಒಡವೆ ತೊಟ್ಟು ನಾನೂ 'ಚೆಂದ'ವಾಗ್ತೇನೆ. ಹರಟೆಗೆ ಕುಂತ ಹೆಂಗಸರು ನನ್ನ 'ಸುಖ'ಕ್ಕೆ ಕರುಬುತ್ತಾರೆ. ಕಣ್ಣಲ್ಲೆ ಅಳೆದು ಸುರಿದು, 'ಪುಣ್ಯವಂತೆ' ಅನ್ನುತ್ತಾರೆ.

"ಇವಳು ಬರಡು ಗೊಡ್ಡಾದರೂ ಅಂವ ಎಷ್ಟು ಸುಮ್ಮನಿರ್ತಾನೆ... ಒಂದು ಗಟ್ಟಿ ಮಾತೂ ಇಲ್ಲ!" ಲೊಚಗುಡುತ್ತಾರೆ.

ಬಿಡಿ. ಈಗ ನನಗೂ, ಮಾತು ಮರೆತುಹೋಗಿದೆ.



# ಮತ್ತೆಂದೂ ಹುಟ್ಟದ ಮಗಳು

ಅದೆಂಥದೋ ಮಂಪರು ತರುವ ಸ್ಮೆಲ್ಲು. ಅನಸ್ತೇಷಿಯಾ?

ಒಳ ಕೋಣೆಯಲ್ಲಿ ಅತ್ತೆ ಮಾತಾಡಿದ್ದು ಏನು?

ಲೇಬರ್ ಕಾಟಿನ ಮೇಲೆ ಕಾಲು ಕೆಳ ಸರಿಸಿ, ಈ ಇವಳೇನು ಮಾಡ್ತಿದಾಳೆ?

ಥೂ! ಗಾಜಿನ ಕೊಳವೆ!! ಶ್ಶೀ... ನೋವಿಗೆ ಮುಲುಗಿದ್ದಕ್ಕೆ ಅವಳೆಂಥ ಅಂದಿದ್ದು?

"ಆಗ ಆಗದ ನೋವು ಈಗ ಆಗ್ತದಾ?"

ಅವಳಿಗೇನು ಗೊತ್ತು, ಬೀಜ ಬಿತ್ತುವ ನೋವು, ಬೇರು ಬಗೆಯುವ ನೋವು– ಎರಡೂ ಬೇರೆಬೇರೆ ಅಂತ!?

"ಬೆಳೆದುಬಿಟ್ಟಿದೆ, ರಿಸ್ಕು ಬೇಕಾ?"

"ಆಮೇಲಿನ ರಿಸ್ಕಿಗಿಂತ ಇದು ವಾಸಿ!"



'ಮೊಳಕೆಯಲ್ಲೆ ಚಿವುಟದಿರಿ...' ಕೆಂಪು ಬಸ್ಸಿನ ಮೇಲೆ ಹಳದಿ ಬೋರ್ಡು. ಅಂವ ಕೆನ್ನೆ ಚಿವುಟಿ ನಕ್ಕಿದ್ದ. ಈಗ ಆ ಮಖೇಡಿ ಎಲ್ಲಿ? ಅಮ್ಮನ ಸೆರಗಲ್ಲಿ ಅವಿತಿರುವನೇನೋ?

ನನ್ನ ದನಿ ಎಲ್ಲಿ? ವೀರಾವೇಶದ ಮಾತುಗಳೆಲ್ಲಿ? ಓ... ಅವೆಲ್ಲ ಎಲ್ಲಿ ಸತ್ತವು? ಕರಕರ ಕರ್ಕಶ ಸದ್ದು! ಕೊಯ್ಯುತ್ತಿರಬೇಕು ಕರುಳ ಕುಡಿಯನ್ನ. ಎಳೆದೆಳೆದು, ತುಂಡರಿಸಿ... ಮುಗಿದುಹೋದೆ ನಾನು?

ದೊಡ್ಡತ್ತೆಗೆ ಮೊಮ್ಮಗ ಹುಟ್ಟಿದ. ಅತ್ತಿಗೆ ತಾನೇ ಹೊಟ್ಟೆ ಅಳಿಸಿಕೊಂಡಳು. ಇನ್‌ಫೆಕ್ಷನ್ ಆಗದಿರಲು ಎರಡೆರಡು ಮಾತ್ರೆ, ಪ್ರತಿ ರಾತ್ರಿ... ಅಗೋ! ಆ ಮೂಲೆಯ ರಕ್ತಸಿಕ್ತ ಟಬ್ಬಲ್ಲಿ ಏನು?

ಇಂಚಿಂಚು ಹೆರೆದು ಬಿಸಾಡಿದ, ಮತ್ತೆಂದೂ ಹುಟ್ಟದ ನನ್ನ 'ಮಗಳು!?'



# ಅಮ್ಮ ಆಗ್ಲಿಕ್ಕೆ ಹೆರಲೇಬೇಕಾ!?

ಹೇಳ್ತಾರೆ ಎಲ್ಲರೂ. ಹೆಣ್ಣಿಗೆ ತಾಯ್ತನವೇ ಸಂಪೂರ್ಣತೆಯನ್ನ ತಂದುಕೊಡೋದು ಅಂತ. ಹೌದಲ್ಲ? ಮೊಲದ ಮರಿಯಂಥ ಮಗು (ಬಿಡು. ಹೆತ್ತೋರಿಗೆ ಹೆಗ್ಗಣ ಮುದ್ದು!), ಅದರ ಅಳು, ನಗು, ಉಚ್ಚೆ, ರಚ್ಚೆ, ಸ್ನಾನದ ಸಂಭ್ರಮ, ಲೋಭಾನದ ಘಮ, ಆಹಾ... ಅದರ ಸವಿಯೇ ಸವಿ.

ನನ್ನದೂ ಒಂದು ಖ್ವಾಯಿಶಿತ್ತು. ಚಳಿಗಾಲದಲ್ಲಿ ಕಂಬಳಿ ಹೊದ್ದು, ಮಫ್ಲರ್ ಕಟ್ಕೊಂಡು, ಹುಪ್ಪುಹುಪ್ಪು ಅಂತ ಕಮ್ಮಗೆ ಬಾಣಂತನ ಮಾಡಿಸ್ಕೊಳ್ಳೋದು, ಅತ್ತಿಗೆಗೆ ಅತ್ತೆ ಮಾಡಿದ ಹಾಗೆ ಉಪಚಾರ ಮಾಡಿಸ್ಕೊಳ್ಳೋದು, ಮಗು ಹೆತ್ತು ನೋವು ನುಂಗೋದು, ಸೊಂಟಕ್ಕೆ ಹಳೆಸೀರೆ ಸುತ್ಕೊಂಡು ಪರದಾಡೋದು, ತಿಂಗಳುಗಟ್ಟಲೆ ಅವರನ್ನ ದೂರವಿಟ್ಟು ಕಾಡಿಸಿ ಮುಸಿ ಮುಸಿ ನಗೋದು; ಕರಕಿನ ಪುಡಿ– ತುಪ್ಪ, ಜೀರಿಗೆ ಉಪ್ಪಿಟ್ಟು, ಅಂಟಿನುಂಡೆ ಎಲ್ಲಾ ಬೇಕಿತ್ತು.

ನನ್ನದೇ ಜೀವದ ಮುಂದುವರಿಕೆ, ನನ್ನ ನಿರಂತರತೆ ಬೇಕಿತ್ತು.

ಪ್ರಾಬ್ಲಂ ಏನಿದ್ರೂ ಟೈಟು ಜೀನ್ಸ್ ಹಾಕ್ಕೊಂಡು ಕಂಪ್ಯೂಟರೆದುರು ಮೂರು ಹೊತ್ತೂ ಕೂರುವ ಅವರದ್ದೇ ಅಂದಿದ್ರು ಡಾಕ್ಟರು. ನಾನು ಹೇಳಿದ್ದೆ, ಟೆಸ್ಟ್ ಟ್ಯೂಬ್ ಬೇಬಿ ಮಾಡ್ಕೊಳ್ಳೋಣ ಅಂತ. ಬಹಳ ಒಳ್ಳೆಯವರು ನಮ್ಮವರು. ಆದರೂ (ಹುಟ್ಟಿಸೋ ತಾಖತ್ತಿಲ್ಲದಿದ್ರೂ) ಗಂಡಸಲ್ಲವೇ? ಅಪರೂಪಕ್ಕೆ ಉರಿದುಬಿದ್ದರು. ಯಾವನ್ಯಾವನದೋ ಸ್ಪರ್ಮು ತುರುಕಿಸಿಕೊಳ್ಳುವ ಬದಲು

ಮಲಗೆದ್ದು ಬಾ ಅಂದುಬಿಟ್ಟರು! ನನಗೋ, ಅವರಂದ್ರೆ ಪ್ರಾಣ. ಮಿಗಿಲಾದ ಮಮತೆ. ಅವರನ್ನ ಕ್ಷಮಿಸಿಬಿಟ್ಟೆ. ಹ್ಹ! ಅವರಂದರು, 'ನಿನ್ನ ಕ್ಷಮಿಸಿದ್ದೇನೆ!'

ಪುರಾಣಗಳ ಪುಟ ಮಗುಚಿದೆ ನಾನು. ಕುಂತಿ ಸಿಕ್ಕಳು. ಕೇಳಿದೆ– "ನಿನಗೆ ಮಕ್ಕಳು ಹೇಗಾದವು?"

ಆ ಮಹಾಮಾತೆ ಅಂದಳು. "ನನ್ನ ಗಂಡ ಪೂರ್ಣ ಪುರುಷನಾಗಿರಲಿಲ್ಲ. ನನಗೋ, ಸಂಪೂರ್ಣ ಸ್ತ್ರೀತ್ವ ಬೇಕಿತ್ತು. ದೇವಪುರುಷರನ್ನ ಕೂಡಿದೆ, ಮಕ್ಕಳಾದವು!"

"ಸ್ತ್ರೀತ್ವಕ್ಕೆ ಒಂದು ಮಗು ಸಾಕಿತ್ತಲ್ಲವೇ? ಮೂರು ಮೂರು ಯಾಕೆ ಬೇಕಿತ್ತು? ಮೊದಲ ತಪ್ಪೂ ಸೇರಿ, ಒಟ್ಟು ನಾಲ್ಕಲ್ಲವೇ ಮಕ್ಕಳು!?"

ಅವಳು ಉತ್ತರಿಸಲಿಲ್ಲ. ಅವಳಿಗೆ, ಅವಳಂಥವರಿಗೆಲ್ಲ ನಿಮಿತ್ತದ ನೂರೆಂಟು ಕಾರಣಗಳಿದ್ದವು ಮಕ್ಕಳನ್ನ ಹಡೆಯಲಿಕ್ಕೆ. ಪಾಂಡುರಕ್ತವೇ ಇಲ್ಲದ ಆ ಶೂರರನ್ನು ಜಗತ್ತು 'ಪಾಂಡವ'ರೆಂದೇ ಕರೆಯಲಿಲ್ಲವೇ? ನಾನು ತೀರ ಕುಂತಿಯಾಗಬಯಸಲಿಲ್ಲ. ನನಗೆ ಬೇಕಿದ್ದೆಲ್ಲ ಒಂದೇ ಒಂದು ಮಗು. ಅದೂ ನಾನು ಹಡೆದು ಪಡೆಯಬಲ್ಲ ಮಗು. ಆದರೇನು? ಸೋತ ಗಂಡಸಿನ ನೋವು ಸೋತ ಹೆಂಗಸಿನದಕ್ಕಿಂತ ದೊಡ್ಡದು. ಗಂಡಸರು ಸೋಲು ಸಹಿಸಲಾರರು. ಎದುರಾಡಲಿಲ್ಲ ನಾನು ಅವರಿಗೆ. ನಾನೇ ಸೋತೆ. ಸೋತು ಗೆದ್ದೆ. ಅವರನ್ನೂ ಗೆಲ್ಲಿಸಿದೆ!

ನಮಗೀಗ  ಮೂರರ ಕಂದ. ಮನೆ ತುಂಬ ಅವನ ಹೆಜ್ಜೆಗಳದೇ ಕಚಗುಳಿ, ಅವನದೇ ಚಿಲಿಪಿಲಿ. ನನ್ನವರ ಮುಖದಲ್ಲೂ ನಗೆಮಿಂಚು. ನನ್ನೆದೆಯೂ ಹಗುರ ಹಗುರ. ಮಗುವಿಲ್ಲದ ಮಂದಿಯಷ್ಟೆ ತಂದೆತಾಯಿಗಳಿಲ್ಲದ ಮಕ್ಕಳೂ ಇದ್ದಾರಲ್ಲವೆ ಈ ಜಗತ್ತಿನಲ್ಲಿ?

ಅಂಥದರಲ್ಲೊಂದು ಈಗ, ನಮ್ಮ ತೆಕ್ಕೆಯಲ್ಲಿ!



## ಒಳಗಿಲ್ಲ ಎನುವಾಗ..

ಇಬ್ಬರ ಮುಖದಲ್ಲೂ ಗಾಬರಿ.

ವೆಲಾಸಿಟ್ಟಿನ ಪುಟ್ಟ ತೊಟ್ಟಿಯಲ್ಲಿ ಮೂತ್ರದ ಮೂರು ಬಿಂದುಗಳು ಸರ್ರಂತ ಹರಿದು ಎರಡೆ–ರಡು ನೇರಳೆ ಬಣ್ಣದ ಗೀಟು ಬರೆದಿತ್ತು. ಚಳಿಗಾಲದ ಬೆಳಗಿನಲ್ಲೂ ಅವರಿಬ್ಬರ ಹಣೆಮೇಲೆ ಬೆವರ ಹನಿ ಜರ್ರಂತ ಸುರಿಯುತ್ತಿತ್ತು.

ಅಂವ ಸಿಡುಕಿದ, "ನಿಂಗೆ ಅಷ್ಟೂ ಗೊತ್ತಾಗೋದ್ ಬೇಡ್ವಾ? ಈಗ ಯಾರು ಅನುಭವಿಸೋರು!?"



ಅಳುವೇ ಬಂತು ಅವಳಿಗೆ. ತಾನು ಎಷ್ಟೇ ಬೇಡವೆಂದು ತಡೆದರೂ ಅಂವ...

ದೂರಾದೂರಿಗೆ ಸಮಯವಲ್ಲ. ಕಾಲ ಮಿಂಚಿ ಹೋಗಿತ್ತು.

ಬೆಳಗಾಗೆದ್ದು ಬಾಯೊತ್ತಿ ಬಚ್ಚಲಿಗೋಡುವ ಸೊಸೆ ಮೇಲೆ ಅತ್ತೆ ಮಾವರಿಗೆ ಮುದ್ದುಕ್ಕಿ ಬರುತ್ತಿತ್ತು. ಮುಖ ನೋಡಿ ಮಾತಾಡದೆ ಅದೆಷ್ಟು ದಿನವಾಗಿತ್ತೋ? ಆದರೂ ಅತ್ತೆ ದೇವರ ಪಟದೆದುರು ತುಪ್ಪದ ದೀಪ ಹಚ್ಚಿ ಕುಂತಳು, ಸೊಸೆ ಕೊಡಬಹುದಾದ ಅದೊಂದು ಸುದ್ದಿಗಾಗಿ ಕಾಯುತ್ತ. . .

~

ಈಗೆರಡು ವಾರದಿಂದ ಅವಳು ಫುಡ್‌ಕೋರ್ಟಿಗೆ ಕಾಲಿಡುತ್ತಿಲ್ಲ.

ಕಲೀಗುಗಳ ಗುಂಪಲ್ಲಿ ಗುಸುಗುಸು. ಬಿಳುಚಿದ ಮೈ, ಹೊಟ್ಟೆ ತೊಳಸಿನ ಮುಖಗಳು ಒಂದಿಬ್ಬರು ಹಿರಿಯರಿಗೆ ಚಾಡಿ ಹೇಳಿದ್ದವು. ಈಗ, ಮಟಮಟ ಮಧ್ಯಾಹ್ನ ಬಾಸ್ ಕರೆದಿದ್ಯಾಕೆ?

ಟೇಬಲ್ಲಿನ ಮೇಲೆ ಅಗ್ರಿಮೆಂಟ್ ಪೇಪರ‍್ರು. ಜಾಯಿನ್ ಆದ ಮೂರು ವರ್ಷ ಪ್ರಗ್ನೆಂಟ್ ಗಿಗ್ನೆಂಟ್ ಆಗುವಂತಿಲ್ಲ. ತಿಂಗಳ ಸಂಬಳ ಶುರುವಿನಲ್ಲಿ ಮೂವತ್ತು ಸಾವಿರ. ಫಾರಿನ್ನಿಗೆ ಕಳಿಸಿದರೂ ಕಳಿಸಬಹುದು, ಆಫೀಸಿನ ಖರ್ಚಿನಲ್ಲಿ!

"ಹಾಗೇನಿಲ್ಲ, ಐ ವಿಲ್ ಟೇಕ್ ಕೇರ್... " ತೊದಲುತ್ತಲೇ ತಲೆತಗ್ಗಿಸಿ ಹೊರಬಂದಳು.

ತನ್ನವನನ್ನ ಬಡಿದುಬಿಸಾಡಿಬಿಡಬೇಕನಿಸಿತು ಒಮ್ಮೆ. ತಾನೆಷ್ಟೇ ಬೇಡವೆಂದಿದ್ದರೂ ಅಂವ.. ಥೆ! ಎಂಥ ಅವಕಾಶಗಳು ಮಿಸ್ ಆಗಿಬಿಡುತ್ತವೋ ಏನೋ?

~

ಡಾಕ್ಟರ್ ಹೇಳಿದ್ದರು. ಕೊಂಚ ಬಲಿಯಬೇಕು. ಯುಟಿರಸ್ಸಿಗೆ ಅಪಾಯ.

ಮೂರು ತಿಂಗಳು ಮುಗಿದವು. ಮಾವ ಮಲ್ಲಿಗೆ ಮುಡಿಸುವ ಶಾಸ್ತ್ರಕ್ಕೆ ಪಂಚಾಂಗ ತಿರುವತೊಡಗಿದರು. ಅಂವ ಡಾಕ್ಟರ್ ಅಪಾಯಿಂಟ್‌ಮೆಂಟ್ ಪಡೆದು ಬಂದ. ಶನಿವಾರ–ಭಾನುವಾರ ವೀಕ್ಲಿ ಆಫು. ಅತ್ತೆಗೆ ಗೊತ್ತಾದರೆ ಸುಮ್ಮನೆ ರಗಳೆ. ಮುನಿದು ಮಗಳ ಮನೆ ಸೇರ್ತಾರೆ. ಆಮೇಲೆ ಊಟ ತಿಂಡಿಗೆ ಗೋಳು!

ಪಿಕ್ನಿಕ್ಕಿನ ಪ್ಲಾನು ಹಾಕಿದರು. ಒಂದು ದಿನ ಆಸ್ಪತ್ರೆ, ಎರಡನೇ ದಿನ ಹೋಟೆಲ್ಲಲ್ಲಿ ರೆಸ್ಟು. ಭಾರ ಕಳೆದಿತ್ತು. ಹೊಟ್ಟೆಯದೂ, ತಲೆ ಮೇಲಿನದೂ!

~

ಅತ್ತೆ ಮಾವ ಹಸಿರು ಸೀರೆ ತಂದರು.
ಸೊಸೆ ಕಣ್ಣೀರು ಮಿಡಿದು, "ಒಳಗಿಲ್ಲ" ಅಂದಳು.



# ಮಗು

ಮಗು.
ಅರೆ! ನನ್ನದೇ ಜೀವ, ನನ್ನ ನಿರಂತರತೆ.
ಆದರೆ ಅದು ನಾನಲ್ಲ. ಅದು ನಾನು ಮಾತ್ರ ಅಲ್ಲ.
ಅಂವ ಕೂಡ ಅಂದುಕೊಳ್ತಾನೇನೋ, 'ನನ್ನ ಮಗು, ನನ್ನದೇ ನಿರಂತರತೆ!'

ಮಗು...
ಈಗ ತಾನೆ ಕಡೆದು ತೆಗೆದ ಮೆದು ಬೆಣ್ಣೆ.
ಕಾದು ಕಾದು ಹೊನ್ನುಗಟ್ಟಿದ ಹಾಲುಕೆನೆ.

ಮಗು,
ಹುಲ್ಲಿನೆಳೆಯ ಮೇಲಿನ ಇಬ್ಬನಿ ಮುತ್ತು!
ಅಯ್ಯೋ! ಅದೇನು ಮಗ್ಗುಲ ಮುಳ್ಳು?

ಮಗು–
ವಲ್ಲಿ ಅವನ ನಗು!!
ಅವನ ಕಣ್ಣು, ಮೂಗು, ಬಾಯಿ... ಅವನದೇ ಪಡಿಯಚ್ಚು.
ಇತಿಹಾಸ ಕೆದಕುವ ವಾಸ್ತವ.

ಮತ್ತೆ ಮಗು.
"ಅದು ನಾನಲ್ಲ. ಅವನೂ ಅಲ್ಲ.
ಅದರ ಹುಟ್ಟಿಗೆ ನಾವೊಂದು ಪಿಳ್ಳೆ ನೆವ ಮಾತ್ರ.
ನಾವು ಕೊಟ್ಟಿದ್ದು ಬರಿ ಜೀವಕೋಶಗಳನ್ನ, ಜೀವವನ್ನಲ್ಲ!"
–ಹಾಗಂದುಕೊಳ್ಳುತ್ತೇನೆ. ಇವನ ಮುಖದಲ್ಲಿ ಅವನ ನಗು ಕಾಣದಂತೆ ತೇಪೆ ಹಾಕುತ್ತೇನೆ.
ಆದರೂ, ಅಂವ ಹಣಕುತ್ತಾನೆ.
ಅವನ ಧಗಾ, ಧೋಕಾ, ಮೈತುರಿಕೆಗಳೆಲ್ಲ ನೆನಪಾಗಿ ಉಮ್ಮಳಿಕೆ ಬರುತ್ತದೆ.

ಗೋರಿ ಸ್ವಾತಂತ್ರ್ಯದ ಕವನ ಕಟ್ಟಿ, ಕಣ್ಣೀರಲ್ಲಿ ಕೈತೊಳೆದು, ಬೇಲಿಗಳಲ್ಲಿ ಉಸಿರು ಬಿಗಿದು...

'ದೌರ್ಜನ್ಯ!' ಚೀರುತ್ತೇನೆ. ಹೆಣ್ತನದ ವಕೀಲಿಗಿಳಿಯುತ್ತೇನೆ.
ಅದಕ್ಕಾಗೇ ಹೊಸಿಲು ದಾಟಿ ಹೊರಡುತ್ತೇನೆ.
ಅವನ ನಗು ಹೊತ್ತ ಮಗು, ಬಾಗಿಲಾಚೆಯೇ ಉಳಿಯುತ್ತದೆ.

ಸತ್ಯಕಾಮರ ಸಾಲು: "ಒಬ್ಬಳು ಹೆಣ್ತನವನ್ನ ಮೀರಿದಾಗ ಮಾತ್ರ ತಾಯಿಯಾಗುತ್ತಾಳೆ."





# ನೋವಿನ ಮುಂದೆ ನಿರಂತರ ಯುದ್ಧ

ಮತ್ತೆಮತ್ತೆ ಕ್ಲಿಪ್ಪು ಟಪಟಪಾರೆನಿಸಿ ಜುಟ್ಟು ಬಿಗಿದಳು.

ಊಹೂಂ. ಅವೆರಡು ಕೂದಲು ಒಳಸೇರ್ತಲೇ ಇಲ್ಲ. ತುದಿ ಬೇರೆ ಮಾವಿನಕಾಯಿ ಮೂತಿ ಆಗಿದೆ! ಐ ಲೈನರು ತೀಡಿ, ಲಿಪ್ ಸ್ಟಿಕ್ಕು ಮೆತ್ತಿ, ಅಂತೂ ರೆಡಿ! ಟೈಮ್‌ಟೇಬಲಿನಲ್ಲಿ ಅದಕ್ಕಂತಲೇ ಅರ್ಧ ಗಂಟೆ ನಿಗದಿಯಾಗಿದೆ. ಹೀಗೆ ದಿನಕ್ಕೊಂದು ರೀತಿ ಡ್ರೆಸ್ಸು ಮಾಡ್ಕೊಂಡು ಛಿಲ್ಲನೆ ನಗುತ್ತ ಹುಡುಹುಡುಗಿಯಾಗಿ ಸಂತೂರ್ ಅಡ್ವರ್ಟೈಸಿನ ಮಾಡೆಲಾಗೋದು ಅವಳಿಗೆ ಖುಶಿ.

ಆದರೆ, ಆದರೆ ಅದರಲ್ಲಿ ಬರುವ ಹಾಗೆ 'ಮಮ್ಮೀ...' ಅನ್ನುತ್ತ ಓಡಿ ಬರಲು ಮಗುವೊಂದು ಬಳಿಯಿಲ್ಲ. ಇದು "ಅಷ್ಟೇ" ಅಂದು ಸುಮ್ಮನಾಗುವ ವಿಷಯವಲ್ಲ.

~

"ಹೆಣ್ಣಲ್ಲ, ಹೆಣ್ಣು ಹುಟ್ಟಲ್ಲ. ಮಗೂನ ಇಲ್ಲೇ ಬಿಟ್ಟು ರಾಜ್ಯ ಆಳೋಕೆ ಹೋಗಿದಾಳ್ನೋಡು ಹೆಮ್ಮಾರಿ!" "ಪಾಪ ಮಗು, ಅದಕ್ಕೆ 'ನೀನೇ' ಅನ್ನೋರು ಗತಿಯಿಲ್ಲ, ಅವಳ ತೆವಲಿಗಷ್ಟು!"

–ಹೀಗೆಲ್ಲ ಪುಕಾರು ಮಾಡಿ ಬಾಯಿ ಬೇಸರ ಬಂದ ಜನ ಈಗ ಸುಮ್ಮನಿದ್ದಾರೆ. ಜನ ಸುಮ್ಮನಾಗಿಬಿಟ್ಟ ತಲೆಬಿಸಿಗೆ ಅವಳ ಮನೆಮಂದಿ ಹೊಸತೇನಾದರೂ ಸ್ಕ್ರಿಪ್ಟು ರೆಡಿ ಮಾಡಿ ನಾಟಕವಾಡ್ತಲೇ ಇರುತ್ತಾರೆ. "ಕೆಟ್ಟ ಮಕ್ಕಳಿರಬಹುದು, ಕೆಟ್ಟ ತಾಯಿ ಇರೋಲ್ಲ ಅನ್ನೋದು ಅದೆಷ್ಟು ಸುಳ್ಳು ನೋಡಿ! ಇವಳಿಗಿಂತ ಉದಾಹರಣೆ ಬೇಕೇ?" ಅನ್ನುತ್ತಾರೆ.



ಸರಿ– ತಪ್ಪು ಅರಿಯದ ಮಗು, ಅವರ ಪಾಲಿನ ಶಿಖಂಡಿ! ಅದನ್ನ ಎದುರಿಟ್ಟುಕೊಂಡು ಅವರ ಕಾಳಗ!!

~

ಅವಳಿನ್ನೂ ಈಗ ತಾನೆ ಹದಿಹರೆಯ ಕಳೆದವಳಂತೆ ಇದ್ದಾಳೆ. ಪ್ರಪೋಸು ಮಾಡಬರುವ ಹುಡುಗರಿಗೆ “ಎಂಟು ವರ್ಷದ ಮಗು ಫ್ರೀ” ಅಂದು ಕೆಣಕುತ್ತ ಬೇಸ್ತುಬೀಳಿಸುತ್ತಾಳೆ. ಹೀಗೇ ಅಲೆಯುತ್ತಿರುತ್ತಾಳೆ ದಿನವೆಲ್ಲ. ದುಡಿತ ಮುಗಿದರೂ ಮನೆ ಸೇರದೆ ನಾಟಕ, ಉಪನ್ಯಾಸ, ಸೆಮಿನಾರುಗಳಲ್ಲಿ ಕಳೆದುಹೋಗುತ್ತಾಳೆ. ಅವಳ ವ್ಯಾನಿಟಿ ಬ್ಯಾಗಲ್ಲಿ ಸೇಫ್ಟಿ ಪಿನ್ನಿನ ಗೊಂಚಲು. ಕಾಲಿಗೆ ಬೆಲ್ಟಿಲ್ಲದ ಚಪ್ಪಲಿ. ಒಂಟಿಹೆಣ್ಣಿನ ‘ಬೆಲೆ’ ಅವಳಿಗೆ ಗೊತ್ತಿದೆ.

ಅವಳ ರಾತ್ರಿಗಳೆಲ್ಲ ಬಾಲ್ಕನಿಯಲ್ಲಿ ಕುಂತೇ ಕಳೆಯುತ್ತವೆ.

ಅಲ್ಲಿ ರಾಜಕೀಯಕ್ಕೆ, ವ್ಯಾಪಾರಕ್ಕೆ, ಕೂಲಿಗೆ ಜನರನ್ನ ಸೆಳೆಯೋದಿಕ್ಕೆ– ಎಲ್ಲದಕ್ಕೂ ‘ಅಮ್ಮ ಬಿಟ್ಟ ಮಗು’ ಚಲಾವಣೆಯಾಗುತ್ತಿರುತ್ತದೆ.

ತೊಳೆದ ಮುಖ ನೋಡುತ್ತ ಕನ್ನಡಿ ಎದುರು ಕುಂತ ಇವಳು ತುಟಿಯ ನಡುಕ ಕಾಣದ ಹಾಗೆ ಇರುಳಲ್ಲೂ ಲಿಪ್ ಸ್ಟಿಕ್ಕು ಮೆತ್ತಿಕೊಳ್ಳುತ್ತಾಳೆ. ಸೋತ ಕಣ್ಣಿನ ಕುರುಹು ಮುಚ್ಚಲು ಕಾಡಿಗೆ ತುಂಬುತ್ತಾಳೆ. ಮುಖದ ನೋವು ಮರೆಮಾಡಲು ಮತ್ತೆ ಮತ್ತೆ ಕಾಂಪ್ಯಾಕ್ಟು....

“ಅಮ್ಮಾ...” ಆಳದಿಂದೆದ್ದ ದನಿ ಎಲ್ಲವನ್ನೂ ಕೊಚ್ಚಿಹೋಗುತ್ತದೆ.

ಮುಖದ ರಂಗು ಕಳೆಯುತ್ತದೆ.



# ಎದೆಯೆತ್ತರದ ವೇದವ್ಯಾಸ ಮಗನಲ್ಲವೇನೆ?

ಥಂಡಿ ತಣ್ಣನೆಯ ಹಸಿವಿಲ್ಲದ ಮಲೆನಾಡು. ಶ್ರಾವಣದ ಜಿಟಿಪಿಟಿ. ಅದು, ಮದುವೆ ಸೀಸನ್ನು! ಇಲ್ಲಿ, ನಲವತ್ತೆರಡರ ಗಂಡಿಗೆ ಇಪ್ಪತ್ತೈದರ ಹೆಣ್ಣು.

ಸಮಾಜ ಸುಧಾರಿಸಿದೆ! ಮದುವೆಯಾದ ಮೂರನೆ ದಿನಕ್ಕೆ ವಿಧವೆಯಾದ ವಧು. ಹೆಂಡತಿ ಸತ್ತು ಐದು ವೈದಿಕ ಮುಗಿಸಿದ ವಿಧುರ– ವರ. ಮನೆ ತುಂಬಿತು. ಅವಳು ಸೇರಕ್ಕಿ ಒದ್ದು ಒಳನಡೆದಳು. ತನ್ನ ದುರದೃಷ್ಟವೆಲ್ಲ ಬಾಗಿಲಾಚೆಯೇ ಉಳಿಯಿತೆಂದು ಸಂಭ್ರಮಿಸಿದಳು. ಅರೆ! ಮನೆಯ ಹಿತ್ತಲಲ್ಲಿ ಮದುವೆಯಲ್ಲೆಲ್ಲೂ ಕಾಣದ ಚುರು ಚುರುಕು ತರುಣ! ಅಂವ, ಅವಳ ಗಂಡನ ಮಗ. ಇದೀಗ ಅವಳಿಗೂ...

ಹಳ್ಳಿಗೆ ಹಳ್ಳಿಯೇ ನೆರೆದಿತ್ತು ಅಲ್ಲಿ. ಚಿಗುರು ಮೀಸೆಯ ಹುಡುಗನ ತಲೆ ನೇವರಿಸಿ ನಿಂತಳು.



ಅಂವ ‘ಚಿಕ್ಕಮ್ಮಾ’ ಅಂದು ಕಾಲಿಗೆ ಬಿದ್ದ. ಅವನನ್ನೆತ್ತಿ ‘ಅಮ್ಮಾ’ ಅನ್ನಬಾರದಾ?’ ಕೇಳಿದಳು. ಹಳ್ಳಿಜನ ಹುಳ್ಳಗೆ ನಕ್ಕರು.

ಮತ್ತೆ ತಂದೆಯಾಗಲಾರದವನ ಹೆಂಡತಿಗೀಗ ಎದೆಯೆತ್ತರದ ಮಗ! ಅಮ್ಮಾ...ಅಮ್ಮಾ... ಮನೆ ತುಂಬ ಸಡಗರ. ಮಗ– ಮಗುವೇ ಆಗಿಬಿಟ್ಟ. ಹೆಣ್ತನದ ವಾತ್ಸಲ್ಯಕ್ಕೆ ವಯಸ್ಸಿನ ಪಾಬಂದಿಯುಂಟೇ? ತಿನ್ನಿಸಿದಳು. ಪಗಡೆಯಾಡಿದಳು. ಎಣ್ಣೆ ಮೆತ್ತಿ ಮೀಯಿಸಿದಳು...

ಜನ ಸುಧಾರಿಸಿಲ್ಲ!

ಕಾಮಾಲೆ ಕಣ್ಣಿಗೆ ಬೆಳಕು ಚುಚ್ಚತೊಡಗಿತು. ಕುರುಡರು ಆನೆ ತಡಕಿದಂತೆ, ಅನಿಸಿದ್ದೇ ಆಡ ತೊಡಗಿದರು. ಮನೆಯ ಗೋಡೆ– ಕಂಬಗಳು ಮಾತಾಡತೊಡಗಿದವು! ಪಣತ– ಪತ್ತಾಸುಗಳು ‘ಉಶ್ ಉಶ್’ ಅಂದವು!

ತಂದೆ, ಅನುಮಾನಿಸಲಾರ ಮಗನನ್ನ. ಅವಮಾನಿಸಲಾರ ಹೆಂಡತಿಯನ್ನ.
ಹಾದಿ ಬೀದಿಯ ಮಾತಿಗೆ ಮಮತೆ ನೊಂದಿತು.

ತಿಂಗಳಿಡೀ ಚೌಕಿ ಮನೆಯ ಮೂಲೆ ಮೂಲೆಯಲ್ಲಿ ಕಣ್ಣಾಮುಚ್ಚಾಲೆ. ಅಮ್ಮನೆದುರು ಮಗನಿಲ್ಲ, ಮಗನೆದುರು ಅಮ್ಮನಿಲ್ಲ. ಕಾಲ, ಅವರಿಬ್ಬರಿಗೂ ಕಾಯಲಿಲ್ಲ... .ಮಗ ಹೊರಟು ನಿಂತ. ಓದಿನದ್ದೊಂದು ನೆವ. ಜಲಪಾತವಾದಳು ಅವಳು. ಕೊರಳುಬ್ಬಿ ಬಂದರೂ ಸವಿ ನಕ್ಕು ಹೊರಟೇಹೋದ ಅಂವ.

ಇದೀಗ ಗವ್ವೆನ್ನುವ ಮನೆಯಲ್ಲಿ ಒಬ್ಬೊಬ್ಬಳೇ ಕುಂತು ಬಿಕ್ಕುತ್ತಾಳೆ. ಕೇಳುತ್ತಿದ್ದಾಳೆ ಮತ್ತೆ ಮತ್ತೆ... “ಹೊಸತಾಗಿ ಹೊಸೆಯುವ ಸಂಬಂಧಗಳಿಗೆ ಬೆಲೆಯೇ ಇಲ್ಲವೇನೆ? ದಂಡ– ಕಮಂಡಲು, ಗಡ್ಡ– ಮೀಸೆ ಹೊತ್ತೇ ಹುಟ್ಟಿದ ವೇದವ್ಯಾಸನಿಗೆ ತರುಣಿ ಸತ್ಯವತಿ ತಾಯಿಯಲ್ಲವೇನೆ?

ಹೇಳೇ... ಎದೆಯೆತ್ತರದ ವೇದವ್ಯಾಸ ಮಗನಲ್ಲವೇನೆ!?



# ಕೈಲಾಗದವನ ಪೌರುಷ!

“ಹೆಂಗಸರಿಗೇನು? ಮೈಮಾರಿಯಾದರೂ ಜೀವನ ಮಾಡ್ತೀರಿ. ಕಷ್ಟವೆಲ್ಲ ನಮ್ಗೇ”

ಅಂವ ಎಂಜಲು ಹಾರಿಸುತ್ತ ಒದರುತ್ತಿದ್ದರೆ, ಅವಳು ಬಾಯಿ ಹೊಲಿದುಕೊಂಡವಳಂತೆ ಕುಂತಿದ್ದಳು. ತಾತ್ಸಾರ ಹೆಚ್ಚಿ ಉಮ್ಮಳಿಕೆ ಬಂದು, ಸೆರಗೊತ್ತಿಕೊಂಡು ಕುಸಿದಳು.

ಅಂವ ಅಂದ ಹಾಗೆ ಅವಳು ಮೈಮಾರಿದ್ದೇನೋ ಹೌದು. ಆದರೆ, ಇಡಿಯ ದೇಹವನ್ನಲ್ಲ,

ಗೇಣು ಹೊಟ್ಟೆಯನ್ನ. ಅಷ್ಟಕ್ಕೂ ಅದನ್ನ ಹಾಗೆ ಬಿಕರಿಗಿಟ್ಟಿದ್ದು ಅವನೇ.

ಮಗು ಹೆರಲು ಹೆದರುತ್ತಿದ್ದ ನಾಜೂಕಿನ ಹೆಂಡತಿಯನ್ನ ಶ್ರೀಮಂತನೊಬ್ಬ ಆಸ್ಪತ್ರೆಗೆ ಕರ–ಕೊಂಡು ಬಂದಿದ್ದ. ಅಲ್ಲೇ ವಾರ್ಡ್‌ಬಾಯಾಗಿದ್ದ ಇಂವ ಹೆಂಡತಿಯ ಬಸಿರನ್ನೇ ಬಾಡಿಗೆಗಿಟ್ಟು ವ್ಯವಹಾರ ಕುದುರಿಸಿದ.

ಆ ಗಂಡ– ಹೆಂಡತಿಯದ್ದನ್ನೆಲ್ಲ ಟೆಸ್ಟ್‌ಟ್ಯೂಬಿಗೆ ಸುರಿದ ಡಾಕ್ಟರು ಅದೇನೇನೋ ಮಾಡಿ, ಅಂತೂ ಅವಳ ಹೊಟ್ಟೆಗೆ ಬಿಟ್ಟರು.

~

ಮನೆಯಲ್ಲಿ ಹಬ್ಬ! ಹಾಲಲ್ಲಿ ಕೈತೊಳೆಯುವುದು ಅಂದ್ರೆ ಇದೇ... ಅಂವ ಕುಣಿದಾಡಿಬಿಟ್ಟ. ಮೂರರ ಮಗನ ಕಣ್ಣತುಂಬ ಸೇಬುಸೇಬು. ಕೆಲಸದವಳ ಕೆಲಸಕ್ಕೂ ಒಬ್ಬ ಕೆಲಸದಾಳು!

ಹೆಂಡತಿಯ ಬಯಕೆಯ ನೆವದಲ್ಲಿ ಜೀವಮಾನದ ಆಸೆಯನೆಲ್ಲ ತೀರಿಸಿಕೊಂಡ ಅವನು.

ಅವಳು ಮಾತ್ರ ಮೂಲೆ ತಡಕುತ್ತ, ಸೆರಗಿನ ತುದಿ ಹಿಡಿದು ಸೊರಗುಟ್ಟುತ್ತಿದ್ದಳು, "ಈ ಮಗು ನನಗೆ ದಕ್ಕೋದಿಲ್ಲವಲ್ಲ!"

ಸುಖದ ಒಂಭತ್ತು ತಿಂಗಳಿಗೆ ಒಂಭತ್ತೇ ನಿಮಿಷ! ಸರಕ್ಕನೆ ಸರಿದುಹೋಗಿತ್ತು ಕಾಲ. ಕೈಸೋಲುವ ಬೆಣ್ಣೆಮಗು ಮೈತುಂಬಿ ನಿಂತಿತ್ತು. ಇನ್ನೇನು, ಮಗ್ಗುಲಾಗಿ ಮೊಲೆಯೂಡಬೇಕು, ನಾಜೂಕುಗಿತ್ತಿ ಚೀರಿದಳು "ಅಯ್ಯೋ! ಇನ್‌ಫೆಕ್ಷನ್ ಆದೀತು!"

ಒಂಭತ್ತು ತಿಂಗಳು ಹೊತ್ತ ಹೊಟ್ಟೆಯಿಂದ ಆಗದ್ದು, ಹೊಸ ಹಾಲಿಂದ ಆಗುತ್ತೆ! ಬಡತನ ಹೊಲೆಯಲ್ಲವೇ!?

ಮಗುವನಪ್ಪಿದ ಗಂಡ– ಹೆಂಡತಿ ಕಾನೂನಿನ ಹಾಳೆಗಳಲ್ಲಿ ಎಲ್ಲೆಲ್ಲೋ ಸೈನು ಹಾಕಿಸಿಕೊಂಡರು. "ಈ ಮಗುವಿನೊಂದಿಗೆ ನಾನು ಯಾವ ಬಗೆಯ ಸಂಬಂಧವನ್ನೂ ಇರಿಸಿಕೊಳ್ಳೋದಿಲ್ಲ" – ಸಧ್ಯ! ಅವಳಿಗೆ ಕಾಣದಷ್ಟು ನೀರು ತುಂಬಿತ್ತು ಕಣ್ಣಲ್ಲಿ!!

~

ಅತ್ತ, ಅಂವ ಮಾತ್ರ ಕೊಟ್ಟಿದ್ದು ಸಾಲದೆಂದು ಚೌಕಶಿ ನಡೆಸುತ್ತ, ಹಣ ಪೀಕುತ್ತ, ಸತಾಯಿಸುತ್ತ ನಿಂತುಬಿಟ್ಟಿದ್ದ.

ದುಡ್ಡಿಲ್ಲದ್ದು ಬಡತನವಲ್ಲವಂತೆ. ಇದ್ದ ದುಡ್ಡು ಇಲ್ಲವಾಗೋದೇ ಬಡತನವಂತೆ! ಹೊರಟಲ್ಲಿಗೇ ಬಂದು ಸೇರಿತ್ತು ಸಂಸಾರ. ಮನೆ–ಮಡದಿಗೆ ಏನೊಂದೂ ಸಾಲದೀಗ. ಅವನಿಗೋ, ದುಡ್ಡಿನ ರುಚಿ ಹತ್ತಿಹೋಗಿತ್ತು. ಅವನ ಹಪಾಹಪಿಗೆ ಅವಳ ಸಿಡುಕು, "ಕೈಲಾಗದ ಗಂಡಸಿಗೆ ಮೈಯೆಲ್ಲ ಪೌರುಷ!"

ಅದಕ್ಕೇ ಅರಚುತ್ತಿದ್ದಾನೆ ಈಗ, "ಹೆಂಗಸರಿಗೇನು? ಮೈ ಮಾರಿಯಾದರೂ..."





# ಚಂದ್ರವಂಶದ ದೀಪದಡಿ ಅವಳ ಬೇಗುದಿಯ ಕತ್ತಲು

ಮುಸ್ಸಂಜೆಯ ಹೊಸ್ತಿಲಲ್ಲಿ ಕುಳಿತಿದ್ದಳು ಮಮತಾ.
ದೇವತೆಗಳ ಸುಪಾರಿ ಹಿಡಿದ ಮದನ ಹೂಬಾಣ ಬಿಟ್ಟು ಸುತ್ತಲೆಲ್ಲ ಸೊಗಸಾಗಿಸಿದ್ದ.

ಮೈದುನನೆದುರು ಮಂಕಾಗಿದ್ದ ತನ್ನ ಗಂಡನ್ನ ನೆನೆದು ಕೊರಗುತ್ತಿದ್ದವಳಿಗೆ ಸುತ್ತಲಿನ ಯಾವುದೂ ಮನ ಹೊಕ್ಕಲೇ ಇಲ್ಲ. ತನ್ನ ತಮ್ಮ ಹೇಳಿದ ಯಾವುದನ್ನೂ ಒಲ್ಲೆ ಅನ್ನುವ ಸ್ಥಿತಿಯಲ್ಲಿರಲೇ ಇಲ್ಲ ಆತ. ಹಾಗಂತಲೇ ತನ್ನ ಪಾಲಿನ ಕೆಲಸ ಮುಗಿಸಿ ಎಲ್ಲೋ ಕಮಂಡಲು ಹಿಡಿದು ಹೊರಟುಹೋಗಿದ್ದ.

ಇಲ್ಲೀಗ ಒಂಟಿ ಹೆಣ್ಣು ಗೌರವವಿಲ್ಲದ ಗಂಡನಿಗಾಗಿ ಮರುಗುತ್ತ ನಿಯತಿಯ ಆದೇಶಕ್ಕೆ ಮಣಿದು ಕುಂತಿದ್ದಳು. ಇನ್ನೇನು, ಮೈದುನ ಬರುವ ಹೊತ್ತು...
ದೇವಗುರು ಬೃಹಸ್ಪತಿ ಬರುವ ಹೊತ್ತು!

"ಒಂದೇ ಕ್ಷೇತ್ರದಲ್ಲಿ ಎರಡು ಬೀಜ ಬಿತ್ತಬೇಕು. ತಳಿ ವೈವಿಧ್ಯವಿಲ್ಲವಾದರೆ ಗುಣಮಟ್ಟ ಕಾಯೋದು ಕಷ್ಟ!" ಋಷಿ ಗಣ ಬಿಸಿಬಿಸಿ ಚರ್ಚೆಯ ನಂತರ ಒಕ್ಕೊರಲಿನಿಂದ ಘೋಷಿಸಿತು. ಅದಾಗಲೇ ಮಾನವ ಜಾತಿ ಸಾಮಾಜಿಕ ಕಟ್ಟುಪಾಡಿಗೆ ಬಿದ್ದು ಚೌಕಟ್ಟಿನೊಳಗೆ ಸಂಕುಚಿತವಾಗುತ್ತ, ಸತ್ತ್ವಹೀನವಾಗುತ್ತ ಸಾಗುತ್ತಿತ್ತು. ಹಾಗೆಂದೇ ಸೃಷ್ಟಿಯ ಹೊಣೆ ಹೊತ್ತಿದ್ದ ದೇವತೆಗಳು, ಋಷಿಗಳು ಸಭೆ ನಡೆಸಿದ್ದರು.

ಕಶ್ಯಪ ಹೇಳಿದ, "ಅದಾಗಲೇ ಅಂಥ ಪ್ರಯತ್ನ ಶುರುವಿಟ್ಟಿದ್ದೇವೆ. ಸಾಕಷ್ಟು ಮಾಡಿಯೂ ಇದ್ದೇವೆ. ಈಗ ಬೇರೆಯೇ ಬಗೆಯ ಪ್ರಯೋಗ ನಡೆಯಲಿ"

ಪ್ರಜಾಪತಿಯ ಇಂಗಿತ ಯಾರಿಗೂ ಅರ್ಥವಾಗಲಿಲ್ಲ. ಹಾಗೆ ತರ್ಕ ಮಾಡುತ್ತ ಕೂರಲು ಅವರಿಗೆ ಪುರುಸೊತ್ತೂ ಇರಲಿಲ್ಲ. ಚಂದ್ರ ವಂಶದ ರಾಜ ಭರತ, ಮಕ್ಕಳಿಲ್ಲದೆ ಬರಡಾಗಿದ್ದ. ಅವನಿಗೊಂದು ಬಲಿಷ್ಠ ಸಂತಾನ ಹೊಂಚುವ ತುರ್ತು ದೇವತೆಗಳಿಗಿತ್ತು.

ಕಶ್ಯಪ ನಕ್ಕ. "ಎರಡು ಬೀಜಗಳ ಕಸಿ ಮಾಡಿ ಒಂದೇ ಬೆಳೆ ತೆಗೆಯಲು ಪ್ರಯತ್ನಿಸಿ! ಚಂದ್ರ ವಂಶ ಬಹುಕಾಲ ಬಾಳಬೇಕಿದೆ. ಹೊಸ ಬೆಳೆ ಸಾಕಷ್ಟು ಸಂಪನ್ನವಾಗಿರುವುದು ಅನಿವಾರ್ಯ"

ಅದಾಗಲೇ ಚಿಕ್ಕಿ ಮೂಡಿತ್ತು. ಕಾಮನ ಸಾಹಸ ವ್ಯರ್ಥವಾಗುವಂತೆಯೇ ಇರಲಿಲ್ಲ. ಮಮತಾಳಿಗೆ ಈಗ ಅರೆ ಎಚ್ಚರ. ಸಂಜೆಗೆ ಮುನ್ನ ಮುದ್ದಿಸಿ, ಒಡಲುಕ್ಕಿಸಿ ಹೋದ ಗಂಡನ ನೆನಪಿನ ಉನ್ಮಾದ. ಇನ್ನೂ ಗುಂಗು ಹರಿದಿರಲಿಲ್ಲ.

ಬೃಹಸ್ಪತಿಯೂ ರತಿಯನ್ನು ಭೆಟ್ಟಿಯಾಗಿಯೇ ಬಂದಿದ್ದ. ಅಂವ ಬಂದಿದ್ದು ಮಮತೆಗೆ ತಿಳಿಯಲಿಲ್ಲ. ಅಥವಾ...

ಬೇಕೆಂದೇ ತಿಳಿವುಗೇಡಿಯಾಗುವುದೂ ಹೆಣ್ಣಿಗೆ ಗೊತ್ತು! ಪ್ರಯೋಗ ಪಾತ್ರೆಯಾದಳು ಮಮತಾ. ಬೃಹಸ್ಪತಿ ತನ್ನ ಕೆಲಸ ಶುರುವಿಟ್ಟ.

ಇದೀಗ ಹೊಸ ಬೆಳಗು. ಮಮತಾ ಮಗ್ಗಲು ಬದಲಿಸುವ ಹೊತ್ತಿಗೆ ಬೃಹಸ್ಪತಿ ಜನಿವಾರ ಬದಲಿಸುತ್ತಿದ್ದ. ಪ್ರಯೋಗ ಯಶಸ್ವಿಯಾಗಿತ್ತು. ಹಾಸಿಗೆಯಲ್ಲೆ ಕನಲಿದಳು ಅವಳು. ಹೊಟ್ಟೆಯಲ್ಲಿ ಹಾದರದ ಮೊಟ್ಟೆ!

ರೋಷದಿಂದ ಹಿಸುಕಿ ಹಿಸುಕಿ ಅತ್ತಳು. ಗೌರವವೇ ಇಲ್ಲದ ತನ್ನ ಗಂಡನ ಪಾಡು ಮುಂದೆ ಏನಾಗಬೇಡ!? ಅವಡುಗಚ್ಚಿ ಗುದ್ದಿಕೊಂಡಳು. ಅದೆಲ್ಲಿದ್ದರೋ ಮರುತರು, ಓಡೋಡಿ ಬಂದು ಅವಳನ್ನು ತಡೆದರು.

"ಮೂಢೇ! ಭರ ದ್ವಾಜಮ್"[1]

ಕಷ್ಟ ಪಟ್ಟು ಮಾಡಿದ ಪ್ರಯೋಗವಿದು! ಮೂರ್ಖಳೇ, ಹಾಳು ಮಾಡಬೇಡ!!

ಒಂಭತ್ತು ತಿಂಗಳು... ಅಸಹನೆಯಲ್ಲೆ ನೂಕಿದಳು. ಭರದ್ವಾಜನನ್ನು ಹೆತ್ತು, ಅಲ್ಲೇ ಬಿಸುಟು ನಡೆದಳು. ದಾಕ್ಷಿಣ್ಯದ ಬಸಿರು. ಮಮತಾಳ ಮಮತೆ ಬತ್ತಿಹೋಗಿತ್ತು.

"ಮಗುವನ್ನ ಮನೆಗೊಯ್ದರೆ ತಾರಾ ಸಿಡುಕುತ್ತಾಳೆ!" ಬೃಹಸ್ಪತಿ ಅಳುಕಿದ. ಮರುತರು ಅದನ್ನು ಹೊತ್ತೊಯ್ದು ಭರತನ ಕೈಲಿತ್ತರು. ನಿರಾಶನಾಗಿದ್ದ ಭರತ ಮಗುವನ್ನ ಸ್ವೀಕರಿಸಿ, ವಿತಥ[2] ಎಂದೇ ಕರೆದ.

ಪ್ರಯೋಗ ಫಲ ವಿತಥ, ಭರತನ ಸಂತಾನನಾಗಿ ಕುಲದೀಪಕನಾದ. ಪ್ರಯೋಗ ನಡೆಸಿದ ಬೃಹಸ್ಪತಿಯನ್ನು ದೇವ– ಋಷಿಗಳು ಕೊಂಡಾಡಿದರು. ಮಮತಾ ಮಾತ್ರ ದೊಡ್ಡವರ ಗುಡಾಣ ತುಂಬುವ ಭರದಲ್ಲಿ ತಾನು ಪ್ರಯೋಗ ಪಶುವಾದಳು. ಗಂಡನಿಂದಲೂ ದೂರಾಗಿ ಕಾಡುಪಾಲಾದಳು. ಚಂದ್ರವಂಶದ ಹೆಸರುಳಿಸಿ, ತಾನು ಹೇಳಹೆಸರಿಲ್ಲವಾಗಿ ಹೋದಳು.

*1 ಭರ= ಕಾಪಾಡು; ದ್ವಾಜಮ್= ಇಬ್ಬರಿಂದ ಹುಟ್ಟಿದವನನ್ನು

*2 ವಿತಥ= ನಿರಾಶೆಯ ಸನ್ನಿವೇಶದಲ್ಲಿ ಸ್ವೀಕರಿಸಲ್ಪಟ್ಟವನು.



---

# ದ್ರೌಪದಿಯ ಅಂತರಂಗ

ಹಿಮಾಲಯದ ಹಾದಿಯಲ್ಲಿ ಬಿದ್ದುಬಿಟ್ಟಳು ದ್ರೌಪದಿ.

ಕಾಣದ ದನಿ ಹೇಳಿತು. "ನೀನು ಅರ್ಜುನನಲ್ಲಿ ಪಕ್ಷಪಾತ ತೋರಿದೆ. ಅದಕ್ಕೇ...."



ಕೊನೆಯ ನಗೆ ನಕ್ಕಳು. ಹಳತೆಲ್ಲ ನೆನಪಾದವು.

ಬೆಂಕಿಯ ಮಗಳಾಗಿ ಹುಟ್ಟಿದ್ದವಳು ಬೆಂಕಿಯಾಗೇ ಬೆಳೆದಿದ್ದಳು ದ್ರೌಪದಿ. ಅಲ್ಲಿ, ಸ್ವಯಂವರದಲ್ಲಿ ಕರ್ಣನಿಗೆ ಮನಸೋತಿದ್ದಳು ಹುಡುಗಿ.

ಏನೇನೋ ರಾಜಕೀಯ– ಧಾರ್ಮಿಕ ಕಾರಣಗಳು... ಅಂತೂ ಕರ್ಣ ಅವಮಾನದಿಂದ ಕುದಿಯುತ್ತ ಹೊರನಡೆಯಬೇಕಾಯ್ತು. ಈ ಗದ್ದಲದಲ್ಲಿ ಮಾರುವೇಷದ ಅರ್ಜುನ ಅವಳನ್ನ ಗೆದ್ದಿದ್ದ.

ಪಾಂಡು ರಾಜನ ಹೆಂಡತಿ ಕುಂತಿ ಬಲು ಜಾಣೆ. ಮಕ್ಕಳ ಒಗ್ಗಟ್ಟು ಒಡೆಯಬಾರದೆಂದೇ ಐವರಿಗೂ ಒಬ್ಬಳನ್ನೇ ಕಟ್ಟಿ ಕೈತೊಳಕೊಂಡಳು.

ಅಲ್ಲಿಂದ ಮುಂದೆ, ಐವರಿಗೂ 'ಪರಸತಿ'ಯಾಗಿಯೇ ದೂರವಾಗುತ್ತ, ಪರಿಪೂರ್ಣ ಪ್ರೇಮಕ್ಕಾಗಿ ಹಂಬಲಿಸುತ್ತ, ನಡುನಡುವೆ 'ಕರ್ಣನ ಕೈಹಿಡಿದಿದ್ದರೆ...' ಅಂದುಕೊಳ್ಳುತ್ತ, ಪತಿವ್ರತೆಯ ಪಟ್ಟ ನಿಭಾಯಿಸುತ್ತ ಉಳಿದುಹೋದಳು!

ನೆನಪಾಯಿತು ದ್ರೌಪದಿಗೆ. ಅರ್ಜುನ ಸುಭದ್ರೆಯನ್ನ ಮದುವೆಯಾದ ದಿನ ತಾನು ಪಟ್ಟ ಸಂಕಟ. ತನ್ನ ಪ್ರತಿರೋಧಕ್ಕೆ ಅಂವ "ನಿನಗೆ ಐವರಿರುವಾಗ ನನಗೆ ಇಬ್ಬರಿರಬಾರದ್ಯಾಕೆ?" ಅಂತ ಕೇಳಿದ್ದ. ನಂತರದ ದಿನಗಳಲ್ಲಂತೂ ಹೋದಬಂದಲ್ಲೆಲ್ಲ ಮದುವೆಯಾಗುತ್ತ ಸಂತಾನ ಬೆಳೆಸತೊಡಗಿದ!

"ಹ್ಞ! ಎಷ್ಟು ದ್ವೇಷವಿತ್ತು ಅರ್ಜುನನ ಮೇಲೆ ನನಗೆ!!" ಅಶರೀರವಾಣಿಯ ಪೆದ್ದುತನಕ್ಕೆ ನಕ್ಕಳು.

"ನಿಜ! ಹೆಣ್ಣಿನ ಮನಸ್ಸು– ಮೀನಿನ ಹೆಜ್ಜೆ!! ನನಗೆ ಸ್ವರ್ಗ ನಿರಾಕರಿಸಲಿಕ್ಕೆ ಇದೆಂಥ ನೆವ ಹುಡುಕಬೇಕಾಯ್ತು ಇವರು!?"

ದೊಡ್ಡ ವಂಶವೊಂದರ ಒಳಗಿನಾಟಕ್ಕೆ ದಾಳವಾಗಿದ್ದಳು ದ್ರೌಪದಿ. ಬೇಕೆಂದಾಗ ಉರುಳಿಸಿದ್ದರು. ಬೇಕುಬೇಕಾದ ಫಲ ಗಳಿಸಿದ್ದರು. ಐದು ಗಂಡಂದಿರಿದ್ದೂ ವಿಧವೆಯಂತೆ, ಐದು ಮಕ್ಕಳಿದ್ದೂ ಬಂಜೆಯಂತೆ ಕೊನೆಯಾಗಿಹೋದಳು.

~

ಹ್ಞ! ಚಾಲಾಕು ಜನ ಕೂಡ ಅವಳನ್ನ ಮರೆತುಬಿಟ್ಟಿದ್ದಾರೆ ನೋಡಿ...

ಕಾಲಿಗೆ ಬಿದ್ದ ಹೆಣ್ಣುಗಳಿಗೆಲ್ಲ 'ಸೀತೆ ಹಾಗೆ ಬಾಳು' ಅನ್ನುತ್ತಾರೆ.

ಹೇಳಿದ್ದು ಕೇಳಿಕೊಂಡು ಮರು ಮಾತು ಪ್ರಶ್ನಿಸದೆ, ಸೀತೆಯಂತೆ ಅವಮಾನ ನುಂಗುತ್ತ ಇದ್ದುಬಿಡಲೆಂದು ಬಯಸುತ್ತಾರೆ.

ಪಾಪ! ಅದೇನು ಹೆದರಿಕೆಯೋ? ರೋಷದ, ಕೆಚ್ಚಿನ, ಸ್ವಾಭಿಮಾನಿ ದ್ರೌಪದಿಯನ್ನ ಬೇಕಂತಲೇ ಮರೆಯುತ್ತಾರೆ.



# ಸೀತೆಯೆಂಬ ಬದನೆಕಾಯಿ ಪುರಾಣ

ಹ್ಞ! ಈಗ ನಾನು ಸೀತೆಯಾಗೋದು ಇವರಾರಿಗೂ ಬೇಕಿಲ್ಲ!!

ಇದೇ ಅಮ್ಮ ಆಗೆಲ್ಲ ಹೇಳ್ತಿದ್ದ ಮಾತು ನಂಗೆ ನೆನಪಿದೆ. "ತಗ್ಗಿ ಬಗ್ಗಿ ನಡೀಬೇಕಮ್ಮಾ, ಸೀತೆ ಹಾಗೆ ಬಾಳ್ಬೇಕು..."

ನಂಗೂ ಅದು ಇಷ್ಟವೇ ಇತ್ತೆನ್ನಿ. ಸರಭರದ ಉದ್ದನೆ ಲಂಗ, ಮುಸ್ಸಂಜೆ ಭಜನೆ, ಆರತಿ, ಬಣ್ಣದ ರಂಗೋಲಿ, ಘಮಘಮದ ಹೂವಲ್ಲಿ ಮಂಗಳಗೌರಿ ಪೂಜೆ...

"ದೇವಿಗೆ ಒಳ್ಳೆ ಹೂವನ್ನ ಏರಿಸಿದ್ರೆ ಮಲ್ಲಿಗೆಯಂಥ ಗಂಡ ಸಿಗ್ತಾನೆ!" ವ್ರತದ ದಾರ ಕೈಗೆ ಸುತ್ತುತ್ತ ಅಮ್ಮ ರಂಗಾಗುತ್ತಿದ್ದಳು. "ನೀನು ಹತ್ತಿ ಹೂವು ಏರಿಸಿದ್ಯೇನೋ... ಮೆತ್ತಗಿದಾರೆ ನೋಡು ನನ್ನಪ್ಪ!" ನಾನು ಅವಳನ್ನ ಮತ್ತಷ್ಟು ಕೆಂಪಾಗಿಸ್ತಿದ್ದೆ.

...ಈಗ, ಎಲ್ಲರ ಮುಖದ ಬಣ್ಣವೂ ಇಳಿದುಹೋಗಿದೆ. ಅಮ್ಮನಂತೂ ಪೂರಾ ಬಿಳುಚಿ ಹೋಗಿದ್ದಾಳೆ. ಮನೆ ಮರ್ಯಾದೆ ಬೀದಿಗೆ ಬಂದು ಕುಂತಿದೆ ಅಂದುಕೊಂಡು ಬೆದರಿದ್ದಾಳೆ. ಪಾಪ! ಅಪ್ಪ 'ಅನುಕೂಲಸ್ಥರ ಮನೆ' ಅನ್ನೋ ಒಂದೇ ಕಾರಣಕ್ಕೆ ಪೂರ್ವಾಪರ ನೋಡದೆ ನನ್ನ ದಾನ ಮಾಡಿಬಿಟ್ಟ. ಧಾರೆ ನೀರಲ್ಲಿ ಕೈತೊಳೆದು ತಾನು ನಿಸೂರಾದ.

ಶ್ರೀಮಂತಿಕೆಯ ಗೌಜಿಯಲ್ಲಿ ನಾನೂ ಹಾಗೇ ಕಳೆದುಹೋಗಿಬಿಟ್ಟೆ. ಜಾಜಿ ಮಲ್ಲಿಗೆಯೇರಿಸಿ ಮಂಗಳಗೌರಿಗೆ ಅಡ್ಡ ಬಿದ್ದಿದ್ದ ನನಗೆ ಸಿಕ್ಕಿದ್ದು ಜೂಜುಕೋರ ಗಂಡು! ಯಾವ ಜನ್ಮದ ಕರ್ಮ ಉಳಿದಿತ್ತೋ ಅಂತ ನಾನು ಹಲ್ಲುಕಚ್ಚಿ ಸುಮ್ಮನುಳಿದೆ. ಅಷ್ಟೇ ಆಗಿದ್ದಿದ್ದರೆ ಇವತ್ತಿನ ಪಂಚಾಯತಿ ಅಗತ್ಯವಿರುತ್ತಿರಲಿಲ್ಲವೇನೋ? ಅಂವ ಒಬ್ಬ ಶುದ್ಧ ಅನುಮಾನದ ಪಿಶಾಚಿಯೂ ಆಗಿದ್ದ.

ಮನೆಗೆ ಬಂದು ಹೋಗುವ ಗಂಡಸರೆದುರು ನಾನು ಬರುವ ಹಾಗೇ ಇರಲಿಲ್ಲ. ತೀರಾ ಆಳುಮಕ್ಕಳ ಹತ್ತಿರ ಕೆಲಸದ ವಿಷಯ ಮಾತಾಡುತ್ತ ನಿಂತರೂ ಅಂವ ನನ್ನೇ ಕೆಕ್ಕರಿಸಿ ನೋಡುತ್ತಿದ್ದ. ಒಳಹೋದ ಕೂಡಲೇ, 'ಬಿಕನಾಸೀ...' ಅಂತ ಕೂಗಾಡುತ್ತ ಧಬಧಬ ಹೇರುತ್ತಿದ್ದ.

ಅತ್ತೆ ಇಲ್ಲದಾಗಲಂತೂ ನನ್ನ ಒಳಗೆ ಹಾಕಿ ಬೀಗ ಜಡಿಯದೆ ಅಂವ ಹೊರಗೆ ಕಾಲಿಡುತ್ತಿರಲಿಲ್ಲ!

ಇದೆಲ್ಲ ತೀರ ಅತಿರೇಕಕ್ಕೆ ಹೋಗಿದ್ದು ಅವತ್ತು... ನನ್ನ ಹೈಸ್ಕೂಲಿನ ಗೆಳೆಯ ಮನೆ ಹುಡುಕಿಕೊಂಡು ಬಂದ ದಿನ. ಟ್ರೇಯಲ್ಲಿಟ್ಟಿದ್ದ ಕಾಫಿಯನ್ನ ಅವನೆದುರೇ ಮುಖಕ್ಕೆ ರಾಚಿ, ಕೆಟ್ಟಾಕೊಳಕ ಮಾತಾಡಿ, ಬಟ್ಟೆ ಬುಟ್ಟಿಯೊಡನೆ ಹೊರತಳ್ಳಿಬಿಟ್ಟನಲ್ಲ... ಅವತ್ತು.

ಇವೆಲ್ಲ ಆಗಿದ್ದು ನನ್ನಿಂದಲೇ ಅಂತ ಮುಖ ಮುದುಡಿಕೊಂಡ ಗೆಳೆಯ, ನನ್ನ ಇಲ್ಲಿ ತಂದು



ಬಿಟ್ಟುಹೋದ. ಇಲ್ಲಿಗೆ ಬಂದ ಮೇಲೆ ನಾನು ಬದಲಾಯಿಸ್ತಿರೋದು ಇದು ನಾಲ್ಕನೇ ಕ್ಯಾಲೆಂಡರು. ಹಳೆಯ ಪುಟಗಳ ಪ್ರತಿ ಡೇಟಿನ ಮುಂದೂ ಚುಕ್ಕಿ. ಆ ಎಲ್ಲ ಚುಕ್ಕಿಗಳಲ್ಲಿ ನನ್ನ ದುಡಿಮೆಯ ಲೆಕ್ಕ. ಸುಖವಿತ್ತು ನನಗಿಲ್ಲಿ, ಈ ಇವರೆಲ್ಲ ಬರುವ ತನಕ.

ಹೌದು. ಅವನ ಬಿಸಿನೆಸ್ಸು ಮಖಾಡೆ ಮಲಗಿತಂತೆ. ತೋಟದ ರೇಟು ಬಿದ್ದು ಹೋಯ್ತಂತೆ. ಅಕ್ಕ, ತಮ್ಮ ಕೈಕೊಟ್ಟು ತಾರಮ್ಮಯ್ಯ ಆಡಿಬಿಟ್ಟರಂತೆ! ಜಾತಕ ಗುಣಿಸಿದ ಜ್ಯೋತಿಷಿ, ಮನೆ ಲಕ್ಷ್ಮಿಯನ್ನ ಕರಕೊಂಡು ಬಾ ಹೇಳಿದರಂತೆ...

ಹಾಗಂದುಕೊಂಡು ಬಂದಿದ್ದಾನೆ. ಬಲಕ್ಕಿರಲಿ ಅಂತ ಜೊತೆಗೆ ನನ್ನಪ್ಪ– ಅಮ್ಮನನ್ನೂ, ಊರ ನಾಲ್ಕು ಮಂದಿಯನ್ನೂ ಕರೆತಂದಿದ್ದಾನೆ! ಈಗ, ಸುಮ್ಮಸುಮ್ಮನೆ ತಲೆ ತಗ್ಗಿಸಿ ನಿಂತ ಅಪ್ಪ ಅಮ್ಮ, ನನ್ನ ವಾದಕ್ಕೆ ಸಿಡುಕ್ತಿದ್ದಾರೆ. ಊರ ಜನ ಬಾಯಿಗೆ ಬಂದಿದ್ದೇ ಹದ ಹೇಳ್ತಿದ್ದಾರೆ.

"ಹೆಣ್ಣಾದವಳು ಅನುಸರಿಸ್ಕೊಂಡು...' ಮತ್ತದೇ ಶತಶತಮಾನದ ಹಳೇಹಪ್ಪಟ್ಟು ಡೈಲಾಗು.

ಅವತ್ತು, ರಾಮನಂಥ ರಾಮನ್ನೇ ನಿರಾಕರಿಸಿ ಗೆದ್ದಿದ್ದಳು ಸೀತೆ. ಆದರೆ... ಯಾವ ಆದರ್ಶದ ಕಾರಣವೂ ಇಲ್ಲದೆ ನನ್ನ ಹೊರಗಟ್ಟಿದ ಈ ಗಂಡಸನ್ನ ನಿರಾಕರಿಸುತ್ತಿರುವ ನನಗೆ ಇವತ್ತು ಕವಡೆ ಕಿಮ್ಮತ್ತೂ ಇಲ್ಲ!

"ಸೀತೆಯಂತೆ ಬಾಳಿ ಬದುಕು" ಅಂದಿದ್ದ ಇವರ್‍ಯಾರಿಗೂ ಈಗ, ನಾನು 'ಸೀತೆ'ಯಾಗಿ ಗೆಲ್ಲೋದು ಬೇಕಿಲ್ಲ!



---

# ಅಹಲ್ಯೆಯೆಂಬ ಆತ್ಮ ವಂಚನೆ

ಯಾಕೋ ಅಹಲ್ಯೆ ಇಷ್ಟವಾಗೋದೇ ಇಲ್ಲ!

ಇರಬಹುದು, ಪಂಚ ಮಹಾಪತಿವ್ರತೆಯರ ಲಿಸ್ಟಲ್ಲಿ ಅವಳದೊಂದು ಹೆಸರು. ಅವಳ ಕಥೆಗೋ, ಮುಖಗಳು ಹತ್ತು ಹಲವು. ಅಹಲ್ಯೆಯ ಗಂಡ ಗೌತಮ, ಸ್ವರ್ಗದಲ್ಲೊಂದು ಸೀಟು ಗಿಟ್ಟಿಸಲು ತಪಸ್ಸಿಗೆ ಕುಂತಿದ್ದ. ಲೋಕೋದ್ಧಾರದ ಕೆಲಸಕ್ಕೆ ಅಲ್ಲೊಂದು ಕುರ್ಚಿ ಪಡೆಯುವ ಜರೂರತ್ತಿತ್ತು ಅವನಿಗೆ.

ಅದರ ಹೊಣೆ ಹೊತ್ತಿದ್ದ ದೇವತೆಗಳೆಲ್ಲ ಸುರೆಯಲ್ಲಿ ಮುಳುಗಿ, ಅಪ್ಸರೆಯರ ಅಂಗೋಪಾಂಗಗಳ ಮೇಲೆ ಈಜಾಡುತ್ತಿದ್ದರು. ಇತ್ತ ಅಹಲ್ಯೆ, ಕಾದು ಕುಂತಿದ್ದಳು. ಘಮ್ಮನೆ ಅರಳಿದ್ದಳು. ಸುಮ್ಮನೆ ಮುದುಡಿ ಮಲಗಿದ್ದಳು, ಕಾಮನ ಗಾಳಿ ಸೋಂಕಿ.

ದೇವರಾಜ ಇಂದ್ರ, ಮುಗಿಲಿಂದಲೇ ಅವಳನ್ನ ಕಂಡ. ಸುಮ್ಮನಿರಲಾಗಲಿಲ್ಲ ಅವನಿಂದ. ಇರುವುದಾದರೂ ಹೇಗೆ? ಅವನೊಬ್ಬ ರಾಜ. ಮಿಗಿಲಾಗಿ ದೇವತೆ ಬೇರೆ! ರಾಜರಿಗೆ ಅಬಲೆಯರ ಮೇಲೆ ಪ್ರೀತಿ ಬಹಳ. ಇಂದ್ರ, ಐರಾವತದ ಮೇಲೇರಿ ಬಂದ.

ಚಿಗುರು ಮೀಸೆಯ ಚಿರಜೌವನಿಗನ ಕಂಡು ಸಣ್ಣಗೆ ನರಳಿದಳು ಅಹಲ್ಯೆ. ಒಳಗೊಳಗೇ ಹಿಗ್ಗುತ್ತಿತ್ತು ಹಿಗ್ಗು! ಇಂದ್ರ ಕುಟೀರದ ಒಳಹೊಕ್ಕ. ಅಹಲ್ಯೆಯ ಒಳಗೂ... ಬಯಕೆ ಚೆಲ್ಲಾಡಿತು.

ಎಷ್ಟು ದಿನ ನಡೆಯಿತೋ ಕೂಡುತ್ತ ಕಳೆಯುವಾಟ!? ಲೆಕ್ಕವಿಡಲಿಲ್ಲ ಇಬ್ಬರೂ. ಗುಹೆಯಲ್ಲಿ ಕುಂತಿದ್ದ ಗೌತಮನ ಮೂಗಿಗೆ ಹಾದರ ವಾಸನೆ ಸೋಕಿತು. ಅಸಲಿಗೆ ಅದು ತಾಕಿದ್ದು ಕಿವಿಯನ್ನ.

ಇರಲಿ... ಮಹಾ ಜ್ಞಾನಿಯಂತೆ ಗೌತಮ. ತಿಳಿಯಿತೆಂದೇ ಇರಲಿ. ಹೆಂಡತಿಯನ್ನ ತಿಳಿಯಲಾಗದವನು ಬ್ರಹ್ಮವನ್ನೇನು ತಿಳಿದಾನು ಅನ್ನಬಾರದಲ್ಲ ಜನ? ಅಂತೂ ಎದ್ದು ಬಂದ.

ಎದ್ದು ಹೊರಟಿದ್ದ ಇಂದ್ರ. ಅಂವ ತಡಿಕೆ ಸರಿಸುತ್ತ ಮೈಮುರಿಯುವಾಗ, ಚಾಪೆಯ ಮೇಲೆ ಅಹಲ್ಯೆ ಸುಖದುಸಿರು ಬಿಡುತ್ತಿದ್ದಳು. ಇಂದ್ರ ತಿರುತಿರುಗಿ ನೋಡುತ್ತ ಮುನ್ನಡೆದ. ಗೌತಮ ಅವನನ್ನು ಬೇಲಿಯೊಳಗೇ ತಡೆದ. ಹೊರಗೆ ಗಂಡಸರ ಜಟಾಪಟಿ.

ಇಂದ್ರ, ದೇವರಾಜನಿರಬಹುದು. ಆದರೂ ಅವನ ವೀರ್ಯಕ್ಕೆ ಗೌತಮನಂಥವರು ಹೊಯ್ಯುವ ಹವಿಸ್ಸೇ ಆಹಾರ. ತಲೆತಗ್ಗಿಸಿ ನಿಂತಿದ್ದವನ ಮೈಯೆಲ್ಲ ಮಿಳಮಿಳ ಕಣ್ಣುಗಳು. ರೆಪ್ಪೆ ಅಲುಗದ ದೇವಕಣ್ಣುಗಳು. ಎಲ್ಲೆಲ್ಲೂ ಚಲ ಚಲ ಚಲ ಚಂಚಲ!

ಗೌತಮನ ಶಾಪ ಫಲಿಸಿತ್ತು. ಇಂದ್ರ ಮೈತುಂಬ ಕಣ್ಣು ಹೊತ್ತು ಕುರುಡನಂತೆ ಸ್ವರ್ಗದ ಹಾದಿ ಹಿಡಿದ. ಅಹಲ್ಯೆ ಮೈತುಂಬ ಸೆರಗು ಹೊದ್ದು ಗಂಡನೆದುರು ಬೆತ್ತಲಾದಳು.

"ನಿಮ್ಮಂತೆ ವೇಷ ಕಟ್ಟಿ ಬಂದು ಮೋಸ ಮಾಡಿದ" ಅಂತ ದೂರಿದಳು. 'ಹೋ...' ಎಂದು ಧುಮುಕಿದಳು. ಅವಳ ವಂಚನೆಗೆ ಮಾತು ಹೊಳೆಯದೇ ಗೌತಮ ಮೂಕವಾದ. ಕಲ್ಲಿನಂತೆ ನಿಂತುಬಿಟ್ಟ. ಜನ, "ಅಹಲ್ಯೆ ಕಲ್ಲಾದಳು" ಅಂದುಕೊಂಡರು.

ರಾಮ ನಡೆದು ಬಂದಾಗ ಕಾಲ್ತೊಡರಿದಳು ಅಹಲ್ಯೆ. ಅಂವ ಕೂಡ ರಾಜ. ಪರರ ಹೆಂಡಿರಿಗೆ ನ್ಯಾಯ ಕೊಡಿಸುವಲ್ಲಿ ಯಾವ ರಾಜರೇನು ಕಡಿಮೆ? ಗೌತಮನನ್ನು ಕರೆಸಿದ, "ಶುಭಮಸ್ತು" ಹರಸಿದ.

ಮತ್ತೀಗ ಅಹಲ್ಯೆ, ನದಿಯಲ್ಲಿ ಮಿಂದುಬಂದಳು. ಗಂಡನನ್ನ ಕೂಡಿಕೊಂಡು, "ನಾನೊಬ್ಬ ಪತಿವ್ರತೆ" ಅಂದಳು.

ಅಮ್ಮ ನಿತ್ಯ "ಸೀತಾ ಮಂಡೋದರೀ ಅಹಲ್ಯಾ ತಾರಾ ದ್ರೌಪದೀ ತಥಾ..." ಶ್ಲೋಕ ಹೇಳಿ ಕೆನ್ನೆಕೆನ್ನೆಗೆ ಕೈ ಬಡಿದುಕೊಳ್ತಾಳೆ. ಶುದ್ಧ ಒರಟ ಭಾವನ ಜತೆ ಬಾಳಲಾಗದೆ, ಹಳೆ ಗೆಳೆಯನ



ನೆನಪಲ್ಲಿ ಓಡಿ ಬಂದ ಅಕ್ಕನಿಗೆ ಬಾಯ್ತುಂಬ "ಸೂಳೆ ಮುಂಡೆ!" ಅಂತೆಲ್ಲ ಬೈಯ್ಯುತ್ತಾಳೆ.

ಅಕ್ಕ ಅಹಲ್ಯೆಯಲ್ಲ... ಅವಳಿಗೆ ಸ್ವಾಭಿಮಾನವಿದೆ ಅನ್ನೋದು ಅಮ್ಮನಿಗೆ ಹೇಗೆ ಗೊತ್ತಾಗಬೇಕು?

---

# ರಾಧೆಯ ಪಾಲು

ಕೃಷ್ಣ, ಬಿದಿರ ಕೊಳವೆಯೂದಿದ.
ಕೊಳಲಾಗಿಸಿದಳು ರಾಧೆ!

ಹೌದು. ಗೀತಾ ಮಾಸ್ತರು ಕೃಷ್ಣನ ಕೊಳಲಿಗೆ ದನಿ ತುಂಬಿದ್ದೇ ಅವಳು. ಹಾಗವಳು ಸುಮ್ಮಸುಮ್ಮನೆ ರಾಧೆಯಾದವಳಲ್ಲ. ಆರಾಧನೆಯೇ ಅವಳಾಗಿ, ವ್ಯಾಕರಣದ ಮೂಲ ಧಾತುಗಳೆಲ್ಲ ಬಸಿದಿಳಿದು, 'ರಾಧಾ' ಉಳಿದಳು, ರಾಧೆಯಾದಳು. ಕಥೆಯೋ, ಕಲ್ಪನೆಯೋ... ಹಾಗೊಬ್ಬಳಿದ್ದಳು ಅಂದುಕೊಳ್ಳುವುದೇ ಎಷ್ಟು ಸೊಗಸು!

ಹಾಗಂತ, ಈ ರಾಧೆಯ ಕಥೆ ಅಷ್ಟು ಸಲೀಸಲ್ಲ. ಕೃಷ್ಣನ್ನ ತಬ್ಬಿಕೊಂಡು ಗೋಕುಲ ಸುತ್ತೋದಕ್ಕೇ ಅದು ಮುಗಿಯೋದಿಲ್ಲ. ಅವಳಿಗೊಂದು ಮನೆಯೂ ಇತ್ತು. ಜಟಿಲೆ, ಕುಟಿಲೆಯರೆಂಬ ಅತ್ತೆ, ನಾದಿನಿಯರೂ ಇದ್ದರು, ಅವರ ಕಾಟವೂ ಇತ್ತು.

ಹೌದು. ರಾಧೆಗೆ ಮದುವೆಯಾಗಿತ್ತು! ಅವಳ ಗಂಡ ಆಯತನ, ಕಂಸನ ದಂಡಿನಲ್ಲಿದ್ದ.

ಕೃಷ್ಣ ರಾಧೆಯನ್ನ ಪ್ರೀತಿಸಿದ್ದ. ಸುಳ್ಳಲ್ಲ. "ಸಂಭವಾಮಿ ಯುಗೇ ಯುಗೇ..." ಮಾತು ನಡೆಸಬೇಕಿತ್ತು. ಎಲ್ಲ ಸಾಧನೆಗೂ ಹೆಣ್ಣು ಅಡ್ಡಿ. ಅವಳು ಬೇರೆ ತನ್ನವಳಲ್ಲ!
ಗೊಲ್ಲರ ಹುಡುಗಿ ರಾಧೆ, ರಾಣಿಯಾಗಬಹುದಿತ್ತು ಹೇಗೆ? ಕೃಷ್ಣನ ಹುಟ್ಟು ಕೊಟ್ಟಿಗೆಯಲ್ಲಲ್ಲ. ಅಂತೂ ಅಂವ ಹೊರಟ. ರಾಧೆ ಏನಾದಳೋ...? ಹುಚ್ಚಾದಳೋ, ಬೆಪ್ಪಾದಳೋ, ಭೈರಾಗಿಯೇ ಆಗಿಹೋದಳೋ!?

ಬರೆಯಲಿಲ್ಲ ಯಾರೂ... ಬರೆದವರು ಗಂಡಸರು.

ಅವಳ ಪ್ರೇಮವನ್ನ 'ಭಕ್ತಿ' ಅಂದು ತಿಪ್ಪೆ ಸಾರಿಸಿದರು. ವೃಂದಾವನ ಕಟ್ಟಿ ಕೈಮುಗಿದರು.

ಕೊಳಲಿನ ಕಣ್ಣು ಕಟ್ಟಿತು. ಕೊನೆಗೂ, ಧರ್ಮ ಸ್ಥಾಪನೆಯಾಯಿತು!

# ಯಶೋಧರೆಯ ಪ್ರಶ್ನೆಗಳು...

ಹಾಗೆ ನೋಡಿದರೆ ಸಿದ್ಧಾರ್ಥನಿಗೆ ಅವತ್ತೇ ಜ್ಞಾನೋದಯವಾಗಿತ್ತು. ರೋಗಿಯನ್ನ, ಮುದುಕಿಯನ್ನ, ಹೆಣವನ್ನ ನೋಡಿದನಲ್ಲ, ಅವತ್ತು. ಅದಕ್ಕೇ ಆತ ಅಪರಾತ್ರಿಯಲ್ಲಿ ಹೆಂಡತಿ, ಮಗುವನ್ನು ಬಿಟ್ಟು ನಡೆದಿದ್ದ. ಅವತ್ತು ಹೊರಟ ಸಿದ್ಧಾರ್ಥ, ಬೋಧಿ ವೃಕ್ಷದ ಕೆಳಗೆ ಕುಳಿತು 'ಬುದ್ಧ'ನಾದ.

ಮಾರನನ್ನು ಗೆದ್ದ ಸಿದ್ಧಾರ್ಥನಿಗೆ ಜೀವನ ಸಾರದ ಬೋಧೆಯಾಗಿತ್ತು.
ಬೆಳಕು ಹರಿಯುವ ಹೊತ್ತಿಗೆ ಯಶೋಧರೆಯ ಬಾಳು ಕತ್ತಲಾಗಿತ್ತು.

~

ಸಿದ್ಧಾರ್ಥ ಸುಮ್ಮಸುಮ್ಮನೆ ಬುದ್ಧನಾಗಲಿಲ್ಲ. ಅವನಲ್ಲಿ ತುಂಬಿದ್ದ ಅಪಾರ ಪ್ರೇಮ – ಕರುಣೆಗಳೇ ಆತನನ್ನ ಜ್ಞಾನಿಯಾಗಿಸಿತ್ತು. ಅವನ ಪ್ರೇಮಕ್ಕಂತೂ ದಂಡೆಗಳೇ ಇರಲಿಲ್ಲ. ಅವರಿವರೆನ್ನದೆ ಎಲ್ಲರೂ ಅದರ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದರು.

ಮುಂದೆ ಬುದ್ಧ, ಹಿಂದೆ ಜನರು ಭಿಕ್ಕುಗಳಾಗಿ ನಡೆದರು. ಬರೀ ಪ್ರೇಮವನ್ನೆ ತುಂಬಿಕೊಂಡವರು ಊಟಕ್ಕೆ ಭಿಕ್ಷೆಯನ್ನ ತಾನೆ ಬೇಡಬೇಕು?

ನಡೆಯುತ್ತ ನಡೆಯುತ್ತ ಬುದ್ಧ ಪರಿವಾರ ಸಾಗರವಾಗುತ್ತ ಸಾಗಿತು. ಬರೀ ಮುಗುಳ್ನಗುತ್ತಲೇ ಬುದ್ಧ ಲೋಕಗುರುವಾದ.

ಅವನನ್ನ ಯಾರೂ ಪೀಠಕ್ಕೇರಿಸಲಿಲ್ಲ!

~

ಯಶೋಧರೆ ಕಾಯುತ್ತಿದ್ದಳು. ಮನೆ ಬೆಳಗುವ ಹಣತೆ, ಲೋಕ ಬೆಳಗುವ ಸೂರ್ಯನಾದ ಖುಷಿ ಅವಳಿಗೆ. ಜತೆಗೆ,

'ಹೆಣ್ಣಿಂದ ತಪ್ಪಿಸಿಕೊಂಡರೆ ಮಾತ್ರ ಮೋಕ್ಷ' ಎಂದು ಸಾಧಿಸಿದವನ ಬಗೆಗೆ ನೋವು ಕೂಡ.

ಸಿದ್ಧಾರ್ಥ ಎದ್ದು ಹೋದ ಮರು ದಿನದಿಂದಲೇ ಒಂದು ಪ್ರಶ್ನೆಯನ್ನ ಎದೆಯಲ್ಲಿಟ್ಟು ಕಾದಿದ್ದಳು. 'ಇದು ನನ್ನ ಹೆಂಡತಿತನಕ್ಕೆ ಅವಮಾನ!' ನೋವಲ್ಲೂ ಸಿಡುಕಿದ್ದಳು. ಆತ ಬಿಟ್ಟು ಹೋದ ನೋವಿಗಿಂತ ಹೇಳದೆ ಹೋದ ಬೇಸರವೇ ಹೆಚ್ಚು ಕಾಡುತ್ತಿತ್ತು ಅವಳನ್ನು.

~

ಅಂತೂ ಒಂದು ದಿನ ಬುದ್ಧ ಬಂದ.

ಎಲ್ಲ ಊರುಗಳಿಗೆ ಬಂದಂತೆ, ಕಪಿಲವಸ್ತುವಿಗೂ ಬಂದ. ಆದರದ ಸ್ವಾಗತ, ಸತ್ಕಾರ ನಡೆಯಿತು. ಭಂತೇ ಗಣ 'ಶಾಕ್ಯ ಮುನಿಯ ತವರು' ಎಂದು ಹರ್ಷಿಸಿತು. ಒಂದಷ್ಟು ದಿನ ಅಲ್ಲಿ ನಿಲ್ಲಬೇನ್ನುವ ಕೋರಿಕೆಗೆ ಸಮ್ಮತಿಯೂ ದೊರೆಯಿತು.



ಯಶೋಧರೆಗಿದು ಸುಸಮಯ. ಎದೆಯಲ್ಲಿನ ಪ್ರಶ್ನೆಗಿನ್ನೂ ಜೀವವಿದೆ. ಕೇಳಬಹುದೇ ಬುದ್ಧನನ್ನ? ಆತ ಆಗಲೆಂದ. ಅವಕುಂಠನದಲ್ಲಿ ಬಂದ ಪತ್ನಿ, ಪತಿಯನ್ನ ಕೇಳಿದಳು.

"ವೀರ ಮರಣದ ಅವಕಾಶವೇ ಹೆಚ್ಚಿರುವ ಯುದ್ಧಕ್ಕೂ ನಗುನಗುತ್ತ ತಿಲಕವಿಟ್ಟು ಕಳಿಸುವ ರಾಜ ಪತ್ನಿ ನಾನು. ಮುಮುಕ್ಷುವಾಗಿ ಹೋಗುತ್ತೇನೆಂದು ಹೇಳಿ ಹೊರಟಿದ್ದರೆ ಬೇಡವೆನ್ನುತ್ತಿದ್ದೆನೆ? ಹೇಳಿ.... ಯಾಕೆ ಹಾಗೆ ಕದ್ದು ಹೊರಟು ನನ್ನ ಅವಮಾನಿಸಿದಿರಿ?"

ಬುದ್ಧ ಉತ್ತರ ಕೊಡಲಿಲ್ಲ.

ನಗು ಮಾಸಿತು. ಕಣ್ತಪ್ಪಿಸಿ ಕುಳಿತ.

ಅವನ ಸೋಲು, ಅವಳ ಗೆಲುವು. ಅದೇ ಹುಮ್ಮಸ್ಸಿನಲ್ಲಿ ಎರಡನೆ ಪ್ರಶ್ನೆ ಹೊರಟಿತು.

"ನಿಮ್ಮ ಮಗ ರಾಹುಲ... ತಂದೆಯಾಗಿ ಅವನಿಗೆ ನೀವೇನು ನೀಡಬಲ್ಲಿರಿ?"

ಊಹೂಂ... ಈ ಬಾರಿಯೂ ಬುದ್ಧನ ಉತ್ತರವಿಲ್ಲ.

ಆದರೆ, ಮುಖದಲ್ಲಿ ನಗು ತುಂಬಿತು. ಮಗನನ್ನು ಕರೆದು ತಬ್ಬಿ, ಕಾವಿ ಬಟ್ಟೆ ನೀಡಿದ. ಅವನನ್ನೂ ಜತೆಯಲ್ಲಿ ಕರಕೊಂಡು ಹೊರಟುಬಿಟ್ಟ!

ಯಶೋಧರೆಯ ಪ್ರಶ್ನೆಗಳು ಮುಗಿದುಹೋದವು. ಬುದ್ಧ ಪರಿವಾರದೊಡನೆ ತಾನೂ, ಒಂದಾಗಿ ನಡೆದಳು...



# ಬಿಲ್ವ ಮಂಗಳನ ವೇಶ್ಯೆ

ಒಂದಾನೊಂದು ಕಾಲದಲ್ಲಿ ಓದಿಕೊಂಡಿದ್ದ ಕಥೆ ಧುತ್ತನೆ ನೆನಪಾಗಿದ್ದಕ್ಕೆ ಯಾವ ವಿಶೇಷ ಕಾರಣಗಳೂ ಹೊಳೀತಿಲ್ಲ. ಹೀಗೆ ನೆನಪಾದ ಕಥೆಯನ್ನ ನಿಮ್ಮೊಟ್ಟಿಗೆ ಹಂಚಿಕೊಳ್ಳೋಣವೆನ್ನಿಸಿತು.

ಅವನೊಬ್ಬ ಸದಾಚಾರಿ. ಮಹಾಭಕ್ತ. ಹೆಸರು– ಬಿಲ್ವ ಮಂಗಳ. ನಿದ್ರೆ, ಹಸಿವು, ಮೈಥುನಗಳಷ್ಟೇ ಭಕ್ತಿಯೂ ಸಹಜವೇನೋ ಅನ್ನುವಷ್ಟು ಭಗವದ್ಭಕ್ತಿ ಅವನಲ್ಲಿ. ಅಥವಾ, ನಿದ್ರೆ, ಹಸಿವಿನಷ್ಟೇ ತೀವ್ರವಾಗಿತ್ತು ಅವನ ಕಾಮ ವಾಂಛೆ.

ಚೂಡಾಮಣಿ, ಸೌಂದರ್ಯ ಶಿರೋಮಣಿ. ಹುಟ್ಟಿದ್ದು ವೇಶ್ಯೆಯರ ಕುಲದಲ್ಲಾದರೂ ಮೈ ಮಾರಾಟಕ್ಕಿಟ್ಟಿರಲಿಲ್ಲ. ದಿನಾಲೂ ಅವಳೊಡನಾಡಲು ಹಂಬಲಿಸಿ ಬರ್ತಿದ್ದ ಬಿಲ್ವ ಮಂಗಳ ಅವಳನ್ನ ಮದುವೆಯಾಗಿರಲಿಲ್ಲ, ಅಷ್ಟೆ.

ಒಮ್ಮೆ ಹೀಗಾಯ್ತು. ಆ ರಾತ್ರಿ ಗುಡುಗು ಸಿಡಿಲಿನ ಮಳೆ 'ಧೋ' ಅಂತ ಸುರೀತಿತ್ತು. ಕಾರ್ಗತ್ತಲು ಬೇರೆ. ಮನೆಯಲ್ಲಿ ಆತ ಚಡಪಡಿಸಿ ಹೋಗಿದ್ದ. ಪ್ರತಿಬಾರಿಯ ಮಿಂಚೂ ಅವನಲ್ಲಿ ಕಾಮೋದ್ರೇಕ ಹೆಚ್ಚಿಸ್ತಿತ್ತು.

ಅತ್ತ ಚೂಡಾಮಣಿ, ಈ ಮಳೆಯಲ್ಲಿನ್ನು ಆತ ಬರಲಾರನೆಂದು ಹೊದ್ದು ಮಲಗುವ ಏರ್ಪಾಡಿನಲ್ಲಿದ್ದಳು.

ಅರ್ಧರಾತ್ರಿ ಸರಿದಿರಬಹುದು. ಮನದನ್ನನಿಲ್ಲದೆ ನಿದ್ರೆ ಕಳಕೊಂಡಿದ್ದವಳ ಕಿವಿಯಲ್ಲಿ ಬಾಗಿಲು ಬಡಿಯುವ ಸದ್ದು! ಚಿಮಣಿಯ ಬೆಳಕಲ್ಲಿ ಕಂಡಿದ್ದು, ಮಳೆಯಲ್ಲಿ ತೊಯ್ದುತೊಪ್ಪಡಿಯಾಗಿ ನಿಂತಿದ್ದ ಬಿಲ್ವ ಮಂಗಳ!!

ಹೊರಗೆ ಕೆರೆ ತುಂಬಿ ಹರಿದ ನೀರು ಮನೆ ಹೊಸಿಲು ದಾಟಲು ಹವಣಿಸುತ್ತಿತ್ತು. ಸಿಡಿಲಿಗೆ ಸುಟ್ಟು ಕರಕಲಾಗಿದ್ದ ಮರದಲ್ಲಿ ಇನ್ನೂ ಹೊಗೆಯಾಡುತ್ತಿತ್ತು!

ಬಂದವನನ್ನ ಬಾಚಿ ತಬ್ಬಿದವಳೇ ಬಿಕ್ಕಿಬಿಕ್ಕಿ ಅತ್ತಳು. "ನಿಮಗೇನಾದರೂ ಆಗಿ ಹೋಗಿದ್ದರೆ?"

ಬಿಲ್ವ ಮಂಗಳ ನಸುನಕ್ಕ. "ಎಲ್ಲ ನಿನಗಾಗಿ. ನಿನ್ನ ಪಡೆಯಲಿಕ್ಕೆ ಏನೆಲ್ಲ ಮಾಡಬಲ್ಲೆ ನೋಡು!"

ಥಟಕ್ಕನೆ ತಲೆ ಎತ್ತಿದ ಚೂಡಾಮಣಿ ಹೇಳಿದ್ದೊಂದೇ ಮಾತು, "ಛೆ! ಏನೂ ನೀಡದ ಈ ಮೂಳೆ ಮಾಂಸದ ದೇಹವನ್ನ ನೋಡಲಿಕ್ಕೆ, ಪಡೆಯಲಿಕ್ಕೆ ನೀವು ಇಷ್ಟು ಸಾಹಸಪಡುವ ಬದಲು, ಆ ಭಗವಂತನನ್ನ ಪಡೆಯೋ ಸಾಹಸ ಮಾಡಿದಿದ್ದರೆ? ಬ್ರಹ್ಮಾನಂದವೇ ನಿಮ್ಮ ಪಾದಸೇವೆ ಮಾಡಿಕೊಂಡು ಬಿದ್ದಿರುತ್ತಿತ್ತು!"

ಕಾಲ ಕೂಡಿ ಬಂದಿತ್ತು. ಮರು ಮಾತಿಲ್ಲದೆ ಎದ್ದ ಬಿಲ್ವ ಮಂಗಳ ದೇವಾಲಯದಲ್ಲಿ ನಿಂತಿದ್ದ.

ಮುಂದೆ ಆತ ವೈಷ್ಣವ ಪಂಥವೊಂದರ ಪ್ರಮುಖ ಗುರುವೂ ಆದ. ಹಾಗೆಲ್ಲ ಆದಮೇಲೂ ಆತ ಚೂಡಾಮಣಿಯನ್ನು ಮರೆಯಲಿಲ್ಲ. ಅವಳನ್ನು 'ಗುರು'ವೆಂದು ಕರೆದು, ತನ್ನ ಕೃತಿಗಳಲ್ಲಿ ಅವಳ ಹೆಸರುಳಿಸಿ ಅಮರಳನ್ನಾಗಿಸಿದ.

~

"ಗಂಡಸನ್ನ ಕೆಳಗೆಳೆಯೋಳು ಹೆಣ್ಣು" ಅಂತ ಮೊನ್ನೆ ಯಾರೋ ಭಾಷಣ ಬಿಗೀತಿದ್ದರು. ಬಹುಶಃ ಈ ಕಥೆಯ ನೆನಪಿನ ನೆವ, ಅದೇ ಇರಬಹುದು!



# ಪುಟ್ಟ ಹುಡುಗಿ ಭಾಗೀರಥಿ

ಎಷ್ಟೊಂದು ಕಂಬ ಸಾಲು?
ಕಂಬ ಕಂಬ ತಬ್ಬಿ ನಿಂತಿವೆ ಉಪ್ಪಿನಾಟದ ಮಕ್ಕಳು.
ಎಲ್ಲಿ ಹೋದವು ಆ ನನ್ನ ದಿನಗಳು?
ಉಪ್ಪು ಬೇಕಾ ಉಪ್ಪು...
ಉಪ್ಪಿನ ಋಣ ತೀರಬೇಕಿನ್ನೂ.

ಅರಳಿ ಮರದ ಕೆಳಗೆ ಅನಾಥೆ ಅಳುತ್ತಿದ್ದೆನಂತೆ.
ಅಂಗೈಲಿಟ್ಟು ಸಾಕಿದರು. ನಿಜ.
ಕಣ್ರೆಪ್ಪೆ ಹಾಗೆ ಕಾದರು.
ಈಗಿನ ಕಾಲದಲ್ಲಿ ಹೀಗೆ... ಅಪರೂಪದ ಜನ–
ಅಪ್ಪ, ಅಮ್ಮ.

ಅವರ ಮನೆಗೆ ಹೀಗೊಬ್ಬ ಬರುತ್ತಾನೆ ಯಾವಾಗಲೂ.
ಹದಿನಾಲ್ಕಕ್ಕೆ ಮದುವೆಯಾಗಿತ್ತಂತೆ. ಈಗ ಇಪ್ಪತ್ತು.
ಚೊಚ್ಚಲ ಬಾಣಂತಿ ಹೆಂಡತಿ, ಹಾಗೇ ಹೊರಟುಹೋದಳು.
ಅಂವ ಪುರೋಹಿತ. ಹೆಂಡತಿ ಸತ್ತು ಹೊಟ್ಟೆಪಾಡಿಗೆ ಸೊನ್ನೆ.
ಮದುವೆ, ಮುಂಜಿ, ತಿಥಿ...
ಜೀವನ ನಡೆಯಬೇಕು.

ಛೆ! ನಾನು ನೆರೆಯಲೇಬಾರದಿತ್ತು.
ವಾರಗೆಯ ಹುಡುಗಿಯರೀಗ ಹೈಸ್ಕೂಲು ಮುಗಿಸುತ್ತಾರೆ.
ಓ! ನಾಳೆ ತಪ್ತ ಮುದ್ರಾಂಕ ಧಾರಣೆ ನನಗೆ!!
ಯಾವ ಜಾತಿಯೋ, ನಾನು ಯಾವ ಕುಲವೋ?
ದೋಷವೆಲ್ಲ ಸುಟ್ಟುಹೋಗುವುದಂತೆ!

ಅಮ್ಮ ಯಾರ ಹತ್ತಿರವೋ ಹೇಳುತ್ತಿದ್ದಾರೆ.
"ಜೋಡು ಜಡೆಯ ಪುಟ್ಟ ಭಾಗೀರಥಿ, ಇನ್ನು 'ಆಚಾರ್ರ ಹೆಂಡತಿ'ಯಾಗುತ್ತಾಳೆ.
ಭಾಗಮ್ಮನಾಗಿ ಅವರಿವರಿತ್ತ ಬಾಗಿನ ಹೊರುತ್ತಾಳೆ!"

# ಕವಿತೆಗಳಲ್ಲ ಇವು ಸಖಿಯರೇ...

ಹಣೆಯಲ್ಲಿ ಅಮಾವಾಸ್ಯೆ.
ನಸೀಬು ಸುತ್ತುತ್ತ, ಮತ್ತೆ ಚಂದಿರ ಮೂಡಲು ನಾಲ್ಕು ವರ್ಷ ಬೇಕಾದವು.
ಹೊಸ ನೀರು ಹಳತನ್ನ ಕೊಚ್ಚಿಕೊಂಡು ಹರಿಯುತ್ತಿತ್ತು,
ಹುಣ್ಣಿಮೆ ಕನಸು ತೆರೆದಿತ್ತು.

"ನಿನ್ನ ಮೇಲಿನ ಪ್ರೀತಿ ಅನುಕಂಪವಲ್ಲ" ಅಂವ ಮಲ್ಲಿಗೆ ಮುಡಿಸಿದ.
ಜೋಡಿಯಾದರು. ಸಹಿ ಹಾಕಿದ ಗೆಳೆಯರೇ ಸಿಹಿ ಹಂಚಿದರು.
"ಓಪನರ್ ಬೇಕಿಲ್ಲಮ್ಮಾ... ಆಲ್‌ರೆಡಿ ಸೀಲ್ ಓಪನ್ಡ್!"
ವ್ಹಿಸ್ಕಿ ಹೆಚ್ಚಾದವನೊಬ್ಬ ತೊದಲಿ ತೂರಾಡಿದ.
ಯಾಕೋ... ಹಿಡಿದ ಕೈ ಮೆಲ್ಲನೆ ಜಾರಿತ್ತು.

ಕಾಲಕ್ಕೆ ಕೀ ಕೊಟ್ಟು ಮರೆತವರು ಯಾರೋ?
ಅದೊಂದು ತಾರೀಖಿನ ದಿನ, ಮತ್ತೆ ಹಾಜರು.
ಅವಳ ನೆನಪಿಗೋ, ಸಕ್ಕರೆ ಖಾಯಿಲೆ. ಮಾಯುವುದೇ ಇಲ್ಲ ಗಾಯ.
ಅದು, ಆ ಮೊದಲನೆಯವ ಇಲ್ಲವಾಗಿದ್ದ ದಿನ.
ಕಣ್ಣಂಚಲ್ಲಿ ನೆನಪಿನ ಹನಿ. ಕೈಯ್ಯಲ್ಲಿ ಅವನ ಮುಗುಳು ನಗು.

"ಅವನನ್ನ ತುಂಬಾ ಪ್ರೀತಿಸ್ತಿದ್ಯಾ?"
"ಹೂಂ"
"ನನ್ನನ್ನ?"
"ನೀವು ಪ್ರಾಣಕ್ಕಿಂತ ಹೆಚ್ಚು ನಂಗೆ"
"ನಾನು ಮೈಗೆ, ಆ 'ಸತ್ತ'ವ ಮನಸ್ಸಿಗಾ?"
ಇಶ್ಶೀ... ಇವನ ಬಾಯಲ್ಲಿ ಹಾದರದ ಮಾತು!

ಈಗ,
ಚಂದಿರನೇನೋ ಇದ್ದಾನೆ.
ತುಂಬುತ್ತ, ಕರಗುವೆನೆಂದು ಧಮಕಿ ಹಾಕುತ್ತ...
ಹುಣ್ಣಿಮೆ ಕನಸಿಗೆ ಮಾತ್ರ,
ಮತ್ತೆಂದೂ ಬಿಡದ ಗ್ರಹಣ ಹಿಡಿದಿದೆ!





# ಕಾಯುತ್ತಲೇ ಇದ್ದ ಭೀಷ್ಮ...

ಮಾತೆತ್ತಿದರೆ ಸತ್ಯವತಿ ತಲೆಮೇಲೆ ಕೈಹೊತ್ತು ಮಲಗುತ್ತಾಳೆ.

ಅಪ್ಪ ಸತ್ತಾಗ ಮೊದಲ ಸಾರ್ತಿ ಹೀಗೆ ಮೂಲೆ ಹಿಡಿದು ಕುಂತಿದ್ದಳು. ಚಿತ್ರ– ವಿಚಿತ್ರ ವೀರ್ಯರನ್ನ ಸಾಕುವ ಹೊಣೆ ನಾನೇ ಹೊತ್ತೆ. ಒಬ್ಬ ಯುದ್ಧದಲ್ಲಿ ಸತ್ತ. ಮತ್ತೊಬ್ಬನಿಗೆ ಮದುವೆ ಮಾಡಲು ನಾನು ಹೆಣ್ಣುಗಳನ್ನ ಹೊತ್ತು ತಂದೆ.

ಅಂಬೆ, ಅಂಬಿಕೆ, ಅಂಬಾಲಿಕೆ. ಆ ಹಿರಿಯ ಹುಡುಗಿ ಶಾಲ್ವ ರಾಜನ್ನ ಪ್ರೇಮಿಸಿದ್ದಳಂತೆ. ಹೋಗುತ್ತೇನೆಂದಳು. ಬಿಟ್ಟುಕೊಟ್ಟೆ. ಅಂವ ಸ್ವೀಕರಿಸಲಿಲ್ಲವೆಂದು ವಾಪಸು ಬಂದಳು, ನನ್ನ ಮದುವೆಯಾಗೆಂದು ದುಂಬಾಲು ಬಿದ್ದಳು.

ನಾನೇನೂ ಬಯಸಿ ಬಯಸಿ ಬ್ರಹ್ಮಚಾರಿಯಾದವನಲ್ಲ. ಅದೊಂದು ಶಪಥ. ನನಗೆ ನಾನೇ ಕಟ್ಟಿಕೊಂಡ ಚೌಕಟ್ಟು. ಅದನ್ನ ಮೀರಲಾರದೆ ಹೋದೆ. ಅವಳು ಉರಿಮೋರೆಯಲ್ಲಿ ಮುಂಜಾವದ ಸೂರ್ಯನ ಹಾಗೆ ಕಾಣ್ತಿದ್ದಳು. ಎತ್ತರದ ನಿಲುವಿನ ತೋರ ಮೊಲೆಗಳ ಕಾಶೀ ಸುಂದರಿ. ನನ್ನ ಬಾಹುಗಳಿಗೆ ಸವಾಲೆಸೆಯುವಂತಿತ್ತು ಅವಳ ದಿಟ್ಟ ನೋಟ. ಕಡೆದಿಟ್ಟ ಮೈ, ಕೆಚ್ಚು ತುಳುಕುವ ಅಂಗಾಂಗ...

ಇಲ್ಲ. ಮಾತಿಗೆ ತಪ್ಪಲಾರದಾದೆ. ನಾನು ಗಂಗೆಯ ಮಗ, ಗಾಂಗೇಯ!

ಅಂಬೆ ಅವಡುಗಚ್ಚಿದಳು. "ನನ್ನಿಂದಲೇ ನಿನಗೆ ಸಾವು!" ಆ ಸುಂದರಿಯನ್ನ ಬದುಕಾಗಿಸಿಕೊಳ್ಳುವ ಯೋಗ ನನಗಿರಲಿಲ್ಲ. ಅವಳಿಂದ ಸಾವಾದರೂ... ಆಹಾ! ಎಂಥ ಸುಂದರ ಸಜೆ!!


ಕಾಲ ಸರಿಯಿತು. ಮತ್ತೆ ಕುರುಕುಲ ಸಿಂಹಾಸನ ಬರಿದು. ಮೂಲೆಯಲ್ಲಿ ತಲೆಮೇಲೆ ಕೈಹೊತ್ತ ಮಾತೆ, ಸತ್ಯವತಿ. ಸೊಸೆಯರಿಗೆ ಮಕ್ಕಳಿಲ್ಲ. ಹೇಳುತ್ತಿದ್ದಾಳೆ ಆಕೆ: "ನೀನೊಂದು ಮದುವೆ ಮಾಡಿಕೋ" ಅಪ್ಪ ಅವಳನ್ನ ಪ್ರೇಮಿಸಿದಾಗಲೇ ನನ್ನ ಮದುವೆ ಮಾತು ಮುರಿದು ಬಿದ್ದಿದ್ದು ಎಲ್ಲರಿಗೂ ಗೊತ್ತಿರುವ ಕಥೆ. ನಾನು ಬಿಲ್ಕುಲ್ ಆಗೋಲ್ಲವೆಂದು ಮುಖ ತಿರುವಿದೆ.

ರಾಜಕುಲಗಳಲ್ಲಿ ಕುರ್ಚಿಯುಳಿಸಲಿಕ್ಕೆ ನೂರೆಂಟು ಒಳದಾರಿ. 'ನಿಯೋಗಕ್ಕೆ ಸಮ್ಮತಿಸು' ಅಂದಳು. ಅಂಬಿಕೆ, ಅಂಬಾಲಿಕೆಯರೊಟ್ಟಿಗೆ ನಿಯೋಗ!? ನನ್ನ ತಮ್ಮನ ಹೆಂಡತಿಯರೊಟ್ಟಿಗೆ ಮಲಗುವುದು? ಅದೂ ಅಂಬೆಯ ತಂಗಿಯರೊಟ್ಟಿಗೆ!?

ಅಂಬೆ...ಕೇಕೆ ಹಾಕಿ ನಗುತ್ತಿದ್ದಳು. ಕೆಂಪಗೆ ಮುನಿಯುತ್ತಿದ್ದಳು. ಅಷ್ಟುದ್ದ ಕೂದಲನ್ನ ಚಾವಟಿ ಮಾಡಿ ಎದೆಯ ಮೇಲೆ ಬೀಸಿ, ನೋಯಿಸಿ ಮಾಯವಾದಳು! ಎಲ್ಲಿ ಹೋದಳೋ? ಏನಾದಳೋ? ಈ ಚಿರಂಜೀವಿ ಭೀಷ್ಮನ ಸಾವಿಗೆ ಕಾರಣವಾಗುತ್ತೇನಂದಿದ್ದಳು. ಅಲ್ಲಿಯವರೆಗೆ ಹೇಗೆ ಜೀವ ಹಿಡಿಯುವಳೋ? ಮತ್ತೆ ಹುಟ್ಟಿ ಬರುವಳೋ?

ಕಾಯುತ್ತಲೇ ಇದ್ದ ಭೀಷ್ಮ. ಸಾಯುತ್ತಲೇ ಇದ್ದ ದಿನದಿನವೂ. ಕುರುಕುಲ ಸಿಂಹಾಸನ ಬರಿದಾದಾಗಲೆಲ್ಲ... ಗಂಡುಗಳು ಬರಡಾದಾಗಲೆಲ್ಲ... ಸತ್ಯವತಿ ತಲೆ ಮೇಲೆ ಕೈಹೊತ್ತು

ಮೂಲೆ ಹಿಡಿದಾಗಲೆಲ್ಲ... ರಾಜಕಾರಣದ ಪುರುಸೊತ್ತಿನ ನಡುವೆ ಅಂಬೆಯ ಮುನಿಸಿನ ಮುದ್ದು ಮುಖ ನೆನಪಾದ ಘಳಿಗೆ ಘಳಿಗೆಯೆಲ್ಲ...!



# ಗಂಡಸಾಗಲು ಪರದಾಡಿದವನ ಮರೆಯಲಾಗುತ್ತಿಲ್ಲ...

ಇದ್ದಕ್ಕಿದ್ದ ಹಾಗೇ ಒಂದಿನ ಅಮ್ಮ ಗಂಭೀರ ದನಿಯಲ್ಲಿ ಗದರಿದಳು. "ಇನ್ಮೇಲೆ ನೀನು ಅವನ ಜತೆ ಬೆಟ್ಟ, ಬ್ಯಾಣ ಅಂತೆಲ್ಲ ಅಲೆಯೋದು ಬೇಕಾಗಿಲ್ಲ".

ನಾನೂ ಲೆಕ್ಕ ಹಾಕಿದೆ. ನೆರೆದು ಅದಾಗಲೇ ಐದು ವರ್ಷ ಆಗಿಹೋಗಿತ್ತು. ಅಮ್ಮ ಅದ್ಯಾವ ಬೋಧಿ ವೃಕ್ಷದ ಕೆಳಗೆ ಕುಂತೆದ್ದು ಬಂದಿದ್ದಳೋ, ಅಚಾನಕ್ಕಾಗಿ ಜ್ಞಾನೋದಯವಾಗಿಬಿಟ್ಟಿತ್ತು! ನನ್ನ – ಅವನ ಸಲುಗೆ, ಅವಳಿಗೆ ಬೇರೇನೋ ಚಾಡಿ ಹೇಳಿದಂತಿತ್ತು.

ಕಳ್ಳ ಚಂದ್ರನಿಲ್ಲದ ಕದ್ದಿಂಗಳ ರಾತ್ರಿಗಳು, ಬಾನು ಕಾವಣ ಹೊಚ್ಚಿ ಹೂ–ಲತೆಗಳಿಗೆ ಮುತ್ತಿಕ್ಕುವ ಮುಂಜಾವಗಳು, ಮಳೆಗಾಲದ ಧಬಧಬ ಯಕ್ಷಗಾನಗಳೆಲ್ಲವೂ ನಮಗೆ ಈವರೆಗೂ ಜತೆಯಾಗಿ ನಿಂತಿದ್ದವು, ಗುಟ್ಟು ಮುಚ್ಚಿಟ್ಟುಕೊಂಡಿದ್ದವು.

ಅಮ್ಮ ಇಷ್ಟು ದಿನ ಸುಮ್ಮಗಿದ್ದವಳು ಹಿಂಗ್ಯಾಕೆ ಅಂದುಬಿಟ್ಲು?

ಅದ್ಯಾಕೋ ಅವಳು ಹಾಗಂದಾಗಿಂದ ಅಪ್ಪನ ಮೂತಿ ಸಣ್ಣದಾಗಿತ್ತು. ಮೂರುಹೊತ್ತೂ ಅಂವ ಕುಟ್ಟಣಿಯಲ್ಲಿ ತಂಬಾಕು ನುರಿಯಲು ಶುರು ಹಚ್ಚಿದ್ದ. ಇದ್ದೊಬ್ಬ ತಂಗಿಯ ಮಗ, ಗಂಡು ಹುಟ್ಟಿಲ್ಲದ ಮನೆಗೆ ಅಳಿಯನಾಗಿ ಬರಲಿ ಅನ್ನೋ ಆಸೆ ಹೊತ್ತಿದ್ದ ಅಪ್ಪ, ನನ್ನಾಸೆಗೂ ದನಿಯಾಗುವನೆಂದುಕೊಂಡೆ. ಊಹೂಂ. ಅಂವ ಅಮ್ಮನ ಬಾಯಿಗೆ ಹೆದರಿ, ಕುಕ್ಕರಗಾಲಲ್ಲಿ ಕುಂತು ಎಲೆ– ಅಡಿಕೆ ಜಗೀತಾ ಇದ್ದುಬಿಟ್ಟ.

ಅವನೆಂಥಾ ಗಂಡಸೇ?

ಖುದ್ದು ನಾನೇ ನನ್ನ ಹುಡುಗನಿಗೆ "ನಡಿ, ಓಡಿ ಹೋಗುವಾ" ಅಂದರೆ, ಕಾಲೂ ಕದಲಿಸದೆ ನಿಂತುಬಿಟ್ಟನಲ್ಲ ಇಂವ... ಇವನೂ ಒಬ್ಬ ಗಂಡಸೇನೇ?

ಇಪ್ಪತ್ಮೂರು ವರ್ಷಗಳಿಂದ್ಲೂ ಕೊಟ್ಟಿಗೆಗೆ ಕಲಗಚ್ಚಿಡುತ್ತ, ಮುರು ಬೇಯಿಸ್ತ, ಆಳು–ಕಾಳುಗಳಿಗೆ ಮಾಡಿಡುತ್ತ, ಅಡಿಕೆ ಸುಲ್ತ ಅಂತೆಲ್ಲ ಸೆರಗುಕಟ್ಟಿಕೊಂಡು ಓಡಾಡ್ತಿದ್ದ ಅಮ್ಮ, ಈ ಗಂಡಸರಲ್ಲದವರ ತೆಕ್ಕೆಯಲ್ಲಿ ನನ್ನ ಹಾಕಲು ಹಿಂಜರಿದಳೇನೋ? ಅದಕ್ಕೇ ಇರಬೇಕು, ತನ್ನ ಕಡೆಯ ನೆಂಟರನ್ನ ಕಟ್ಟಿಕೊಂಡು ನನಗೆ 'ಅಮೆರಿಕಾ ಇಂಜಿನಿಯರ್ರು' ಹುಡುಕಿದ್ದು!



ಇದೀಗ ಅಮೆರಿಕಾ. ಹೊಸ ಗಂಡು– ಗಂಡ! ಹೊಸ ಹಸಿರು, ಹೊಸ ಥರದ ಚಳಿ, ಹೊಸ ಗಾಳಿ. ಆದರೆ ಅದ್ಯಾವುದಕ್ಕೂ ಜೀವವಿಲ್ಲವೇ ಗೆಳತಿ, ಅದ್ಯಾವುದೂ ನನ್ನ ಮಲೆನಾಡಾಗಲು ಸಾಧ್ಯವಿಲ್ಲ. ಡಾಲರುಗಟ್ಟಲೆ ತಂದು ಸುರಿದು, ಪಿಜ್ಜಾ ತಿನ್ನಿಸುವ, ಶಾಪಿಂಗ್ ಮಾಡಿಸುವ ಇಂವ ಕೂಡ ನನ್ನವನೆನಿಸೋದಿಲ್ಲ. ಶ್! ಹೇಳ್ತೀನಿ ಕೇಳು... ಗಂಡಸಾಗಲು ಪರದಾಡಿದ ಆ ನನ್ನ ಹುಡುಗನ ಮರೆಯಲಾಗುತ್ತಿಲ್ಲ!



# ಗಂಡಸಿನ ಪ್ರೀತಿ ಅಂದ್ರೆ ಇದೇನಾ?

ತಥ್! ಮಳೆ ಹೊಯ್ತಲೇ ಇದೆ ಇನ್ನೂ. ಅದೇನು ಹೊಟ್ಟೆ ಕಿಚ್ಚೋ? ದಿನಾ ಆಫೀಸಿಂದ ಹೊರಡುವಾಗ ಇದೊಂದು ಗೋಳು. ಇವತ್ತೂ ಲೇಟಾದರೆ ಅಂವ ಮತ್ತೆ ರಗಳೆ ಶುರು ಹಚ್ತಾನೆ. ಚುಚ್ಚು ನೋಟ ಎಸೀತಾನೆ.

ಆಗೆಲ್ಲ ಎಷ್ಟು ಚೆಂದವಿತ್ತು! ಹೋರಾಟ– ಭಾಷಣಗಳು, ಚರ್ಚೆ ಕಾಂಪಿಟೇಶನ್ನುಗಳು... "ನಿಮ್ಮಂತ ಹೆಣ್ಣು ಮಕ್ಕಳು ನಮ್ ಸಮಾಜಕ್ಕೆ ಬೇಕು" ಅಂವ ಮಿನುಗು ಕಣ್ಣಲ್ಲಿ ಮೆಚ್ಚುಗೆ ಸೂಸುತ್ತ ಮೈಯ್ಯಲ್ಲಿ ಮಿಂಚು ಹರಿಸಿದ್ದ. ಮೀಸೆ ಇರೋರೆಲ್ಲ ಒಂದೇ ಜಾತಿ, ಮದುವೆ ಹೊತ್ತಿಗೆ ನೋಡ್ಕೊಂಡ್ರಾಯ್ತು ಅಂತ ಗಂಡಸರೆಡೆಗೊಂದು ಉಪೇಕ್ಷೆ ಇಟ್ಕೊಂಡಿದ್ದ ನಾನು, ಸ್ಯಟಲೈಟ್ ಹುಡುಗರನ್ನೆಲ್ಲ ದೇವದಾಸರನ್ನಾಗಿಸಿಬಿಟ್ಟಿದ್ದೆ! ಆದರೆ ಇಂವ, ಮೀಸೆಯನ್ನೂ ಮೀರಿ ನನ್ನ ಸೆಳೆದುಬಿಟ್ಟಿದ್ದ!!

ಬೌದ್ಧಿಕ ಸಾಹಚರ್ಯ... ಅದ್ಯಾರು ಕುಂತು ಹೊಸೆದ ಪದವೋ? ನಮ್ಮ ಸಂಬಂಧಕ್ಕೊಂದು ಲೇಬಲ್ಲು ಹಚ್ಚಲೇಬೇಕಾಗಿ ಬಂದಾಗ ಅನಾಮತ್ತು ತೆಗೆದು ಅಂಟಿಸಿಬಿಟ್ಟಿದ್ದೆ. ಕಾಸಗಲ ಕುಂಕುಮದ ಗೆಳತಿ ನೂರು ಸಾರ್ತಿ 'ಹುಷಾರಿ' ಹೇಳಿದ್ದಳು. "ಊರಿಗೆ ಬಂದಿದ್ದು ನೀರಿಗೆ ಬಾರದಿದ್ದೀತಾ?" ಹಂಗಿಸಿದ್ದಳು.

ಬುದ್ಧಿ ಊರಾಯ್ತು, ದೇಹ ನೀರಾಯ್ತು!

ಈ ಇಂವ ಅದೆಷ್ಟು ಬದಲಾಗಿಹೋದ? 'ತಿನ್ನುವ ತಟ್ಟೆ ತಳ್ಳದ, ಅಸಹನೆಯಿಂದ ರೇಗದ, ಕೈಯೆತ್ತದ ಗಂಡು ಗಂಡೇ ಅಲ್ಲ' ಅಂತ ಮನು ತನ್ನ ಎರಡೂವರೆ ಚಿಲ್ಲರೆ ಸಾವಿರ ಶ್ಲೋಕಗಳಲ್ಲೆಲ್ಲೂ ಹೇಳಿಲ್ಲವಲ್ಲ! ಆದರೂ ಗಂಡಸರೆಲ್ಲರೂ ಇದನ್ನ ಚಾಚೂ ತಪ್ಪದೆ ಪಾಲಿಸ್ತಾ ತಮ್ಮ 'ಗಂಡಸ್ತನ' ಸಾಬೀತುಪಡಿಸಿಕೊಳ್ತಲೇ ಇರ್ತಾರಲ್ಲಾ, ಹೀಗ್ಯಾಕೆ? ಗೆಳತಿಯನ್ನ ಕೇಳಿದೆ.

ನಾನು ಬಾತ್‌ರೂಮಿಗೆ ಹೋದಾಗಲೆಲ್ಲ ಮೊಬೈಲಿನ ಮೂಲೆಮೂಲೆ ತಡಕುತ್ತಾನೆ. ಅಂವ ಕಾಲ್ ಮಾಡಿದಾಗ ಎಂಗೇಜ್ ಬಂದರೆ ಸಿಡುಕುತ್ತಾನೆ. ದನಿ ಎತ್ತರಿಸಿದರೆ ಕೈ ಎತ್ತುತ್ತಾನೆ. ಮಾತು, ಕಥೆ, ಭಾಷಣ... ಊಹೂಂ... ಎಲ್ಲಕ್ಕೂ 'ಜೋಪಾನ' ಅನ್ನುತ್ತಾನೆ. 'ನಿನ್ನಿಷ್ಟ' ಅಂದು ಮುಖ ತಿರುವುತ್ತಾನೆ. ಅವನಿಂದ ಈಗ ಹೋರಾಟ... ಹೆಣ್ಣು ಮಕ್ಕಳು... ಯಾವುದರ ಸದ್ದು ಸುದ್ದಿಯೇ ಇಲ್ಲವಲ್ಲೆ!? ಹೇಳೇ, ಇಂವ ಹಿಂಗ್ಯಾಕೆ ಆಡ್ತಾನೆ?

ಗೆಳತಿ ನಗುವಲ್ಲಿ ಈಗ ನೂರು ಗುಟ್ಟು. ಮದುವೆಯಾದವಳ ಹಮ್ಮಿನ ನೂರು ಹೆಮ್ಮೆ! 'ಖುಷಿ ಪಡೇ. ಅಂವ ನಿನ್ನ ಕಳಕೊಳ್ಳಲು ಹೆದರ್ತಾನೆ. ನಿನ್ನನ್ನ ತುಂಬ ತುಂಬ ಪ್ರೀತಿಸ್ತಾನೆ!!' ಅವಳ 'ಪ್ರೀತಿ' ಹಿಂದಿನ ದನಿಯಲ್ಲಿ ಸಾವಿರ ಅರ್ಥ ತುಳುಕಿತ್ತು. ಸಂಭ್ರಮದ ವಿಷಾದ ಹಣಕಿತ್ತು!



ಇದೇನಾ... ಗಂಡಸಿನ 'ಪ್ರೀತಿ'!?

## ಅಂವ ಬೇಕು ನಂಗೆ!

ಚಂದಾಮಾಮನ ಕಣ್ಣು, ಜೇನುಜೇನು ದನಿ. ಅವಳ ಎಲ್ಲ ಮೊಂಡಾಟಗಳೂ ಅವಂಗೆ ಅಕ್ಕರೆ. ಅವಳು ಕೇಳಿದ್ದೆಲ್ಲ ಘಳಿಗೆಯೊಳಗೆ ಅಂಗೈಲಿ, ಕಾಲ ಬುಡದಲ್ಲಿ. ಪ್ರೀತಿಯೊಂದನ್ನ ಬಿಟ್ಟು...

ಅಂವ ಪ್ರೀತಿ ಅಂತ ತಿಳ್ಕೊಂಡಿದ್ದರ ವಾರಸುದಾರರು ಊರು ತುಂಬಾ, ಕೇರಿ ತುಂಬಾ! ಅವಳಿಗೋ, ನಗು ಬೇಕು, ಮಾತು ಬೇಕು. ಮಾತಲ್ಲಿ ಹುಣ್ಣಿಮೆ ತುಂಬಿ, ತುಳುಕುತ್ತ ಹೇಳಿದಳು; 'ನಿನ್ನೀ ಸವಲತ್ತು ಸಡಗರಗಳೊಂದೂ ಬೇಕಿಲ್ಲ, ಮುತ್ತಂಥ ನಾಲ್ಕು ಮಾತಾಗಿ ಬಾ'

ಇಲ್ಲ. ಅಂವ ಬರಲಿಲ್ಲ. ಕಾಡು ಪಾರಿವಾಳಗಳಿಗೆ ಕಾಳು ಹಾಕುತ್ತ ಕುಂತುಬಿಟ್ಟ. ಜೀವಂತಿಕೆಯ ಹುಡುಗಿ, ಜೀವನ ಪ್ರೀತಿಯ ಹರೆಯ. ಮತ್ತೀಗ ತಲೆ ತಗ್ಗಿಸಿ ನೆಲ ಕೆರೆಯುತ್ತ ಕೇಳಿದಳು: "ನಂಗೆ ಅಂವ ಬೇಕು! ನಿನ್ನ ಹಾಗೆ ಗುಮ್ಮನಲ್ಲದ, ಕಲ್ಲನ್ನೂ ಕರೆದು ಮಾತಾಡಿಸ್ತಾನಲ್ಲ, ಅಂವ. ನನ್ನ ಚಿಕ್ಕಪುಟ್ಟ ತಪ್ಪಿಗೂ ಬಯ್ದು ರೇಗಿಸ್ತಾನಲ್ಲ, ಜಗಳಾಡ್ತಾನಲ್ಲ, ದಿನಗಟ್ಟಲೆ ಮಾತು ಬಿಡ್ಲಿಕ್ಕೆ ಹೆಣಗಿ ಸೋತು ಸುಣ್ಣವಾಗ್ತಾನಲ್ಲ, ಅಂವ... ನನ್ನ ಮೊಬೈಲಿನ ಕರೆನ್ಸಿಯಷ್ಟನ್ನೂ ಹುರಿದು ಮುಕ್ತಾನಲ್ಲ, ಊರಾಚೆ ದೂರದಲ್ಲಿದ್ದು 'ಮಗ್ಗುಲಲ್ಲಿ ನಾಚಿಕೊಳ್ತ ಚೆಂದವಾಗಿ ಮಲಗಿದ್ದೀ' ಅಂದು ಕೆಂಪೇರಿಸ್ತಾನಲ್ಲ, ಅಂವ ಬೇಕು ನಂಗೆ!!"

ಇದೀಗ ಇಂವ, ಅವಳು ಕೇಳಿದ್ದನ್ನೆಲ್ಲ ಕೊಡಿಸಿಯಾಗಿದೆ. ಆ ಒಲವಿನವ ಬಂದು ಅವಳ ಜೀವನದಲ್ಲಿ ದಾಖಲಾಗಿದ್ದಾನೆ. ಇಂವ ಅವರಿಬ್ಬರನ್ನೂ ಒಟ್ಟಿಗೆ ಹೂತು ಮೇಲುಹೊದಿಕೆ



ಹೊದೆಸಿ ಬೆಚ್ಚಗಿಟ್ಟಿದ್ದಾನೆ. ಕಂಬನಿಯ ಕಲ್ಲು ನೆಟ್ಟು, ಜೈಲಿನಲ್ಲಿ ಕಂಬಿ ಎಣಿಸುತ್ತಿದ್ದಾನೆ!



## ಹೀಗೂ ಒಂದು ನಿವೇದನೆ!

ಬಹಳ ನಾಚಿಕೆಯಿಂದ ಬರೀತಿದೀನಿ. ಇದನ್ನ ನಿನಗೆ ಕೊಡ್ತೀನಿ ಅನ್ನೋ ನೆಚ್ಚಿಕೆಯೇನಿಲ್ಲ. ಇಂಥದನ್ನೆಲ್ಲ ಹೇಳಿಕೊಂಡು ಮೈಮೇಲೆ ಇರುವೆ ಬಿಟ್ಟುಕೊಳ್ಳಬಾರದು ಅನ್ನುತ್ತೆ ಸ್ತ್ರೀ ಸೂತ್ರ. ಆದರೇನು ಮಾಡಲಿ? ನನ್ನೊಳಗಿಂದ ಇದು ಹೊರಗೆ ಬಾರದೆ ನೆಮ್ಮದಿಯಿಲ್ಲ. ಹೆಣ್ಣುಹೊಟ್ಟೆಯೊಳಗೆ ಗುಟ್ಟು ಬಚ್ಚಿಟ್ಟುಕೊಳ್ಳಲು ಸಾಧ್ಯವಾ ಹೇಳು!?

~

ಅವನೊಬ್ಬ ಹಳೆ ಗೆಳೆಯ. ಬಹಳ ಹಿಂದೆ, ಕಾಲೇಜಿನ ದಿನಗಳಲ್ಲಿ ನಂಗೆ ಲೈನು ಹೊಡೀತಿದ್ದವರ ಸಾಲಿನಲ್ಲಿ ಅವನೂ ಇರುತ್ತಿದ್ದ. ಅವತ್ತು... ನಾನೆಷ್ಟು ಬೇಡವೆಂದು ಗೋಗರೆದರೂ ನೀ ನಿನ್ನ ಗೆಳೆಯರೊಟ್ಟಿಗೆ ಟ್ರಕಿಂಗ್‌ಗೆ ಹೋದೆ ನೋಡು, ಅವತ್ತು... ಆ ದಿನ ಅಂವ ಫೋನು ಮಾಡಿದ್ದ. ತನ್ನ ಮದುವೆಗೆ ಕರೆಯೋದಕ್ಕಂತಲೇ ಕಷ್ಟಪಟ್ಟು ನನ್ನ ನಂಬರು ಸಂಪಾದಿಸಿದ್ದ.

ನನ್ನ ಪ್ರೀತಿಗೂ, ಮುನಿಸಿಗೂ ಬಗ್ಗದೆ ಏನೋ ಸಾಹಸ ಮಾಡ್ತೀವೀಂತ ಹೋಗಿದ್ದ ನಿನ್ನ ಮೇಲೆ ಕೋಪ ಕುದಿಯುತ್ತಿತ್ತು. ನಿನ್ನ ಕಲೀಗಿನ ಹೆಂಡತಿಯ ಒಂದೇ ಮಾತಿಗೆ ಅಂವ ನಿಮ್ಮೊಟ್ಟಿಗೆ ಹೊರಟಿರಲಿಲ್ಲ. ನೀನು ನನ್ನ ಮಾತಿಗೆ ಬೆಲೆ ಕೊಡಲೇ ಇಲ್ಲ...

ಅಂವ ಆ ದಿನಗಳಲ್ಲಿ ನನ್ನದೊಂದು ಸ್ಮೈಲಿಗಾಗಿ ಕಿಲೋಮೀಟರುಗಟ್ಟಲೆ ಸೈಕಲ್ ತುಳಿದು ಬರ್ತಿದ್ದಿದ್ದು ನೆನಪಾಯಿತು. ನನ್ನ ಮದುವೆ ದಿನ ತಾನು ತಲೆಬೋಳಿಸ್ಕೊಂಡು ನನ್ನ ನೆನಪಿನ ವಸ್ತುಗಳನ್ನೆಲ್ಲ ತುಂಗೆಯಲ್ಲಿ ತೇಲಿಬಿಟ್ಟಿದ್ದನಂತೆ ಹುಡುಗ! ಮೆದುವಾಗಿಬಿಟ್ಟೆ ನಾನು.

ಅಂವ ಮನೆಗೆ ಬಂದ. 'ಹತ್ತು ವರ್ಷ ಆಯ್ತಲ್ಲೇ ನಿನ್ನ ನೋಡಿ!' ಅಂದ. 'ಇನ್ನೂ ಹಾಗೇ ಇದೀಯ ಬಿಡು' ಅಂದವ ಮೆಲ್ಲಗೆ 'ಸೆಕ್ಸಿಯಾಗಿ' ಅಂತ ಸೇರಿಸಿದ. ನಾನು ಗಿಲ್ಲನೆ ನಕ್ಕು ತಲೆತಗ್ಗಿಸಿ ಕುಳಿತೆ ನೋಡು, ಅಲ್ಲಿಂದ ಶುರುವಾಯ್ತು ಇದೆಲ್ಲ. ನೀನು ಮೂರು ದಿನದಿಂದ ಮನೆಯಲ್ಲಿಲ್ಲ ಅಂದಿದ್ದು ಅವನಿಗೇನನಿಸ್ತೋ, "ಸುಖವಾಗಿದೀ ತಾನೆ?" ಕೇಳಿದ.

ನಾನು ಗೊಳೋ ಅತ್ತುಬಿಟ್ಟೆ! ಅಂವ ಕಾಲೇಜಿನ ದಿನಗಳಲ್ಲಿ ನನ್ನನೊಲಿಸಿಕೊಳ್ಳಲು ಪಟ್ಟ ಪಡಿಪಾಟಲುಗಳನ್ನೆಲ್ಲ ಹೇಳಿ ಹೇಳಿ ನಗಿಸಿದ. ಹಾಗೇ ಸಮಯ ಕಾದು "ಪ್ಲೀಸ್ ಒಮ್ಮೆ ಪೂರ್ತಿಯಾಗಿ ಸಿಕ್ತೀಯಾ?" ಅಂದವನ ಕಣ್ಣಲ್ಲಿ ಕೆಂಡದ ನಿಗಿನಿಗಿ.

ಆ ಕ್ಷಣಕ್ಕೂ ಹೆಂಡತಿ ಮಾತು ಕೇಳಿ ಟ್ರಕಿಂಗಿಗೆ ಹೋಗದ ನಿನ್ನ ಕಲೀಗು, ನಾನು

ಗೋಳಾಡಿದರೂ ಹೋಗೇ ಸಿದ್ಧ ಅಂತ ಹೊರಟುಬಿಟ್ಟೆ ನೀನು... ನಾನು ಗುಂಡಗುಂಡಗೆ ತಲೆಯಾಡಿಸಿದ್ದು ನೆನೆಸಿಕೊಂಡರೆ.... ನಂಬು, ನನ್ನ ಬಾಲಿಶತನ ಅದು.

ಮನೆಯಿಂದೆದ್ದು ಇಬ್ಬರೂ ರೆಸ್ಟೊರೆಂಟಿಗೆ ಹೋಗಿದ್ದಾಯ್ತು. ಆಗಲೂ ನಾನೇನು ಮಾಡ್ತಿರುವೆ ಅನ್ನುವ ಅರಿವಿಲ್ಲ ನನಗೆ. ಟೇಬಲ್ಲಿನಲ್ಲಿ ನನ್ನೆದುರು ಕುಂತ ಅಂವ ಸರಕ್ಕನೆ ಕೈಹಿಡಿದು ಸವರತೊಡಗಿದ. ಹೊಟ್ಟೆ ತೊಳಸಿ ವಾಕರಿಕೆ ಬರುವಂತಾಯ್ತು! "ರೂಮ್ ಬುಕ್ ಮಾಡ್ಲಾ?" ಪಿಸುಗುಟ್ಟಿದವನ ತುಟಿ ಅಸಹ್ಯ ತರಿಸಿತು.

ನಾನಲ್ಲಿಂದ ಏಳುವ ಹೊತ್ತಿಗೆ ಅಂವ ಕೆನ್ನೆ ಮೇಲೆ ಕೈಯಿಟ್ಟುಕೊಂಡು ದುರಿದುರಿ ನೋಡ್ತಿದ್ದ. ನಾನು ಅವನಿಗೆ ಹೊಡೆದುಬಿಟ್ಟಿದ್ದೆ! ಜೋರು ಜೋರಾಗಿ ನನ್ನ ಫ್ಲರ್ಟ್ ಅಂತೆಲ್ಲ ಬಯ್ಯುತ್ತ ಅಂವ ಕೊಳಕುಕೊಳಕು ಗೊಣಗಾಡಿಕೊಂಡು ಹೊರಟುಹೋದ.

ನನ್ನ ತಿಕ್ಕಲು ಇಳಿದಿತ್ತು. ಅಳುತ್ತಾ ಮನೆಗೆ ಬಂದುಬಿಟ್ಟೆ.

~

ರೆಸ್ಟೊರೆಂಟಿನ ವೈಟರು ನಿನ್ನ ಪರಿಚಯದವ. ಅಂವ ನನ್ನ ಗಲಾಟೆ ಹೇಳಿಯೇ ಇದ್ದಾನೆ ನಿಂಗೆ. ಅಷ್ಟಾದರೂ ನೀ ಯಾಕೆ ಸುಮ್ಮನಿರುವೆ?

ಅಕಸ್ಮಾತ್ ನೀನು ಹಳೆ ಗೆಳತಿಯೊಟ್ಟಿಗೆ ಅಗತ್ಯ ಬಿದ್ದು ಹೋಟೆಲಿಗೆ ಹೋಗಿದ್ದರೂ ನಾನು ರಾದ್ಧಾಂತ ಮಾಡಿಬಿಡ್ತಿದ್ದೆ. ನಿನ್ನ ಮೇಲಿನ ಒಂದು ದಿನದ ಕೋಪ ನನ್ನನ್ನ ವಿದ್ರೋಹಕ್ಕೆ ಇಳಿಸಿಬಿಡ್ತಿತ್ತಲ್ಲ! ಆದರೂ ನನ್ನ ಮೇಲಿನ ಪ್ರೀತಿಗೆ, ನಂಬಿಕೆಗೆ ನೀ ಸುಮ್ಮನಿರುವೆ...

ನನಗದೇ ಸಂಕಟ. ನಾನು ತೀರ ಕೆಟ್ಟವಳು. ನೀ ಯಾಕಿಷ್ಟು ಒಳ್ಳೆಯವನಿದ್ದಿ?



# ಎಂಥಾ ಉದಾರಿ ಗಂಡ!

"ನೀನವನ್ನ ಮದ್ವೆಯಾಗು ಬೇಕಿದ್ರೆ, ನಾ ಯಾರ್ಗೂ ಗೊತ್ತಾಗದ್ ಹಾಗೆ ನೋಡ್ಕಳ್ತೀನಿ" ಅಂವ ಅಂದಿದ್ದ. ಅವಳ ಹೃದಯದಲ್ಲಿ ನೂರು ಮೆಣಸು ನುರಿದ ಉರಿ. ಕೊನೆಗೂ ಇಂಥದೊಂದು ದಿನ ಬಂದೇಬಿಡ್ತು!

ಅಂವ ಯಾಕೆ ಹಾಗಿದಾನೋ ಗೊತ್ತಿಲ್ಲ. ಶುರುವಿಂದಲೂ ಅವನ ಹಣೆಬರಹ ಹಾಗೇ ಇತ್ತನ್ನಿ. ಗೆಳೆಯರೆಲ್ಲ ಒಟ್ಟು ಕುಂತು ಕುಡಿಯುತ್ತ ಅವನ ಎದುರೆದುರೇ ಅವಳನ್ನ ಕೆಕ್ಕರಿಸಿ ನೋಡಿ ಥರ್ಟಿ ಟೂ– ಎಯ್ಟಿ ಅಂತ ಹುಳ್ಳಗೆ ನಗ್ತಿದ್ದರೆ, ಅಂವ ಮುಖ ಕೂಡ ಕಿನಿಸುತ್ತಿರಲಿಲ್ಲ.

ಬಿಟ್ ಹಾಕಿ... ಅವನ ಯಾವನೋ ಮೈಕಡಿತದ ಸಂಬಂಧಿ ಅವಳನ್ನ ಅಲ್ಲಿಲ್ಲಿ ಚಿವುಟಿದರೆ 'ನಮ್ಮ ನಮ್ಮಲ್ಯಾಕೆ ರಗಳೆ' ಅಂತ ಅನಾಮತ್ತು ಅವಳನ್ನೇ ಹೊರಗಿನವಳಾಗಿ ಮಾಡಿಬಿಟ್ಟಿದ್ದ! ಕೊಂಚಕಾಲ ಅವನೆಲ್ಲ ಹಡಬಿಟ್ಟಿಗಳಲ್ಲಿ ಜತೆಯಾಗಿದ್ದ 'ಜೀವದ ಗೆಳೆಯ' ಅವಳ ಮೇಲೆ ಸಲ್ಲದ ನೂರ ಒಂದು ಹೇಳಿದಾಗಲೂ 'ಅವಳಿಷ್ಟಕ್ಕೆ ನಾನು ಅಡ್ಡಿಯಾಗಲ್ಲ, ನನ್ನ ಇಷ್ಟಕ್ಕೆ ಬಿಟ್ಟರೆ ಸರಿ' ಅಂದುಬಿಟ್ಟಿದ್ದ!!



ಆಹಾ! ಎಂಥ ಉದಾರಿ? ಹಾದರಕ್ಕೆ ಹೆಂಡತಿಯನ್ನ ತಾನೇ ಕಳಿಸಿಕೊಡುವೆ ಅನ್ನುವವ ಯಾವ ದೇವತೆಗೆ ಕಡಿಮೆ ಹೇಳಿ? ಮನೆ, ಮಗು, ಸಂಸಾರ... ಅವಳದಷ್ಟೆ ಕನಸು. ಚೌಕಿ– ಕೊಟ್ಟಿಗೆ ಓಡಾಡುತ್ತ, ಆಂಥೋರಿಯಮ್ಮು ಜರ್ಬರಾಗಳ ಆರೈಕೆ ಮಾಡುತ್ತ, ಬಂಟಿಗೆ ಅನ್ನ ಕಲೆಸಿ ಹಾಕುತ್ತ, ಔಷಧಿ– ಅಡಿಕೆ ಸುಲ್ತಗಳಿಗೆ ಸಂಭ್ರಮಿಸ್ತ, ತಣ್ಣನೆ ತೋಟದ ಒಂಟಿ ಮನೆಯಲ್ಲಿ ಹಾಯಾಗಿದ್ದುಬಿಡೋದು– ಅವನ ಜತೆ!

ಊಹೂಂ... ನಿಯಮ ಹಾಗಿಲ್ಲವಲ್ಲ?

ಅವನ ಇಷ್ಟದ ಲೈಫು ಬೇರೆಯೇ ಇತ್ತು. ಅವನಿಗಂತೂ ಅವಳನ್ನ ನೋಡಿಕೊಳ್ಳುವ ಜವಾಬ್ದಾರಿ ತಪ್ಪಿದರೆ ಸಾಕಿತ್ತು. ಅಜ್ಜ ನೆಟ್ಟ ಆಲದ ಮರದ ತುಂಬ ಅಡಿಕೆ ಬಿಡುತ್ತಿತ್ತು. ಊಟಕ್ಕೆ ಚಿಂತೆಯಿಲ್ಲ. ಅಪ್ಪ ಕಟ್ಟಿದ ಮನೆಯಿತ್ತು, ಇರಲಿಕ್ಕೆ ಅಡ್ಡಿಯಿಲ್ಲ. ಮತ್ತೆ, ಅದಕ್ಕೆ!? 'ಅದು' ಬೇಕಂದರೆ ಅವಳು ಯಾರಿಂದಲಾದರೂ ಪಡಕೊಳ್ಳಬಹುದಂತ ಅಂವ ಅದಾಗಲೇ ಪರ್ಮಿಶನ್ನು ಕೊಟ್ಟುಬಿಟ್ಟಿದ್ದನಲ್ಲ? ಒಟ್ಟಿನಲ್ಲಿ ಅವಂಗೆ ಸೆಕ್ಸೂ ಒಂದು ಜವಾಬ್ದಾರಿಯ ಭಾಗವೇ ಆಗಿ ಅದಕ್ಕೂ ಜನ ಸಿಕ್ಕರೆ ಇಟ್ಟು ತಪ್ಪಿಸಿಕೊಳ್ಳುವ ಹುನ್ನಾರ ಮಾಡಿಬಿಟ್ಟಿದ್ದ.

ಎಲ್ಲದರ ವ್ಯವಸ್ಥೆ ಮಾಡಿಯಾದ ಮೇಲೆ ತನ್ನದೇನೂ ಕೆಲಸ ಉಳಿಯದಲ್ಲ?

~

ಅವಳ ಕನಸುಗಳು ಕರಗಿದ್ದವು. ದುಡಿಯದ ಗಂಡನ ಹೆಂಡತಿಯಾಗಿ ಮನೆಯಲೊಂದು ಪಾಪಾಸುಕಳ್ಳಿಯ ಹಾಗಾಗಿಬಿಟ್ಟಿದ್ದಳು!

ಆಗಲೆ ಬಂದಿದ್ದು ಅಂವ. ಊಟ, ನಿದ್ದೆ, ಸೆಕ್ಸನ್ನೂ ಮೀರಿ ಮತ್ತೇನೋ ಇದೆಯೆಂದು ತೋರಿಸಿದವ. ಕಣ್ಣ ಕೆಳಗಿನ ಕಪ್ಪು ಅಳಿಸಿ ನಗಿಸಿದವ. ಹೀಗೇ ಪುರುಸೊತ್ತಾದಾಗಲೊಮ್ಮೆ ಇಂವ ಹೆಂಡತಿಯ ನಗು ಕಂಡ. ನಗಿಸಿದವನನ್ನೂ...

"ದಿನದಿನದ ಕಿರಿಕಿರಿ ತಪ್ಪಿತು!" ನಿಸೂರಾದ.
ಆದರೆ... ಪ್ರತಿಷ್ಠೆಗೆ ಮನೆತನದ ಗೌರವಕ್ಕೆ ಬಗಲಲ್ಲೊಬ್ಬಳು ಹೆಂಡತಿ ಬೇಕಲ್ಲವೆ? ಇವಳು ಅವನೊಟ್ಟಿಗೆ ಓಡಿಹೋದರೆ? ತಲೆ ಗಿರ್ರಂದಿತು.

ಊಟ ಮುಗಿದು ದೀಪವಾರಿಸಿ ಬಂದವಳ ಪಕ್ಕ ಕುಂತು ಹೇಳಿದ. "ನೀ ಅವನೊಟ್ಟಿಗೆ ಹೇಗಾದರೂ ಇರು... ನಾನ್ ಸಪೋರ್ಟ್ ಮಾಡ್ತೀನಿ! ಬೇಕಿದ್ರೆ ಮದುವೆಯಾಗು, ನಾನ್ ಯಾರಿಗೂ ಹೇಳಲ್ಲ... ನೀನು ಮಾತ್ರ ನನ್ನ ಜತೆಗೇ ಇರು! ನಿನ್ ಅಫೇರಿಗೆ ತೊಂದ್ರೆ ಮಾಡೋಲ್ಲ!!"

ಅಷ್ಟೇ....
ಮರು ದಿನವೇ ಅವಳು, ಮನೆ ಬಿಟ್ಟು ಹೊರಟಳು.

# ಬಿಸಾಡು ಆ ಹಳೆಯ ನೋವುಗಳನ್ನೂ...

ಜಿರಳೆ ಮೊಟ್ಟೆ ಅಂಟಿಕೂತ ಡೈರಿಗಳ ದೂಳು ಕೊಡವಿದಾಗ ಹಳೆ ನೆನಪುಗಳು ಉದುರಿಬಿದ್ದವು.
ಜೊತೆಗೇ ಕೋಪ, ತಾತ್ಸಾರ, ಹೇವರಿಕೆ...
ನೋವು ಯಾಕೆ?

ಅದೊಂದು ಪುಟದಲ್ಲಿ ಬರೆದಿಟ್ಟ ಎದೆಯುರಿ ಹಾಗೇ ಇತ್ತು.
ಕಣ್ಣೀರಿಗೆ ಕಲಸಿಹೋದ ಇಂಕು, ತಿಕ್ಕಿ ಸವೆದ ಹಾಳೆ, ಹದಿನೆಂಟರ ಹುಡುಗುತನದಲ್ಲಿ ಅಂವನ್ನ 'ಪಿಶಾಚಿ'ಯಾಗಿಸಿ ಬರೆದ ಕೋರೆಹಲ್ಲಿನ ಚಿತ್ರ... ನುಗ್ಗಿ ಬಂತು ನೆನಪು, ರೂಮಿನ ತುಂಬ ಚೆಲ್ಲಾಪಿಲ್ಲಿ ಟೆಡ್ಡೀಬೇರುಗಳು. ಒಂದು, ಎರಡು, ಮೂರು...!

ಮದುವೆಯಾಗಿ ತಿಂಗಳು ಕಳೆದಿರಲಿಲ್ಲ. ರಾತ್ರಿ ಹನ್ನೆರಡು ಮೀರಿದರೂ ಅಂವ ಬಂದಿರಲಿಲ್ಲ. ನಡುವಿನೆರಡು ಹಾಳೆ ತುಂಬ, ಅಂವ ಸೇಫಾಗಿ ಮನೆಮುಟ್ಟಲಿ ಅಂತ "ಓಂ ಶ್ರೀ ಜಗನ್ಮಾತರ್ಯೆ...." ಬರೆದಿದ್ದೆ ನಾನು!

ಹ್ಞ! ಅದೆಂಥ ಹುಚ್ಚು? "ನೀ ನನ್ನ ಹುಚ್ಚು, ಹಗಲು, ರಾತ್ರಿ, ನಿದ್ರೆ, ಎಚ್ಚರ, ಎಲ್ಲವೂ!" ಅಣಕಿಸುತ್ತಿವೆ ಸಾಲುಗಳು. ನಡುರಾತ್ರಿ ಮೀರುವ ಹೊತ್ತಿಗೆ ಕಣ್ಣು ಕೆಂಡದುಂಡೆ. ಅತ್ತತ್ತು ನನ್ನದು, ಕುಡಿಕುಡಿದು ಅವನದು!

~

ಇಲ್ಲಿ ಹೀಗಿದೆ, ಯುವಜನ ಮೇಳಕ್ಕೆ ಹೋಗಿದ್ದವನ ಸಂಗತಿ. ಅಲ್ಲಿಂದಲ್ಲೇ ಎರಡು ದಿನ ಇಲ್ಲವಾಗಿದ್ದವನ, ಎಲ್ಲಿದ್ದೆ ಅನ್ನೋದನ್ನ ಈವರೆಗೂ ಹೇಳದವನ ಸಂಗತಿ. ಹಾಗೆ ಅಂವ ಫೋನಿಗೂ ಸಿಗದೆ ದಿನಗಟ್ಟಲೆ ಮಾಯವಾಗಿದ್ದಾಗ ನನ್ನಪ್ಪ ಅಮ್ಮ, ಪಾಪ! ಸೋಡಾಭಟ್ಟರಿಗೆ ಅಂಜನ ಹಾಕಿಸಿ ಅಂವನ್ನ ಪತ್ತೆ ಮಾಡಿಸಹೊರಟಿದ್ದರು.

ಮನೆಗೆ ಬಂದವ, "ಸಿಕ್ಕಾಪಟ್ಟೆ ಜ್ವರ ಬಂದು ಮಲಗಿಬಿಟ್ಟಿದ್ದೆ ಅಲ್ಲೇ" ಅಂದ. ನಾನು, 'ಅಯ್ಯೋ' ಅಂದು ಸಂಕಟಪಡುತ್ತ 'ಅಮೃತಾರಿಷ್ಟ' ಕುಡಿಸಿದ್ದೆ.

~

ಅಲ್ಲೊಂದು ದಿನದ ಮುಂದೆ ಭೀಮನ ಅಮವಾಸ್ಯೆ ಅಂತಿದೆ. ಹೌದು. ಅಣ್ಣ ಬಂದಿದ್ದ. ಭಾವನ ಜೀವನ ಸುಖವಾಗಿರಲಿ ಅಂತ ಹೊಸಿಲಲ್ಲಿ ಕುಂತು ಭಂಡಾರ ಒಡೀತಿದ್ದ. ಅದು, ಮದುವೆಯಾದ ಮೂರನೇ ವರ್ಷದ ಪೂಜೆ. ಅವತ್ತಿನ ನಿಮಿಷ ನಿಮಿಷ ನೆನಪಿದೆ ನನಗೆ.



ಅಂವನ್ನ ಕೂರಿಸಿ ಕಡಲಾರತಿ ಎತ್ತುವ ಹೊತ್ತಿಗೆ,
ಬಾಗಿಲಲ್ಲಿ ಪೋಲಿಸರು!
ಪುಣ್ಯಾತ್ಮ! ಯಾರದೋ ತಲೆಯೊಡೆದು ಸಿಕ್ಕಿಬಿದ್ದಿದ್ದ!!

ಇಲ್ಲ... ನೀವಂದುಕೊಂಡಿದ್ದು ಸುಳ್ಳು. ಅಂವನ್ನ ಅವರೇನೂ ಕೈಕೋಳ ಹಾಕಿ ಮೆರವಣಿಗೆ ಮಾಡಲಿಲ್ಲ. ಇಂವ ಅದೇನೋ ಪಿಸಿಪಿಸಿ ಮಾಡುತ್ತ ಪೋಲಿಸರನ್ನ ಕರಕೊಂಡು ಒಳನಡೆದ. ಅವರು ಆಚೆ ಹೋಗುತ್ತಲೇ ಷರಟೇರಿಸಿ ಕಾರುಹೊರಡಿಸಿ ಹೊಂಟುಬಿಟ್ಟ.

ಎಲ್ಲಿಗೆ? ಗೊತ್ತಿಲ್ಲ!

ಈ ಸಾರ್ತಿ ಅಪ್ಪ ಅಮ್ಮ ಯಾರಿಗೂ ಅಂಜನ ಹಾಕಿಸುವ ಉಸಾಬರಿಗೆ ಹೋಗಲಿಲ್ಲ. ಆದರೆ ಅಣ್ಣ ಮಾತ್ರ, "ಮದುವೆ ಗೊತ್ತುಮಾಡುವ ಮುಂಚೆ ನನ್ನ ಕೇಳಬೇಕಿತ್ತು ನೀವು" ಅಂತ ಕೂಗಾಡಿ ಉಪ್ಪು ಸುರಿದ.

~

ಅದು ನಾನು ಹಾಳೆ ತೋಯಿಸಿದ ಕೊನೆಯ ಹುಟ್ಟುಹಬ್ಬ.
ಅವತ್ತು ಕಾಣೆಯಾದವ ಸುಮಾರು ನಾಲ್ಕು ವರ್ಷ ಕಳೆದು ಮನೆಗೆ ಹೋಗಿದ್ದ. ಹೌದು. ಅಲ್ಲಿ ನಾನಿರಲಿಲ್ಲ. ಅಂವ ಹೋದ ವರ್ಷಕ್ಕೆಲ್ಲ ಅಲ್ಲಿನ ಹಿಂಸೆ ತಾಳಲಾರದೆ ಮನೆಬಿಟ್ಟು ಬಂದುಬಿಟ್ಟಿದ್ದೆ. ಅತ್ತೆ ಮಾವ ಫೋನ್ ಮಾಡಿ "ಬಾ" ಅಂತ ಕರೆದಿದ್ದರು. ನಾದಿನಿ ನುಲಿಯುತ್ತ, "ದೇವರೇ ಹುಟ್ಟುಹಬ್ಬದ ಉಡುಗೊರೆ ಕಳಿಸಿದಾನೆ ಬಾರೇ" ಅಂದಿದ್ದಳು.
ಓ! ಅದೊಂದು ಮಹಾಭಾರತ. ಅದನ್ನೆಲ್ಲ ಇಲ್ಲಿ ಬರೆದಿಟ್ಟಿಲ್ಲ ನಾನು.

~

ಇಗೋ! ಬಾಗಿಲು ಬಡಿಯುವ ಸದ್ದು! ಹೀಗೆ ಒನಕೆ ಕುಟ್ಟಿದಹಾಗೆ ಕುಟ್ಟೋದು ಇಂವ ಮಾತ್ರ. ಸರಸರನೆ ಕಣ್ಣೊರೆಸಿಕೊಳ್ಳುತ್ತ ಜೀವನ ತೂಕಕ್ಕೆ ಹಾಕಿದೆ. ಆಗ ಕಳಕೊಂಡಿದ್ದಕ್ಕಿಂತ ಈಗ ಪಡಕೊಂಡಿದ್ದೇ ಹೆಚ್ಚಾಗಿತ್ತು! ಬಾಗಿಲು ತೆಗೆಯುತ್ತ, "ಡೈರಿಯನ್ನ ಗಾರ್ಬೇಜಿಗೆ ಹಾಕಬೇಕು" ಅಂದುಕೊಂಡೆ.

ಒಳಬಂದವನ ಮೆಲುನಗು, 'ಬಿಸಾಡು ಆ ಹಳೆಯ ನೋವುಗಳನ್ನೂ' ಅಂದಿತು.

# ಎರಡು ಜಡೆ ಒಂದಾಗದು!?

ಅವಂಗೆ ಒಂದೇ ಸಮ ಅಸಹನೆ.
ಎಲ್ಲರ ಜತೆಯಲ್ಲಿ ಲಕಲಕ ಅನ್ನುವ ಹೆಂಡತಿಯರು ಕುಲುಕುತ್ತ ನಿಂತಿದ್ದರೆ, ತನ್ನ ಪಕ್ಕ ಮಂಗಳ ಗೌರಿ ಗೆಟಪ್ಪಿನ ಹುಡುಗಿ ನಾಚಿ ನೀರಾಗಿ ಹರೀತಿದಾಳೆ!

ಹಾಗಂತ ತಾನು ಅವಳಿಗೆ ತುಂಡು ತೋಳಿನ ಬ್ಲೌಸು ಹಾಕಕೊಡಲಾರ. ಪಾರ್ಟಿಯಲ್ಲಿ ಬೀರು ಹೀರುತ್ತ ನಿಂತ ಮಿಸ್ಟರ್‌ಗಳೆಲ್ಲ ಬಂದು, ತನ್ನವಳ ಬಾಳೆದಿಂಡಿನಂಥ ತೋಳನ್ನೇ ಗುರಾಯಿಸ್ತ, 'ಸೆಕ್ಸೀ ವೈಫ್...ಹ್ಹ!' ಅನ್ನಬಾರದಲ್ಲ? ಅದಕ್ಕೆ.

ಆದರೂ ಈ ಮಂಗಳ ಗೌರೀನ ಕಟ್ಕೊಂಡು ಕ್ಲಬ್ಬಲ್ಲಿ ತನ್ನ ರ್‍ಯಾಪೋ ಡೆವಲಪ್ ಮಾಡ್ಕೊಳೋದು ಹೇಗೆ? ಮಿಸಸ್ ಎಕ್ಸಳ ಸಾಲು ಹಲ್ಲಿನ ಹೊಳಪಿಗೇ ಅಲ್ಲವೇ ಮಿಸ್ಟರ್ ಎಕ್ಸನ ಕೆಲಸವೆಲ್ಲ ಸಲೀಸಾಗಿ ಆಗಿಹೋಗೋದು? ಅದೆಷ್ಟೆಷ್ಟು ಗ್ರ್ಯಾಂಟುಗಳು ಅವನ ಬುಟ್ಟಿಗೆ! ಅದ್ಯಾರ್‍ಯಾರ ಜತೆಗೆಲ್ಲ ಅವನ ಫೋಟೋ ಇದೆ!?

ಅದೇ ಕೊನೆ.
ಅಂವ ಮತ್ಯಾವತ್ತೂ ತನ್ನ ಹೆಂಡತಿಯನ್ನ ಯಾವ ಪ್ರೋಗ್ರಾಮಿಗೂ ಕರೆದೊಯ್ಯಲಿಲ್ಲ.
ಮನೆಯಲ್ಲಿ ಮಂಗಳ ಗೌರಿ, ದಿನಾ ಬೆಳಗಾಗೆದ್ದು ಅಂಗಳ ಸಾರಿಸುತ್ತ, ರುಚಿ ರುಚಿ ತಿಂಡಿ ತೀರ್ಥ ಹೊಂದಿಸುತ್ತ, ಮಕ್ಕಳನ್ನ ಬೆಳೆಸಿಕೊಳ್ಳುತ್ತ ಉಳಿದುಬಿಟ್ಟಳು.

~

ಇತ್ತೀಚಿನ ಪಾರ್ಟಿಗಳಲ್ಲಿ ಅವನ ಹೇತ್ಲಾಂಡಿ ಮುಖ ಹಲ್ಲು ಗಿಂಜುತ್ತ ನಗೋದನ್ನ ಯಾರೂ ನೋಡಬಹುದು. ಬಗಲಲ್ಲಿ ಬೆಳ್ಳಗೆ ಬಳಕುವ ಅವಳಿದ್ದಾಳಲ್ಲ? ಅಂವ ಪಾರ್ಟಿಯ ಮಿಸ್ಟರ್‌ಗಳಿಗೆಲ್ಲ ಅವಳನ್ನು ತನ್ನ 'ಸೆಕ್ರೆಟರಿ' ಅನ್ನುತ್ತಾನೆ, ಅವರು ಕಣ್ ಹೊಡೆಯುತ್ತಾರೆ. 'ಓ.....' ಎಂದು ತೊನೆಯುತ್ತ ಬರುವ ಮಿಸೆಸ್‌ಗಳು ಅವಳನ್ನ ಕಣ್ಣಲ್ಲೆ ಅಳೆಯುತ್ತ ಸುರಿಯುತ್ತ, ತಮ್ಮೆಲ್ಲ ಐಬನ್ನು ಅವಳ ಐಡೆಂಟಿಟಿಯೆದುರು ನಿವಾಳಿಸಿ ಸಮಾಧಾನ ಪಡುತ್ತಾರೆ.

ಅಂವ ಹೋದಲ್ಲೆಲ್ಲ ಅವನ ಲ್ಯಾಪ್‌ಟಾಪು, ಡೈರಿ ಹಿಡಿದು ಸುತ್ತುವ ಅವಳು, ಕತ್ತು ಕೊಂಕಿಸುತ್ತ 'ಅಸಿಸ್ಟ್' ಮಾಡುತ್ತಾಳೆ. 'ಎಂದಾದರೊಂದು ದಿನ' ಅಂತ ಕನಸುತ್ತಲೇ ಮಿಸ್ಟರ್‌ಗಳು ಅವಳ ಪೇಪರುಗಳಿಗೆ ಸಹಿ ಗೀಚುತ್ತಾರೆ.

ಅವಳು ಹಾಗಿದ್ದಾಳೆ. ತುಂಡು ತೋಳಿನ ಬ್ಲೌಸು ತೊಡುತ್ತಾಳೆ. ಅವನಿಷ್ಟದಂತೆ ಹೊಕ್ಕುಳ ಕೆಳಗೆ ಸೀರೆಯುಟ್ಟು ಮಿಟುಕುತ್ತಾಳೆ.

'ಕ್ಲಬ್ಬಿನ ಮಂದಿಯೆಲ್ಲ ಹಿಂದಿನಿಂದ ತಮ್ಮನ್ನು 'ಗಂಡ- ಹೆಂಡತಿ' ಅಂತಲೇ ಆಡಿಕೊಳ್ತಾರೆ' ಅಂತ ಅವಳಂದುಕೊಂಡಿದ್ದಾಳೆ.

~

ಹೀಗೊಂದು ದಿನ ಅವನ ಮನೆಯಲ್ಲಿ ಎಂಥದೋ ಶಾಂತಿ ಹೋಮ.
ಕ್ಲಬ್ಬಿನವರು, ಕಲೀಗುಗಳು ಎಲ್ಲರಿಗೂ ಅವನ ಆಹ್ವಾನ.
ಅವತ್ತು, ಮನೆ ತುಂಬ ಮಂಗಳ ಗೌರಿಯ ಸಡಗರ.
ಅವಳು ಫಳಫಳದ ಬಳೆ ತೊಟ್ಟು ಕೆನ್ನೆಗರಿಷಿಣ ಮೆತ್ತಿ ಪತಿರಾಯನ ಪಕ್ಕ ಕುಂತು ಹೋಮಕ್ಕೆ ತುಪ್ಪ ಸುರೀತಿದ್ದರೆ...
ಇವಳೆದೆಯಲ್ಲಿ ಧಗಧಗ!!



ಬಂದ, ಹೋದ ಅತಿಥಿಗಳೆಲ್ಲ ಮನೆಯಂಗಳದಲ್ಲಿ ಕಿಲಕಿಲವೆನ್ನುತ್ತ ನಿಂತ ಇವಳ ಕೈ ಕುಲುಕಿ 'ಮೇಡಮ್' ಅನ್ನುತ್ತಿದ್ದರೆ...
ಆ ಅವಳೆದೆಯಲ್ಲಿ ಕಿಡಿಕಿಡಿ!
ಭಂಡ ಗಂಡಸಿನ ಬೇಳೆ ಬೇಯಿಸಲಿಕ್ಕೆ ಹೆಣ್ಣುಗಳಿಬ್ಬರ ಹೊಟ್ಟೆಕಿಚ್ಚಿನ ಕಾವು!!

ಹ್ಹ್! ಯಾವನೋ ಕುಂತು ಬರೆದ...
'ಯಾವತ್ತೂ ಎರಡು ಜಡೆ ಒಂದಾಗದು.'



# ಎಂದೆಂದೂ ಮುಗಿಯದ ಕಥೆ

ಸುತ್ತ ಕಾಡಿನ ಒಂಟಿಮನೆಯ ಅಂಗಳದಲ್ಲಿ ಸಂಭ್ರಮವೋ ಸಂಭ್ರಮ. ದೂರದ- ಹತ್ತಿರದ ಬಳಗ ಪೂರಾ ಅಲ್ಲಿ ಜಾತ್ರೆ ಸೇರಿತ್ತು. ಆ ಮನೆಯ ಹಿರಿ ಮಗಳ ಮದುವೆ! ಅಷ್ಟಾದರೂ ಗೌಜಿ ಗದ್ದಲ ಬೇಡವೇ? ಹಾಗೆ ಬಂದವರ ಚಕ್ಕಡಿಗಾಡಿಗಳನ್ನ ನಿಲ್ಲಿಸೋದಕ್ಕಂತಲೇ ಎದುರಿನ ಮರಗಳನ್ನ ಕಡಿದು ಅಂಗಳವನ್ನ ಮತ್ತೂ ಅಗಾಲ ಮಾಡಿದ್ದರು.

ನಾಗರ ಪಿಲ್ಲೆ, ಡಾಬು, ಒಡ್ಯಾಣ, ಕೆಂಪು ಕಲ್ಲಿನ ಸೆಟ್ಟು, ಹಸಿರು ಕಲ್ಲಿನ ಸೆಟ್ಟು, ಓಹೋ! ಮದೋಳ್ಗಿಯ ಅಲಂಕಾರವೋ ಅಲಂಕಾರ! ಮಾಸ್ತರಿಕೆ ಬಿಟ್ಟು ತಾನೇ ಗಿಡ ಗಿಡವನ್ನೂ ನೆಟ್ಟು ಎಕರೆಗಟ್ಟಲೆ ತೋಟ ಮಾಡಿ ಫಲ ಉಣ್ಣುತ್ತಿದ್ದ ಯಜಮಾನ ಮಗಳ ಮದುವೆಗೆ ಧಾರಾಳ ಖರ್ಚು ಮಾಡಿದ್ದ. "ಪಾಪ! ಇಲ್ಲಿದ್ದಷ್ಟೂ ದಿನ ನೀರು ನಿಡಿ ಅನ್ನುತ್ತಲೇ ತೇದಿದೆ ಜೀವ!!" ಮಗಳ ಮೇಲೆ ಮಮತೆ ಉಕ್ಕಿ ಹನಿಗಣ್ಣಾಗಿದ್ದ.

ಬರೋಬ್ಬರಿ ಒಂದು ವಾರದ ಮದುವೆ. ಬೆಳ್ಳಗೆ ಮೈಕೈ ತುಂಬಿಕೊಂಡಿದ್ದ ಗಂಡು ರೇಶಿಮೆ ಮುಗುಟದ ಕಚ್ಚೆಯುಟ್ಟು ತಾಳಿ ಕಟ್ಟಿದ್ದ. ಅವನ ಚಪ್ಪರಿಕೆಯ ನೋಟ ಕಂಡೇ, "ಭಾವ ಭಾರೀ ರಸಿಕ" ಅಂತ ಮನೆ ಮಾಣಿಗಳು ಲೆಕ್ಕಹಾಕಿದ್ದರು. ಎರಡು ಗಂಡು, ಆರು ಹೆಣ್ಣು ಮಕ್ಕಳ ತುಂಬುಕುಟುಂಬದ ಮನೆಗೆ ಇವಳು ಎರಡನೆ ಸೊಸೆ. ನಾಳೆ ಆಸ್ತಿ ಪಾಲಾದರೂ ನಷ್ಟವಿಲ್ಲ ಅನ್ನುವಷ್ಟು ಅನುಕೂಲಸ್ಥರು... ಅಂತೆಲ್ಲ ಗುಣಾಕಾರ ಮಾಡಿಯೇ ಅವಳಪ್ಪ ಸಂಬಂಧ ಗೊತ್ತು ಮಾಡಿದ್ದರು. ಆ ಹೊತ್ತಿಗೆ ಕೇಳಿಯೂ ಕೇಳದ ಹಾಗೆರಡು ಮಾತುಗಳು ಅವರ ಮನೆಯತ್ತ ಸುಳಿದುಹೋಗಿದ್ದವು.

ಅದನ್ನ ಹಾಗೇ ಒರೆಸಿಹಾಕಿದ್ದ ಅಪ್ಪ, 'ಹೊಟ್ಟೆಕಿಚ್ಚಿನ್ ಮುಂಡೇವು, ಹೊಯ್ಕಳ್ತವೆ!' ಅಂತ ರೇಗಿದ್ದ. ಅಮ್ಮ ಮಾತ್ರ ತನ್ನ ವಾರಿಗೆಯವರ ಹತ್ತಿರವೆಲ್ಲ 'ಹೌದಂತಾ?' ವಿಚಾರಿಸಲು ಹೋಗಿ ಗಂಡನ ಕೈಲಿ ಬೈಸಿಕೊಂಡಿದ್ದಳು.

ಆ ಹುಡುಗಿಯ ಗಂಡನ ಮನೆಗೂ, ತವರಿಗೂ ಚಕ್ಕಡಿ ದಾರಿ ದೂರ. ಸಂಜೆ ಹೊರಟವರು ಮುಸ್ಸಂಜೆಗೂ ಮುನ್ನ ತಲುಪಿಕೊಂಡಿದ್ದರು. ಮುಟ್ಟಾಗಿ ಮದುವೆಗೆ ಬಾರದೆ ಉಳಿದಿದ್ದ ಹಿರಿ ಸೊಸೆ ವೈಯಾರ ಮಾಡುತ್ತ ಮನೆ ಹುಡುಗಿಯರ ಕೈಲಿ ಆರತಿ ಎತ್ತಿಸಿದಳು. ಮಹಡಿ ಮೇಲಿನ ಮೂಲೆಕೋಣೆಯಲ್ಲಿ ಸಂಸಾರ ಶುರುವಾಯ್ತು.

ಮದುವೆಯಾಗಿ ವಾರವಿಲ್ಲ, ಆಗ ಮನೆಯತ್ತ ಸುಳಿದಿದ್ದ ಸುದ್ದಿ ಈಗ ಕಣ್ಣೆದುರು ಸುಳಿಯತೊಡಗಿತ್ತು. ಹೆಣ್ಣುಹೆಣ್ಣಿಗ ಗಂಡನ ಮೇಲೆ ಮುನಿಸು ಅಂತ ವಾರಗಿತ್ತಿ ಚೌಕಿಯಲ್ಲಿ ಮಲಗ್ತಿದ್ದಳು. ಅರೆ! ಪಕ್ಕದಲ್ಲೇ ಮುಸುಗರೆಯುತ್ತ ಬಿದ್ದುಕೊಂಡಿದ್ದ ಗಂಡ ಎಲ್ಲಿ ಹೋದ? ಬಿಟ್ಟಕಣ್ಣಲ್ಲಿ ಹೊರಳಿದಳು ಹುಡುಗಿ. ಎದ್ದು ಹೋಗಿ ನೋಡಿದರೆ...? ನೋಡಿದ್ದು ನಿಜವಾಗಿಬಿಟ್ಟರೆ!?

ಥೀ...! ಎಂಜಲು ಗಂಡಸಿನೊಟ್ಟಿಗೆ ಬಾಳೋದು ಹೇಗೆ? ದಿನಾ ನನ್ನ ಸೆರಗು ಹಾಸಿ... ಬಿಕ್ಕುತ್ತ ಉಳಿದಳು, ಒಂದೆರಡು ದಿನ ಮಾತ್ರ. ಅದೊಂದು ರಾತ್ರಿ ಅವಡುಗಚ್ಚಿ ಎದ್ದವಳೇ ಸೀದಾ ಚೌಕಿಮನೆಗೆ ನಡೆದಳು. ಕೇಳಿದ್ದನ್ನ ಕಂಡಳು. ಅವಳ ಕೂಗಿಗೆ ಅತ್ತೆ ಮಾವ ಎದ್ದು ಬಂದರು. ಮನೆ ಮರ್ಯಾದೆ ಅಂತ ಕೈ ಮುಗಿದರು. ವಾರಗಿತ್ತಿಯ ಗಂಡ ಅನಿಸ್ಕೊಂಡವ ಪೆಚ್ಚಾಗಿ ನಿಂತಿದ್ದ. ನೆಲದ ಮೇಲೆ ಹೊರಳಿದ್ದವರು ಮಾತ್ರ ಏನೂ ಆಗೇ ಇಲ್ಲವೆನ್ನುವಂತೆ ಎದ್ದು ಕುಳಿತು ತಲೆ ಸವರಿಕೊಂಡರು.

ಮಾರನೆ ಬೆಳಗಿನ ಚಕ್ಕಡಿ ತವರಿನ ಹಾದಿ ಹಿಡಿದಿತ್ತು. ಹಿಂದೆ ಕುಳಿತ ಹುಡುಗಿ ದಾರಿಯಲ್ಲಿ ಎದುರಾದ ಶೀನಪ್ಪನ್ನ ಕಂಡು, 'ಶೀನಪ್ಪಯ್ಯಾ, ನಾ ಬಂದ್ಬಿಟ್ಟೇ!!" ಅಂತ ಕುಣಿದಾಡಿದಳು. ಸಂಜೆಯಾಗುವುದರೊಳಗೆ ಸುದ್ದಿ ಸದ್ದಾಗಿ ಅವರ ಮನೆ ಬಾಗಿಲಲ್ಲಿ ನಿಂತಿತ್ತು. ಊರ 'ಹಿರಿಯರು' ಪಂಚಾಯ್ತಿ ಮಾಡಿ, ಮೂವರು 'ಮಾಡಿದ್ದು ಸರಿಯಾಗಿದೆ' ಅಂದರು, ಇಬ್ಬರು 'ಶುದ್ಧ ತಪ್ಪು' ಅಂದರು! ಆಸುಪಾಸಿನ ಜನ ಅಷ್ಟೆಲ್ಲ ಖರ್ಚು ಮಾಡೀ... ಅಂತ ರಾಗ ತೆಗೆಯುತ್ತ ಎಂಥದೋ ವಿಚಿತ್ರ ಲೆಕ್ಕಾಚಾರದಲ್ಲಿ ಅವಳನ್ನ ದೂಷಿಸಿದರು. ಹೆಣ್ಣುಗಳು 'ಗಂಡುಬೀರಿ' ಅಂತ ಬಿರುದು ಕೊಟ್ಟರು.

ಮನೆ ಯಜಮಾನ ಬಾವಿ ಹಿಂದಿನ ಕೊಟ್ಟಿಗೆ ಕೋಣೆ ಬಿಟ್ಟುಕೊಟ್ಟು ಇದ್ದುಬಿಡು ಮಗಳೇ ಅಂದು ಸುಮ್ಮನಾದ. ಮಗಳು ತಮ್ಮಂದಿರಿಗೆ ಅಮ್ಮನೇ ಆಗಿ ಬೆಳೆಸಿದಳು. ಅವರ ಮಕ್ಕಳಿಗೆ ಅತ್ತೆಯಾಗಿ ಬೆಳಗಾಗೆದ್ದು ಬೆಲ್ಲದ ಕಷಾಯ ಮಾಡಿಕೊಟ್ಟಳು. ಮದುವೆ, ಬಸಿರು, ಬಾಣಂತನಗಳು, ಉಪನಯನ ಅಂತೆಲ್ಲ ಸಡಗರಿಸುತ್ತ ಆ ಮನೆಯಲ್ಲಿ ತಾನೊಂದು 'ಜನ'ವಾಗಿ ಕೊನೆಗೊಮ್ಮೆ ಸತ್ತಳು.

ಅವಳ ಸಾವಿನ ಸಮಯಕ್ಕೆ "ಅಬ್ಬಾ ಗಟ್ಟಿಗಿತ್ತಿ" ಅಂತ ಹೊಗಳಿದರು ಎಲ್ಲರೂ.

~

ಹೌದು, ಇದು ನಡೆಯಿತು. ನೆನ್ನೆ ಮೊನ್ನೆಯಲ್ಲ, ಎಪ್ಪತ್ತು ವರ್ಷಗಳ ಹಿಂದೆ ನಡೆಯಿತು. ನಾನು 'ಅತ್ತೆ' ಅಂತ ಕರೆಯುವ ಕಾಲಕ್ಕೆ ಆಕೆಗೆ ಎಪ್ಪತ್ತೈದು ದಾಟಿತ್ತು. ಆದರೂ ನನ್ನ ತಲೆ ನೇವರಿಸಿ ನೆಟಿಕೆ ತೆಗೆಯುತ್ತಾ, "ಈ ಕೂಸಿನದೊಂದು ಮದುವೆ ನೋಡಿ..." ಅಂತ ಹಂಬಲಿಸುತ್ತಿದ್ದರು ಅವರು. ಆದರೇನು? ನಾನು ನೆರೆಯುವ ಮುಂಚೆಯೇ ಗೇದಿದ್ದು ಸಾಕಾಗಿ ಹೊರಟುಬಿಟ್ಟರು.

ನನಗೆ ಮದುವೆಯಾಯಿತು. ಅತ್ತೆಯಿಲ್ಲದೆ ಆಗಿಹೋಯಿತು. ಹೆಣ್ಣು ಮಕ್ಕಳು ಸೋದರತ್ತೆಯರನ್ನೇ ಹೋಲ್ತಾರೆ! ಯಾರೋ ಸುಳ್ ಹೇಳಿದಾರೆ...

ಹಾ! ನನ್ನ ಜೀವನ ಹೆಚ್ಚುಕಡಿಮೆ ಹಾಗೇ ಇದೆ. ಅವನ ಸುತ್ತ ಸಾಕಷ್ಟು ಕಥೆಗಳಿವೆ.
ಅಪ್ಪನ ಹತ್ತಿರ ಹೇಳಿಕೊಂಡೆ. ಅವರು, "ಈಗ ಅದೆಲ್ಲ ಕಾಮನ್ನು ಮಗಳೇ, ಹೇಗೂ ದುಡೀತಿ, ನಿನ್ನ ಪಾಡಿಗೆ ಸಂಬಂಧವಿಲ್ಲಾ ಅಂತ ಇದ್ದುಬಿಡು" ಅಂದರು. ಅಮ್ಮ, "ವಾಪಸು ಮಾತ್ರ ಬರಬೇಡವೇ ತಾಯಿ" ಅಂದು ಕೈಮುಗಿದಳು.

ಇಷ್ಟಕ್ಕೂ, 'ಬಾ' ಅಂದಿದ್ದರೆ ನಾನೇ ಹೋಗುತ್ತಿರಲಿಲ್ಲ! ನನ್ನ ಮರ್ಯಾದೆಗೆ ಸಂಚಕಾರವಲ್ಲವೆ?
ಜೊತೆಗೆ ಒಂಟಿ ಜೀವನ ಸಂಭಾಳಿಸೋದು ಕಷ್ಟ!!

ಹೌದು... ಅಪ್ಪ, ಅಜ್ಜನಂತಿಲ್ಲ, ನಾನು ಅತ್ತೆಯಂತೆ...
ಏನು ಮಾಡೋದು ಹೇಳಿ? ಜನ ಮಾತ್ರ ಇಂದಿಗೂ ಹಾಗೇ ಇದ್ದಾರಲ್ಲ!



# ಆ ಮಾತುಗಳಲ್ಯಾಕೋ ಅಮ್ಮ ಸಿಗಲೇ ಇಲ್ಲ

ಮೂರು ವರ್ಷ!
ಸಾವಿರ ದಿನಗಳು ಅಂದ್ರೆ ಸುಮ್ನೆ ಅಲ್ಲ. ಅವತ್ತು ಹೊಸಿಲು ದಾಟುವಾಗ ಹುಚ್ಚು ಹುಮ್ಮಸ್ಸು. ಇವತ್ಯಾಕೋ ಒಳ ಹೊಕ್ಕುವಾಗ ಎದೆ ಡವಡವ.

"ಹೆಂಗಿದ್ರೂ ಬರಲ್ಲ. ಹಂಗಂತ ಕರೀದಿದ್ರೆ ತಪ್ಪಾಗತ್ತಲ್ಲ?" ಅಂತ ಅಪ್ಪನ ಪಕ್ಕ ಮಗ್ಗಲು ಬದಲಿಸಿದ ಅಮ್ಮ, ತಂಗಿ ಮದುವೆ ಇನ್‌ವಿಟೇಶನ್ನು ಕಳಿಸಿದ್ದಳು. ನಾ ಖುಷಿಯಿಂದ ಕಾಲ್ ಮಾಡಿದಾಗ, ಅವಳ ನಾಲ್ಕು ಸಾಲಿನ ಮಾತಿನ ತುಂಬ ಫುಲ್‌ಸ್ಟಾಪು– ಕಾಮಾಗಳೇ ತುಂಬಿ, 'ಬಾ' ಅಂದಿದ್ದು 'ಬರಬೇಡ' ಅಂದಂತಾಗಿತ್ತು! ಮೊನ್ನೆ ಮೊನ್ನೆ ತನಕ ಅಂವ ಅದನ್ನೇ ಎತ್ತಿ ಆಡಿ, ಛೇಡಿಸುತ್ತಿದ್ದ.

ಈಗ ಹಾಗಲ್ಲ. ಅಮ್ಮ, 'ಬಾ' ಅಂತಲೇ ಕರೆದಿದಾಳೆ. ಮಾತಿನ ನಡುವೆ ಅನಗತ್ಯ ಪಂಚುಯೇಶನ್ನುಗಳಿರಲಿಲ್ಲ!

"ನಾ ಬಡ್ಕಂಡೆ, ರೈಲು ಬೇಡ, ಬಸ್ಸಲ್ಲೆ ಹೋಗಣ ಅಂತ. ಸ್ಟೇಷನ್ನಿಗೆ ಹತ್ರ ಅಂತ ಅವಳ ಮನೆಗೆ ಹೋಗಿದ್ದೆ ತಪ್ಪಾಯ್ತು" ಅಮ್ಮ ಸಿಡುಕ್ತಿದ್ದಳು.
"ಹಾಗಂತ? ಕರೀದೇ ಇರೋಕಾಗ್ತಿತ್ತೇನು ಅವಳನ್ನ? ಇಲ್ಲೀ ತನಕ ಬಂದೋಳು, ನಾವ್ ಕರೀದೇ ಹೋಗಿದ್ರೆ ಹೋಟೆಲ್ಲು ರೂಮ್ ಮಾಡ್ಕಂಡು ಮಾನ ತೆಗೀತಿದ್ಲು!" ಅಪ್ಪ ದನಿಯೇರಿಸ್ತಿದ್ದ. "ಒಟ್ನಲ್ಲಿ, ನಮ್ ನೆಮ್ಮದಿ ಹಾಳು ಮಾಡ್ಲಿಕ್ಕೇ ಹುಟ್ಟಿದ್ದವಳು"– ಗಂಡ ಹೆಂಡತಿ ಷರಾ ಬರೆದರು!

~

ಅಮ್ಮನ ಮನೆ!
ಕಾಲೇಜಿಗೆ ಕಿಲೋಮೀಟರುಗಟ್ಟಲೆ ನಡೆದು ಹೋಗ್ತಿದ್ದ ನನ್ನ ಕಾಲೊತ್ತುತ್ತಿದ್ದ ಅಮ್ಮ. . .
ಮಳೆಯಲ್ಲಿ ಛತ್ರಿ ಮರೆತಾಗ ಹಿಡಿದ್ಕೊಂಡು ಓಡೋಡಿ ಬರುತ್ತಿದ್ದ ಅಮ್ಮ. . .
ಅಪ್ಪನ ಲೆಕ್ಕ ತಪ್ಪಿಸಿ, ಹತ್ತು ವರ್ಷಗಳ ಹಿಂದೆ ದುಬಾರಿ ಅನಿಸಿದ್ದ ವಿಸ್ಪರ್ರು– ಡವ್ ಸೋಪುಗಳನ್ನ ಒದಗಿಸ್ತಿದ್ದ ಅಮ್ಮ... ಅವಳು ಮಾಡೋ ಅಮಟೆ ಗೊಜ್ಜು...
ಆಹಾ! ಮುನ್ನೂರು ಕಿಲೋಮೀಟರು ಪೂರ್ತಿ ಹಳೆಯ ಅಮ್ಮನದೆ ನೆನವರಿಕೆ!

~

ಮತ್ತೀಗ, ಅದೆ ಹೊಸ್ತಿಲು.
ಒಳದಾಟಿದೆ ನಾನು. ದೇವರ ಕೋಣೆಯಲ್ಲಿ ಅಪ್ಪನ "...ಬ್ರಾಹ್ಮಣೋ ಅಸ್ಯ ಮುಖಮಾಸೀತ್... ಪದ್ಭ್ಯೋ ಶೂದ್ರೋಭಿಜಾಯತ..." ನಾ ಬರೋದನ್ನೇ ಕಾದುಕುಂತು ಹೇಳ್ತಿದಾನೇನೋ? ನನ್ನವನ ನೆನಪಾಯ್ತು.

~

ಮನೆಯ ಒಳ ಕೋಣೆಗಳಲ್ಲೆಲ್ಲ ಎಂಥದೋ ಗುಟ್ಟು ಗುಟ್ಟು, ಬೇಲಿ– ಚೌಕಟ್ಟು!
ಅಡುಗೆ ಮನೆಯಲ್ಲಿ ಘಮಘಮ. ಜಡಿ ಮಳೆಯ ಚಳಿಯಲ್ಲೂ ಬೆವರೊರೆಸಿಕೊಳ್ತಿರುವ ಅಮ್ಮ, ಮತ್ತೀಗ ಅವಳ ಪ್ರತಿ ಮಾತಲ್ಲೂ ಘುಲ್‌ಸ್ಟಾಪು, ಕಾಮಾ!!



# ಅಣಕಿಸುತಿದೆ ಸಹಾಯವಾಣಿ ನಂಬರು

"ಅಂವ ಅವತ್ತೂ ಕುಡಿದುಬಂದ.
ಹೊಸತೇನಲ್ಲ. ಮೊದಮೊದಲು ವಾಂತಿ ತರಿಸ್ತಿದ್ದ ಗಬ್ಬು ವಾಸನೆ ಆಮೇಲಾಮೇಲೆ ಅಭ್ಯಾಸವಾಗಿಹೋಗಿ ಈಗೀಗ ಹಿತವೆನಿಸತೊಡಗಿದೆ. ಈಗೊಂಥರಾ ಹೆಂಡದ ವಾಸನೆಯ ಅಡಿಕ್ಷನ್ ನಂಗೆ. ಇಂವ ಊರಲ್ಲಿ ಇಲ್ಲದಾಗ ನಿದ್ದೆಯೇ ಬರೋಲ್ಲ ಕಣೇ!"



ಅವಳು ಕೂಲಾಗಿಯೇ ಹೇಳ್ತಿದ್ದಳು. ಮುಖದಲ್ಲಿ ಹುಡುಕಿದರೂ ನೋವಿನೆಳೆಯಿಲ್ಲ. "ಇವತ್ತಿನ ತಿಂಡಿಗೆ ಚಪಾತಿ ಮಾಡಿದ್ದೆ" ಅನ್ನುವಷ್ಟೇ ಸಹಜವಾಗಿತ್ತು ಅವಳ ಮಾತು.

ಹಾಗವಳು ಹೇಳಹೊರಟಿದ್ದು ಅವತ್ತಿನ ಬಗ್ಗೆ. ಅಂವ ಕುಡಿದು ಹೆಚ್ಚಾಗಿ ಅವಳ ಮುಖ ಮೂತಿ ನೋಡದೆ ಜಪ್ಪಿದನಲ್ಲ ಅವತ್ತಿನ ಬಗ್ಗೆ. ಯಾವುದೋ ಸಣ್ಣ ಮಾತಿಗೆ ಅಂವ ತೀರಾ ಅವಳ ಮುಖಕ್ಕೆ ದಿಂಬು ಒತ್ತಿ ಹಿಡಿದುಬಿಟ್ಟಿದ್ದ.

"ನಂಗೆ ಬದುಕೋ ಆಸೆ ಇದೆ ಕಣೇ.... ನಾನು ಬದುಕ್ಬೇಕು..." ಅವಳ ಬಿಕ್ಕಳಿಕೆಗೆ ನನ್ನ ಗಂಟಲೊತ್ತಿ ಬಂದಿತ್ತು.

~

ಅವಳ ಮನೆಯ ಸಂಸ್ಕಾರ ದೊಡ್ಡದು. ಸಂಸ್ಕಾರವೆಂದರೆ, ಮಡಿ ಮೈಲಿಗೆ ಇತ್ಯಾದಿ...
ಮಡಿಯ ಜನಗಳಿಗೆ ಪ್ರಾಣಕ್ಕಿಂತ ಮಾನ ದೊಡ್ಡದಾಗಿರೋದು ಸಹಜ. ಮೈ ತುಂಬ ಬರೆ ಹೊತ್ತ ಮಗಳನ್ನ ಕಂಡು ಅವಳಮ್ಮ ಬಿಕ್ಕಿದರು. "ಜನಕ್ಕೆ ಏನಂತ ಹೇಳೋದು?"
ಅತ್ತೆಯೂ ಹೇಳ್ತಾಳೆ... "ಕುಡಿದಾಗ ಹಾಗಾಡೋದು ಬಿಟ್ರೆ ಮಗ ಒಳ್ಳೆಯವ್ನು ಕಣೇ, ಅಡ್ಜಸ್ಟ್ ಮಾಡ್ಕೋ!"

ಇರುಳು ಕಂಠಮಟ್ಟ ಕುಡಿದವನ ನಶೆ ದಿನಾ ಬೆಳಗ್ಗೆ ಹೊರಡುವಾಗಲೂ ಇಳಿದಿರೋಲ್ಲ...
ಮತ್ತೆ ಸಂಜೆ ಕಂಠಮಟ್ಟ....
ಇನ್ನು, ಅಡ್ಜಸ್ಟ್ ಮಾಡ್ಕೊಳೋದು ಯಾವಾಗ?

~

ಒಮ್ಮೆಯಂತೂ ವಿಪರೀತಕ್ಕೆ ಹೋಯ್ತು.
ಅಂವ ಹುಚ್ಚು ನಾಯಿ ಕಡಿದವರ ಹಾಗೆ ಮುಗಿಬಿದ್ದಿದ್ದ.

ಹೆಂಡತಿಯನ್ನ ಸುಖಾಸುಮ್ಮನೆ ಬಡಿಯುವ ಗಂಡಸರು ಒಂದೋ ಸೋಲನ್ನ ಸಹಿಸಲಾಗದವರಾಗಿರ್ತಾರೆ. ಇಲ್ಲಾ ಕೀಳರಿಮೆಯವರಾಗಿರ್ತಾರೆ. ಇನ್ನೂ ಸರಿಯಾಗಿ ಹೇಳಬೇಕಂದರೆ ಕೈಲಾಗದ ದುರಹಂಕಾರಿಗಳಾಗಿರ್ತಾರೆ!

ಈ ಇಷ್ಟರಲ್ಲಿ ಅಂವ ಎಂಥದೋ ಒಂದು, ಅಂತೂ ಆಗಿದ್ದ. ಒಟ್ಟು ಕುಂತು ಉಣ್ಣಲು ಕಾಯ್ತಿದ್ದವಳನ್ನ ಮನೆಗೆ ಬಂದವನೆ ಧಬ ಧಬ ಬಡಿದು ಬಿಸಾಕಿದ.

ಯಾವತ್ತಿನಂತೆ ಫೋನು ಮಾಡಿ ಅತ್ತವಳಿಗೆ ನಾನು 'ಕುಟುಂಬ ದೌರ್ಜನ್ಯ ಕಾಯಿದೆ' ಇತ್ಯಾದಿ ಭಾಷಣ ಬಿಗಿದು ಸಹಾಯವಾಣಿಗಳ ನಂಬರು ಕೊಟ್ಟೆ. ಇನ್ನೇನು, ಎಲ್ಲ ಮುಗಿಯಿತಂತಲೇ ಅಂದುಕೊಂಡು ಅವಳು ಸುಖವಾಗಿರಲಿ ಅನ್ನುತ್ತ ದೀಪ ಹಚ್ಚಿಟ್ಟೆ.

~

ಇವೆಲ್ಲ ಆಗಿ ನಾಲ್ಕನೇ ದಿನಕ್ಕೆ ಸೀರೆಯುಟ್ಟು ಮನೆಗೆ ಬಂದಳು ಅವಳು. ಜತೆಗೆ ಕವರಲ್ಲಿ ಮೈಮೇಲೆ ಬರುವ ದೇವರೊಂದರ ಪ್ರಸಾದ!

"ಯಾರೋ ಏನೋ ಮಾಡ್ಸಿ ಹಾಕಿದಾರೆ ಕಣೇ. ದೇವ್ರು ಹೇಳ್ತು. ದಿನಾ ಚಿಟಿಕೆ ಕುಂಕುಮ ನೀರಲ್ಲಿ ಹಾಕಿ ಕುಡಿಸೋಕೆ ಹೇಳಿದಾರೆ. ಮೂರನೇ ಅಮವಾಸ್ಯೆಗೆ ಹೋಗಬೇಕಂತೆ!" ಅಂದವಳ ಮುಖದಲ್ಲಿ ಸಂಭ್ರಮ.

ನನ್ನ ಎದೆಹಿಂಡಿ ಅಯ್ಯೋ ಅನಿಸುತ್ತಿತ್ತು. ತಲೆ ಕೆಟ್ಟು ಅಂವ ಇಡಿ ಕುಂಕುಮದ ಪೊಟ್ಟಣವನ್ನೇ ಬೀರಲ್ಲಿ ಹಾಕಿ ಕುಡಿದುಬಿಟ್ಟರೆ?

ಕೇಳೋಣವೆಂದುಕೊಂಡೆ. ಅಪರೂಪಕ್ಕೆ ನಗುತ್ತಿದ್ದಳು ಹುಡುಗಿ, ಸುಮ್ಮನಾದೆ.

~

ಇವತ್ತು ಬೆಳಗ್ಗೆ ಮತ್ತೆ ಅವಳ ಫೋನು ಬಂತು.
ದೇವರ ಮನೆಯಲ್ಲಿಟ್ಟಿದ್ದ ನಿಂಬೆ ಹಣ್ಣು ಕಾಣ್ತಿಲ್ಲವಂತೆ.
ಅಂವ ನಿನ್ನೆ ರಾತ್ರಿ ಮತ್ತೆ ಸಮಾ ಕುಡಿದು ಬಂದಿದ್ದನಂತೆ.

"ಏನಿಲ್ಲ, ಮೂಗಲ್ಲಿ ರಕ್ತ ಬರೋ ಹಾಗೆ ಹೊಡೆದ ಅಷ್ಟೆ. ಮೂರನೇ ಅಮವಾಸ್ಯೆಗೆ ಕಾಯ್ತಿರುವೆ. ಆಮೇಲೆ ಎಲ್ಲ ಸರಿ ಹೋಗತ್ತೆ. ಆದ್ರೆ, ಈ ನಿಂಬೆ ಹಣ್ಣು ಎಲ್ಲಿ ಹೋಯ್ತಂತಲೇ ಗೊತ್ತಾಗ್ತಿಲ್ಲ...."
ಅವಳು ಹೇಳ್ತಲೇ ಇದ್ದಳು. ಮೇಜಿನ ಮೇಲಿಟ್ಟಿದ್ದ ಮಹಿಳಾ ಸಹಾಯವಾಣಿ ನಂಬರು, ನನ್ನ ಅಣಕಿಸ್ತಲೇ ಇತ್ತು.



# ಹಿತ್ತಿಲ ಬಾಗಿಲಲ್ಲಿ ಕುಂತು, ಅಪ್ಪನ ದಾರಿ ಕಾಯುತ್ತ

"ಈ ಸಾರ್ತಿ ನೀನು ಬೆಂಗಳೂರಿಗೆ ಹೋದಾಗ ನನ್ನಪ್ಪ ಸಿಗ್ತಾರಾ ನೋಡು ಆಯ್ತಾ?" ಅಂತ ಗೋಡೆ ಮೇಲೆ ನೇತುಹಾಕಿದ್ದ ಅವರಪ್ಪನ ಫೋಟೋ ತೋರಿಸ್ತ ಅಳು ದನಿಯಲ್ಲಿ ಹೇಳಿದ್ಲು ನಾಗಲಕ್ಷ್ಮಿ.

ಅವಳಪ್ಪ ನೀಲಿ ಬಜಾಜ್ ಸ್ಕೂಟರ್ ಸ್ಟಾರ್ಟ್ ಮಾಡ್ತಾ ಕ್ಯಾಮೆರಾಗೆ ಪೋಸು ಕೊಟ್ಟಿದ್ದರು. ಅವಳ ತಮ್ಮ ಸಿಂಬಳಸುರುಕ ರಾಘು ಹುಟ್ಟಿದ ಆರನೇ ತಿಂಗಳಿಗೆ ಅವರು ಮನೆ ಬಿಟ್ಟು ಹೋಗಿದ್ದರು. ಬಾಣಂತನಕ್ಕೆ ಬಂದಿದ್ದ ನಾಗಲಕ್ಷ್ಮಿ ಅಮ್ಮ ಗೀತಮ್ಮ ಶಿವಮೊಗ್ಗೆಯಲ್ಲೆ ಉಳಿಯಬೇಕಾಯ್ತು.



ಈ ನಾಗಲಕ್ಷ್ಮಿಗಿಂತ್ಲೂ ಅವಳ ತಾತ ಅಂಗಡಿ ಶೆಟ್ಟರು ಮತ್ತು ಅವಳಮ್ಮನ ಜೊತೆಗೇ ನನ್ನ ದೋಸ್ತಿ ಹೆಚ್ಚಿತ್ತು. ಪ್ರತಿ ಶನಿವಾರ ಗೀತಮ್ಮನೊಟ್ಟಿಗೆ ಶನಿ ದೇವಸ್ಥಾನಕ್ಕೆ ತಪ್ಪದೆ ಹೋಗಿ ಚಟ್ನಿಪುಡಿ ಹಚ್ಚಿದ ಮೂಲಂಗಿ ಹೋಳಿನ ಪ್ರಸಾದ ಮೆದ್ದು ಬರ್ತಿದ್ದೆ ನಾನು. ಅಲ್ಲಿ ಕುಂತು ಬೋರಾಗ್ತಿದ್ರೂ ಸ್ವಲ್ಪ ಖಾರ ತಿಂಡಿಗಳ ಖಯಾಲಿಯಿದ್ದ ನಂಗೆ ಅಲ್ಲಿಯ ಪ್ರಸಾದದ ಆಸೆ ಅತ್ತ ಸೆಳೀತಿತ್ತು. ಉಳಿದಂತೆ ಮುಗುಮ್ಮಾಗೇ ಇರ್ತಿದ್ದ ಗೀತಮ್ಮ ಮಾತ್ರ ದೇವಸ್ಥಾನದಿಂದ ವಾಪಸು ಬರುವ ದಾರಿಯುದ್ದಕ್ಕೂ ವಟಗುಟ್ಟುತ್ತಲೆ ಇರುತ್ತಿದ್ದರು. "ನಾಗಲಕ್ಷ್ಮಿ ಅಪ್ಪ ಬರ್ತಾರಲ್ವಾ?" ಅಂತ ಕೇಳಿ ಕೇಳಿ, ಅಂತೂ ಇಂತೂ ನನ್ನಿಂದ 'ಹೂಂ' ಅನ್ನಿಸಿ ನಿಸೂರಾಗ್ತಿದ್ದರು.

~

"ಅಶೋಕನ ಹೆಂಡ್ತಿ ಆನೆಮರಿ!" ಗಂಡ ಹೆಂಡತಿ ಅಂದ್ರೇನು ಅಂತಲೂ ಅರಿಯದ ಪಿಳ್ಳೆಗಳಾದ್ರೂ ಅಕ್ಕಪಕ್ಕದ ಮನೆ ಹಿರಿಯರು ಹಿಂದಿನಿಂದ ಪಿಸುಗುಟ್ಟೋದನ್ನ ಕೇಳಿ ನಾವೂ ಅದನ್ನೇ ಹೇಳಿ ಅಮ್ಮನ ಹತ್ರ ಪೆಟ್ಟು ತಿಂದ ನೆನಪು.

ಅವರು ಉಷಾ. ಆ ಆಂಟಿಯ ಧಡೂತಿ ದೇಹದ ಹಿಂದೆ ಅದಕ್ಕಿಂತ ಧಡೂತಿಯಾದ ನೋವಿತ್ತು, ಕಥೆಯಿತ್ತು. ಗಂಡನ್ನ ಕಳಕೊಂಡಿದ್ದ ಅವರನ್ನ ಅಶೋಕ್ ಅಂಕಲ್ ಮದುವೆಯಾಗಿದ್ರು. ಮೊದಲ ಗಂಡನ ಮಗ ಅಮಿತನ್ನ, ತಮ್ಮ ಮಗನ್ನ ನೋಡ್ಕೊಳ್ಳಬಹು ದಾಗಿದ್ದಕ್ಕಿಂತ ಹೆಚ್ಚು ಮುಚ್ಚಟೆಯಿಂದ ಸಾಕುತ್ತಿದ್ದರು.

ಅಂಥ ಅಶೋಕ ಅಂಕಲ್, ಆಂಟಿ ಮಗನೊಟ್ಟಿಗೆ ತವರಿಗೆ ಹೋಗಿದ್ದಾಗ ಹಿಂದಿನ ಮನೆ ವಚ್ಚಿಯ ವಶವಾಗಿಹೋದ್ರು. ಆ ವಚ್ಚಿ ಅದೇನು ಮೋಡಿ ಹಾಕಿದಳೋ, (ಹಾಗಂತ ಅಮ್ಮ ಮತ್ತು ಪಕ್ಕದ ಮನೆ 'ಪುಡಿಚಟ್ನಿ' ಮಾತಾಡ್ತಿದ್ದ ನೆನಪು!) ಅಂತೂ ಅವರಿಬ್ರು ಓಡಿಹೋಗಿ ಮದುವೆಯಾದ್ರು ಅನ್ನೋವರೆಗೂ ಕಥೆ ಬೆಳೀತು.

ಅವತ್ತು ಹಾಗೆ ಓಡಿಹೋದ ಅಂಕಲ್ ಮತ್ತೆ ವಾಪಸು ಬರಲಿಲ್ಲ. ನನ್ನ ತಮ್ಮ ಅಪ್ಪಿಗಿಂತ ಚಿಕ್ಕವನಾಗಿದ್ದ ಅಮಿತನಂತೂ "ಡ್ಯಾಡಿ ಬೇಕು" ಅಂತ ಕೊರಗಿಕೊರಗಿಯೇ ಪೀಚಲಾಗಿಹೋಗಿದ್ದ. ನಾವೆಲ್ಲ ಆನೆಮರಿ ಅಂತ ಅಣಕಿಸ್ತಿದ್ದ ಉಷಾ ಆಂಟಿಯೂ ಅರ್ಧಕ್ಕರ್ಧ ಇಳಿದುಹೋಗಿಬಿಟ್ಟಿದ್ದರು. ಮನಸ್ಸು ಭಾರವಾಗಿಸ್ಕೊಂಡು ಮೈ ಹಗುರವಾಗಿಸ್ಕೊಳ್ತಿದ್ದರು. ಅಮಿತ ಆಗೀಗ ಅಪ್ಪಿ ಹತ್ರ ಕಣ್ಣೊರೆಸಿಕೊಳ್ತಲೇ "ಡ್ಯಾಡಿ ಬರ್ತಾರೆ ಅಲ್ವೇನೋ? ಬಂದೇ ಬರ್ತಾರೆ" ಅಂತ ತನಗೆ ತಾನೆ ಪ್ರಶ್ನೆ- ಉತ್ತರ ಹೇಳಿಕೊಳ್ತಾ ಮುಸುಗರೆಯುತ್ತಿದ್ದ.

~

"ಮಾರ್ಕ್ಸ್ ಕಾರ್ಡಿಗೆ ತಾಯಿ ಸೈನ್ ಯಾಕೆ ಹಾಕಿಸಿದ್ದೀ? ತಂದೆ ಸೈನು ಹಾಕಿಸಿ ತರೋಕೆ ಹೇಳಿದ್ದು ನಾನು" ಟೀಚರ್ ಗದರುತ್ತಿದ್ದರೆ, ಸಂಧ್ಯಾಳ ಬಟ್ಟಲುಗಣ್ಣು ತುಂಬಿ ತುಳುಕುತ್ತಿತ್ತು. ಅವಳಪ್ಪ ಹೆಂಡತಿಗೆ ಪ್ರಮೋಶನ್ ಮೇಲೆ ಪ್ರಮೋಶನ್ ಸಿಕ್ಕಿದ್ದೇ ನೆವ ಮಾಡ್ಕೊಂಡು ತನ್ನ ನಾಮರ್ದತನವನ್ನೆಲ್ಲ ಕಾರಿಕೊಂಡು, ಆಕೆಯನ್ನ ಝಾಡಿಸಿ, ಮನೆ ಬಿಟ್ಟು ಹೋಗಿದ್ದರು.
ಅವಳಮ್ಮ ಗಟ್ಟಿಗಿತ್ತಿ. ಹಾಗೆ ಹೋದವರು ಕೈಕಾಲು ಕಟ್ಟದೆ ಡೈವೋರ್ಸ್ ಗೀಚಿ ಎಸೆದಿದ್ದರು.

ಮಕ್ಕಳಿಗೆ ಏನೂ ಕೊರತೆಯಾಗದ ಹಾಗೆ ಸಾಕುತ್ತಿದ್ದರು. ಆದರೆ ಸಂಧ್ಯಾ ಮಾತ್ರ ಮಕ್ಕಳನ್ನ ಶಾಲೆಯಿಂದ ಕರ್ಕೊಂಡುಹೋಗ್ಲಿಕ್ಕೆ ಸ್ಕೂಟರಲ್ಲಿ ಬರ್ತಿದ್ದ ಅಪ್ಪಂದಿರನ್ನ ಕಂಡಾಗಲೆಲ್ಲ "ನಂಗೂ ಅಪ್ಪ ಬೇಕು" ಅಂತ ಮುಖ ಮುಚ್ಚಿಕೊಳ್ತಿದ್ಲು. ಆಗೆಲ್ಲ ಗಂಭೀರ ಮುಖ ಮಾಡ್ಕೊಳ್ತಿದ್ದ ನಾನು ಏನು ಹೇಳಲೂ ತೋಚದೆ, "ನೀ ಉಗುರು ಕಚ್ಚೋದು ಬಿಟ್ರೆ ಎಲ್ಲ ಸರಿಯಾಗುತ್ತೆ. ನೀ ಹಾಗೆ ಕಚ್ಚಿ ಮನೆ ಒಳಗೆ ಹಾಕಿದ್ಕೇ ಅಪ್ಪ ಅಮ್ಮ ಜಗಳ ಆಡಿದ್ದು" ಅಂತೇನೇನೋ ಹೇಳಿಬಿಟ್ಟಿದ್ದೆ. ಪಾಪ, ಅವಳು ನಾನು ಶಿವಮೊಗ್ಗ ಬಿಟ್ಟು ಬರೋವರೆಗೂ "ನಾಳೆಯಿಂದ ಉಗುರು ಕಚ್ಚೋಲ್ಲ ಕಣೇ" ಅಂತ ಪ್ರತಿಜ್ಞೆ ಮಾಡ್ತಲೇ ಉಳಿದಿದ್ದಳು!

~

ಈ ಎಲ್ಲ ಕಥೆಗಳಿಗೂ ಈಗ ಹದಿನೆಂಟಿಪ್ಪತ್ತು ವರ್ಷ.
ನಾಗಲಕ್ಷ್ಮಿಯ ಅಳುದನಿ, ಅಮಿತನ ಕನವರಿಕೆ, ಸಂಧ್ಯಾಳ ತುಳುಕುವ ಬಟ್ಟಲುಗಣ್ಣುಗಳು ಇನ್ನೂ ನನ್ನ ಕಾಡ್ತಲೇ ಇರುತ್ತವೆ. ಆದರೆ ಅವರೆಲ್ಲರಿಗಿಂತ ಅವರ ಅಮ್ಮಂದಿರ ಸಂಕಟಕ್ಕೆ ನನ್ನ ಕರುಳು ಹಿಂಡುತ್ತೆ. ಧೋಕಾ ಮಾಡಿದ ಗಂಡಂದಿರನ್ನ ಹಂಬಲಿಸೋ ಮಕ್ಕಳನ್ನ ಸಂಭಾಳಿಸಿದ ಅವರ ಹಾದಿಯಲ್ಲೀಗ ನಾನಿದ್ದೇನೆ.

ಯಾವ ಸಬೂಬೂ ಇಲ್ಲದೆ ಹೊರಟುಹೋದ ಅಂವ ಮರಳದಂತೆ ನಾನೇನೋ ಕದಹಾಕಿ ಬೆನ್ನು ತಿರುಗಿಸಿದ್ದೇನೆ. ಆದರೀಗ ನನ್ನ ಎಂಟರ ಮಗಳು ಹಿತ್ತಲ ಬಾಗಿಲಲ್ಲಿ ಕುಂತು ಅಪ್ಪನ ಹಾದಿ ಕಾಯ್ತಿದ್ದಾಳೆ.

ತನ್ನ ಎಳೆ ಗೆಳತಿಯರಿಗೆ ದುಂಬಾಲು ಬೀಳುತ್ತ... ಹೊರಬಹುದಾದ ಹರಕೆಗಳ ಲಿಸ್ಟು ತಡಕುತ್ತ... ಉಗುರು ಕಚ್ಚೋದನ್ನ ಬಿಡಲಿಕ್ಕೆ ಶತಪ್ರಯತ್ನ ಮಾಡುತ್ತ... ಅವನ ಫೋಟೋ ಅವರಿಗೆ ತೋರಿಸಿ, "ಅಪ್ಪನ್ನ ಹುಡುಕಿಕೊಡಿರೇ" ಅನ್ನುತ್ತ... ನನ್ನ ಹೊಟ್ಟೆ ಉರಿಸುತ್ತಿದ್ದಾಳೆ.



# ಸಂಸಾರವೆಂಬ ಹೆಣ!

"ನಿನ್ನನ್ನ ಏನೂ ಅಂತ ಪರಿಚಯ ಮಾಡಿಸ್ಬೇಕಿತ್ತು ನಾನು?"
ಅವನು ಕೇಳಿದ್ದ. ಕೈಲಿದ್ದ ಮೊಬೈಲು ಬಿಸಾಕಿ ನೆಲಕ್ಕೆ ಹೆಜ್ಜೆ ಬಡಿಯುತ್ತ ರೂಮೊಳಗೆ ಹೋಗಿ ಬಾಗಿಲು ಬಡಚಿಕೊಂಡಳು.

ಎರಡು ವರ್ಷವಾಗಿತ್ತು ಅವರ ಸ್ನೇಹಕ್ಕೆ. ಅದು ಪ್ರೇಮವೂ ಆಗಿತ್ತು. ಮದುವೆ – ಸಂಸಾರ ಇತ್ಯಾದಿಯಲ್ಲಿ ನಂಬಿಕೆ ಇರದೆ ಒಂದೇ ಗೂಡಲ್ಲಿ ಒಟ್ಟೊಟ್ಟಿಗೆ ಕಿತ್ತಾಡಿಕೊಂಡು ಉಳಿದಿದ್ದರು.



ಅವಳು ದಿಟ್ಟ ಹುಡುಗಿ. ದಿನದಿನವೂ ಅಪ್ಪ ಅಮ್ಮನಿಗೆ ಝಾಡಿಸಿ ಒದೆಯೋದನ್ನ ನೋಡುತ್ತಲೇ ಬೆಳೆದಿದ್ದಳು. ಉಪ್ಪಿಟ್ಟು ಮಾಡಿದ ಹಸಿ ಬಾಣಂತಿ ಚಿಕ್ಕಮ್ಮನನ್ನ ಚಿಕ್ಕಪ್ಪ ಕುತ್ತಿಗೆ ಹಿಡಿದು ನೂಕಿದಾಗ ಅವಳು ಸತ್ತೇ ಹೋಗಿದ್ದಳು. ಹಾಡುಹಗಲೇ ಅಪ್ಪನೊಟ್ಟಿಗೆ ಸೇರಿ ಅಂವ ಹೆಣವನ್ನ ಬಾವಿಗೆ ನೂಕಿ, 'ಬಾಣಂತಿ ಸನ್ನಿ ಹಿಡಿದು ಸತ್ತಳು' ಅಂತ ಮಾವನ ಮನೆಗೆ ತಾರು ಕಳಿಸಿದ್ದ.

ಇದೆಲ್ಲ ನೋಡುತ್ತ ಬೆಳೆದ ಪರಿಣಾಮವೋ ಏನೋ, ಅವಳೊಟ್ಟಿಗೆ ಗಂಡಸಿನೆಡೆಗೆ ಅರಿವಿಲ್ಲದ ಹಾಗೊಂದು ತಾತ್ಸಾರ ಕೂಡ ಬೆಳೆಯುತ್ತಿತ್ತು. ಅದೇ, ಅವಳು ಮದುವೆಯಾಗದೆ ಉಳಿಯುವ ಹಾಗೆ ಪ್ರೇರೇಪಿಸಿತ್ತು.

ಆದರೇನು? ಕಾಮ ಗಂಡಸಾದರೂ ಅವನನ್ನ ದ್ವೇಷಿಸಿ ಗೆಲ್ಲೋದು ಸುಲಭವಲ್ಲವಲ್ಲ!? ಹಾಗಂತ ಅವಳದು ಕಚ್ಚಾ ಹರೆಯದ ಸೆಳೆತವೇನೂ ಆಗಿರಲಿಲ್ಲ. ಜತೆಯಲ್ಲಿ ಕ್ಯಾಮೆರಾ ನೇತುಹಾಕಿಕೊಂಡು ಊರೂರು ಅಲೆಯಲು ಬರುತ್ತಿದ್ದ ಅವನು ತನಗೆ ಎಲ್ಲ ರೀತಿಯಲ್ಲೂ ಸರಿಹೊಂದುವ ಹಾಗೆ ಕಂಡ. ಅಂವ ಕೂಡ ಮೂವತ್ತು ದಾಟಿದ್ದರೂ ಮದುವೆಯಾಗದೆ ಇದ್ದುಬಿಟ್ಟಿದ್ದ. ಅಲೆಮಾರಿ ಬದುಕಿನ ತನ್ನನ್ನ ಹೆಂಡತಿಯಾಗಿ ಬರುವವಳು ಕಣ್ಣೀರಲ್ಲಿ ಕಟ್ಟಿಹಾಕುವಳೆಂಬ ಹೆದರಿಕೆಯಿತ್ತಂತೆ ಅವನಿಗೆ!

ಹೀಗೆ ಕಟ್ಟಿಸಿಕೊಳ್ಳಲು ಇಷ್ಟವಿರದ ಅವರಿಬ್ಬರೂ ಎರಡು ಮನೆಯಿಂದ ಒಂದಕ್ಕೆ ಶಿಫ್ಟಾದರು. ಯಾವ ಕರಾರು– ತಕರಾರುಗಳೂ ಇಲ್ಲದೆ ಒಟ್ಟಿಗೆ ಇರಲು ಶುರುವಿಟ್ಟಿದ್ದರು.

ಮೊದಮೊದಲು ಎಲ್ಲ ಚೆಂದವಿತ್ತು. ಅವಳು ಮೊಟ್ಟೆ ಒಡೆದರೆ ಅಂವ ಆಮ್ಲೆಟ್ ಬೇಯಿಸುವನು. ಅಂವ ವಾಶಿಂಗ್ ಮೆಶೀನು ಚಾಲೂ ಮಾಡಿದರೆ ಅವಳು ಬಟ್ಟೆ ಒಣಗಿಸುವಳು. ಹೀಗೇ, ಕೆಲಸ– ಖರ್ಚುಗಳೆರಡೂ ಸಮ ಸಮ ಹಂಚಿಕೆಯಾಗಿತ್ತು.

ಹಾಳು ಹೆಣ್ತನ ಸುಮ್ಮನಿರಬೇಕಲ್ಲ? ಅಂವ ಪಾತ್ರೆ ತೊಳೆಯೋದು, ಕಸ ಗುಡಿಸೋದು ಇವೆಲ್ಲ ಅವಳನ್ನ ಕಲಕಿ 'ಪಾಪ' ಅನಿಸುವ ಹಾಗಾಗಿಬಿಡುತ್ತಿತ್ತು. ಬರಬರುತ್ತ ಅವೆಲ್ಲ ಕೆಲಸಗಳಿಂದ ಅಂವನ್ನ ಆಚೆ ಹಾಕಿದಳು.

ಅಂವ ಅದನ್ನ ಹೇಗೆ ಅರ್ಥೈಸಿಕೊಂಡನೋ? ಮನೆಯಲ್ಲಿ ಸರಿ ತಪ್ಪು ಶುರುಮಾಡಿದ. ಅಂತೂ ಮದುವೆಯಿಲ್ಲದ ಸಂಸಾರ ಅಧಿಕೃತವಾಗಿ ಆರಂಭವಾಯಿತು!

ಜತೆಯಿರಲು ಶುರು ಮಾಡಿದಾಗಿಂದಲೂ, ಅದಕ್ಕೆ ಮೊದಲೂ ಅವರು ಒಟ್ಟೊಟ್ಟಿಗೆ ಊರೂರು ಅಲೆಯೋದಿತ್ತು. ಅವರ ಕೆಲಸವೇ ಅಂಥದ್ದು. ಆಗೆಲ್ಲ ಎದುರು ಸಿಕ್ಕವರಿಗೆ 'ಇಂವ ನನ್ನ ಗೆಳೆಯ', 'ಇವಳು ನನ್ನ ಗೆಳತಿ' ಅಂತೆಲ್ಲ ಪರಿಚಯ ಮಾಡಿಸೋದಿತ್ತು. ಆಗ ಅದೊಂದು ಹೆಮ್ಮೆಯ ಸಂಗತಿ.

ಆದರೆ, ಇತ್ತೀಚೆಗೆ ಎಲ್ಲವೂ ಹಾಗೇ ಉಳಿದಿಲ್ಲ! ಅದನ್ನವಳು ಗಮನಿಸ್ತಿದಾಳೆ.

ಅದೊಮ್ಮೆ, ಅವಳ ಮೆಚ್ಚಿನ ತಾಣಕ್ಕೆ ಅಂವ ಹೊರಟಿದ್ದ. ಓಹ್! ಕೆಲಸ ಮುಗಿಸಿ ಒಂದಿನ ಹಾಯಾಗಿದ್ದು ಬರಬಹುದು!! ಖುಶಿಯಾದಳು. ರೆಡಿಯಾಗಿ ನಿಂತಿದ್ದ ಅವಳ ಸೂಟ್

ಕೇಸು ನೋಡಿದ ಅಂವ, ಒಂದು ನಾಲ್ಕು ದಿನ ನಾನೆಲ್ಲೋ ಹೋಗಿಬರುವುದಿದೆ ಅಂದು ಹೊರಟುಬಿಟ್ಟ. ಅವಳ ಪಾಡಿಗೆ ಅವಳೂ ಹೊರಡಲು ಯಾವುದರ ಅಡ್ಡಿಯಿರಲಿಲ್ಲ. ಆದರೆ, ಹಾಗೆ ಅವನೊಟ್ಟಿಗೆ ಕರೆಯದೆ ಹೋಗುವುದು ಸ್ವಾಭಿಮಾನಕ್ಕೆ ಕೇಡು!

ಕೂದಲು ತಿರುವುತ್ತ ತನ್ನ ಯೋಚನೆಗಳಿಗೆ ತಾನೇ ಸಿಟ್ಟಾಗಿ ಉಗಿದುಕೊಂಡಳು. "ಬೇರೇನೋ ಕೆಲಸವಿದ್ದೀತು, ಇದಕ್ಯಾಕೆ ಹೊಸತೊಂದು ಅರ್ಥ ಹುಡುಕಿ ಮೂಲೆ ತಡಕಬೇಕು? ಶುದ್ಧ ಹೆಂಗಸರ ಹಾಗೆ!!" ಅಂತ ನಕ್ಕು ಹಗುರಾಗಲು ಹೆಣಗಿದಳು.

ಅಂವ ಕೆಲಸ ಮುಗಿಸಿ ಬಂದ ದಿನ ಇವಳು ತನ್ನ ಕೆಲಸಕ್ಕೆ ಹೋಗಿದ್ದಳು. ಅವಳು ಬರುವ ಹೊತ್ತಿಗೆ ಇಂವ ಮತ್ತೆಲ್ಲಿಗೋ ಹೊರಡುವ ತಯಾರಿ ನಡೆಸಿದ್ದ. ಬರಬರುತ್ತ ಹಾಗೆ ಅವಳನ್ನ ಬಿಟ್ಟು ತಾನೊಬ್ಬನೆ ಹೊರಡುವುದು ಅದತ್ತಾಗಿಬಿಟ್ಟಿತು ಅವನಿಗೆ. ಹಾಗೆಲ್ಲ ಹೋಗುವ ಮುನ್ನ, ಬಂದಮೇಲೆ ಅವನ ಒಲವು ನೂರು ಪಟ್ಟಾಗುತ್ತಿತ್ತು ಅವಳ ಮೇಲೆ. ಅಂವ ಈಗ ಕೊಂಚ ಪಾಪ್ಯುಲರ್ ಕೂಡ ಆಗಿದ್ದ. ಅಂವ ತೆಗೆಯುವ ಫೋಟೋಗಳು, ಅವನ ಬರವಣಿಗೆ– ಇವೆಲ್ಲ ಭಾರೀ ಸುದ್ದಿ ಮಾಡಿದ್ದವು. ಜನ ಅಂವನ್ನ ಗುರುತಿಸತೊಡಗಿದ್ದರು. ಅವನ ದುಡಿಮೆಯೂ ಹೆಚ್ಚಾಗತೊಡಗಿತು. ಅವಳು ಮನೆಮುದ್ದಾಗಿರಲಿ ಅಂತ ಅಂವ ಆಶಿಸತೊಡಗಿದ. ಬೋರು ಅನ್ನುತ್ತಿದ್ದ ಅವಳಿಗೆ ತನ್ನ ಕೆಲಸಗಳಲ್ಲಿ ಪಾಲು ಕೊಟ್ಟು ಮನೇಲಿ ಕುಂತು ಮಾಡು ಅನ್ನತೊಡಗಿದ! ಇವಳ ಹೆಜ್ಜೆ ತಿರುಗಾಟಕ್ಕೆ ತುಡಿಯತೊಡಗಿತು!

ಅದೆಂಥ ಕಮಿಟ್‌ಮೆಂಟೋ ಹೆಣ್ಣುಮಕ್ಕಳದು! ಮನೆ– ಮದುವೆ ಬೇಡವೆನ್ನುತ್ತಲೆ ಅವನಿಗೆ ತಾನು ಬದ್ಧಳಾಗಿ ಉಳಿದುಬಿಟ್ಟಳು ಅವಳು. ತನ್ನೆಲ್ಲ ಪ್ರೀತಿಯನ್ನ ಅವನ ಮೇಲೆ ಸುರಿಸುತ್ತ, ತನ್ನ ಆಸೆಗಳನ್ನ ಹಾಗೇ ಬಲಿ ಕೊಡುತ್ತ...

ಅಷ್ಟಾದರೂ ಅವಳಿಗೆ ತನಗೇನಾಗುತ್ತಿದೆ ಅನ್ನುವ ಖಬರಿರಲಿಲ್ಲ. ಅವಳು ತೀರ ಆಸೆ ಪಟ್ಟಿದ್ದ ಮಹತ್ವದ ಶೂಟಿಂಗಿಗೆ ಹೋಗುವಾಗ ಅಂವ ಅವಳನ್ನ ಬೇಡ ಅಂದುಬಿಟ್ಟಿದ್ದ. ಅದು ಅವನ ಅಪ್ಪ ಅಮ್ಮ ಇರುವ ಊರಾಗಿತ್ತು. ಅಲ್ಲಿಗೆ ಹೋಗಲೆಂತಲೇ ಅವಳು ಹೊಸ ಸೀರೆ ಕೊಂಡಿಟ್ಟಿದ್ದಳು! ಯಾಕೆ? ಅಂಥದೊಂದು ತಯಾರಿಗೆ ಅವಳನ್ನು ಹಚ್ಚಿದ್ದ ಒಳಗಿನ ಸಂಭ್ರಮ ಯಾವುದಿತ್ತು?

ಅದಲ್ಲ ವಿಷಯ, ಅಂವನ್ನ ಅವಳು ಬೇಡವನ್ನುವ ಹಾಗೆ ಮಾಡಿದ್ದ ಒತ್ತಡ ಎಂಥದ್ದು? ಸಹಿಸದಾದಳು. 'ಇನ್ನೆಷ್ಟು ದಿನ ಒಳಗೊಳಗೆ ಒಬ್ಬಳೆ ಗುದ್ದಾಡಿಕೊಳ್ಳಲಿ?' ಅವಡುಗಚ್ಚಿದಳು. ತರಾಟೆಗೆ ನಿಂತಳು, "ಹೇಳು ಯಾಕೆ ನನ್ನ ಜತೆ ತಪ್ಪಿಸಿ ತಿರುಗಾಡುತ್ತೀ ಇತ್ತೀಚೆಗೆ?"

ಅಂವ ತಡವರಿಸಿದ. 'ಜನ ಈಗ ನನ್ನ ಗುರುತು ಹಿಡೀತಾರೆ... ಜತೆಯಲ್ಲಿ ನೀನಿದ್ದರೆ...' ಅವನ ದನಿಯಲ್ಲಿ ಗಿಲ್ಬಿನ ವಾಸನೆ.

'ಇದ್ದರೆ? ಏನೀಗ? ಮೊದಲೂ ಇರ್ತಿದ್ದೆನಲ್ಲ!?'

'ಆಗಿನದು ಬೇರೆ ಮಾತು. ಈಗ, ನಿನ್ನನ್ನ ನಾನು ಏನಂತ ಪರಿಚಯ ಮಾಡಿಕೊಡಲಿ? ನಾಳೆ ಪೇಪರಲ್ಲಿ ಬರೆದರೆ...'



ಅಂವ ಇನ್ನೂ ಏನೇನು ಹೇಳ್ತಿದ್ದನೋ?
ಅವಳೆಸೆದ ಮೊಬೈಲು ಹಾಲ್‌ನಲ್ಲಿ ಬಿದ್ದಿತ್ತು.
ರೂಮಿನ ಕದ ಧಬಾರನೆ ಮುಚ್ಚಿತ್ತು.



## ಅಂವ ಕೊಟ್ಟ ಕಾರಣಗಳು...

ಒಂಟಿತನ ನನಗಿಷ್ಟ! ಹೇಳಿ ಹೇಳಿ ನಕ್ಕೆ.
ಯಾರಾದರೂ ಜತೆಗಿರಲು ಬಂದಾರೆಂಬ ಭಯಕ್ಕೆ.
ನನ್ನ–ಅವನ ನೆನಪ ನಡುವೆ ಯಾರಿಗೇನು ಕೆಲಸ?

ಹಾಗೆ ಅಂವ ತೀರಾ ಮೊನ್ನೆಮೊನ್ನೆವರೆಗೂ ಇದ್ದ.
ಕುತ್ತಿಗೆಗೆ ಕೈಬಳಸಿ, ಕೆನ್ನಗೆ ಕೆನ್ನೆ ಹಚ್ಚಿದ್ದ.
ಸಣ್ಣದೊಂದು ನೋವು ನಕ್ಕು,
'ನಾ ಹೊರಟೆ ಕಣೇ' ಅಂದ.
ಅಂವ ಕೊಟ್ಟ ಕಾರಣಗಳ ಲಿಸ್ಟು ಊರ ರೋಡಿನಷ್ಟೇ ಉದ್ದ.
ಅವೆಲ್ಲ ಬರಿಯ ನೆವಗಳು! ನನಗೆ ತಿಳಿಯದು ಅಂದುಕೊಂಡಿದ್ದ!!

ಇಷ್ಟಕ್ಕೂ ಗಂಡಸಿಗೆ, ಮನೆ ಬಿಡಲು
ಕಾಮವೂ ಒಂದು ಕಾರಣವೇ.
ಅರ್ಥವೂ ಒಂದು ಕಾರಣವೇ.
ಕಡೆಗೆ ಮೋಕ್ಷವೂ ಒಂದು ಕಾರಣವೇ!

ಅಂವ, ನನ್ನ ಮರೆಯಲೆಂದೇ ಅಷ್ಟು ದೂರ ಹೊರಟಿದ್ದ.
ಎರಡು ಒಂಟಿತನಗಳ ನಡುವೆ ಒಂದಷ್ಟು ದಿನ ಮಾತ್ರ ನನ್ನ ಜತೆಗಿದ್ದ.

~

ಶಾಪ ಕೊಟ್ಟವರು ಯಾರೋ?
ನಾನು ಶಕುಂತಲೆಯಾದೆ.
ಒಡಲಲ್ಲಿನ ಭರತನನ್ನ ಉಳಿಸಿಕೊಳ್ಳಲಾಗಲಿಲ್ಲ.
ಮತ್ತೆ ಅವನ ಕೂಡುವ ಕನಸು ನನಸಾಗಲಿಲ್ಲ.





## ನಾನೂ ಗಿರ ಗಿರ ಗಿರ ಗಿರ...

ನಡೆಯುತ್ತ ನಡೆಯುತ್ತ ಹಾಗೇ ಅಂಗಾತ ಬಿದ್ದ ರೋಡು ಸುರುಳಿ ಸುತ್ತಿ, ಆಸುಪಾಸಿನ ಅಂಗಡಿಗಳೆಲ್ಲ ಅಡ್ಡಬಿದ್ದು, ಹೆಜ್ಜೆಹೆಜ್ಜೆಗೂ ಹಾದಿ ಮುಗಿದು, ಊರಿಗೂರೇ ಉಂಡೆಯಾಗಿ, ಭೂಮಿ ಬುಗರಿಯಂತೆ ರೊಯ್ಯನೆ ತಿರುಗಿ, ಅದರೊಳಗೆ ನಾನೂ ಗಿರ ಗಿರ ಗಿರ ಗಿರ...

ಹಾಗೇ ನಿಂತಿರುವೆ ಡಿವೈಡರಿನ ಮೇಲೆ. ಬಸ್ಸು ಕಾರುಗಳು ಸಾಲುಸಾಲು ಹೊಗೆಯುಗುಳುತ್ತ ಹೋಗುತ್ತಿವೆ. ನನ್ನೊಳಗೆ ಧಗಧಗ ಬೆಂಕಿ! ಅಸಹನೆಯ ಕುದಿ ಉಕ್ಕುತ್ತಿದೆ ಹಾಗೇ....
ದಿನಾ ಹೀಗೇ. . . ಆಫೀಸಿಗೆ ಹೋಗುವಾಗೆಲ್ಲ ಪುಟ್ಟ ಮಕ್ಕಳ ಹಾಗೆ ಅವನ ಎಡತೊಡೆಯೇರಿ ಕುಂತು, "ಇವತ್ತು ಹೋಗಲ್ಲ, ಯಾವತ್ತೂ ಹೋಗಲ್ಲ!" ಅಂತ ಮುದ್ದುಗರೆಯಬೇಕನಿಸುತ್ತೆ. ಆದರೇನು? ನೂರೆಂಟು ಅನಿವಾರ್ಯತೆಗಳ ವಾಸ್ತವ ಛಟೀರನೆ ಕೆನ್ನೆಗೆ ಬಿಗಿದು ಎಚ್ಚರಿಸುತ್ತೆ. ಮತ್ತೆ ಅಳುಮೋರೆ ಹಾಕ್ಕೊಂಡು ಬ್ಯಾಗೇರಿಸಿ, ಜುಟ್ಟು ಕುಣಿಸುತ್ತ ಹೊರಡುತ್ತೇನೆ.



~

ಕಾಲೇಜಿನ ದಿನಗಳು!

ನನ್ನ ಪಾಲಿಗೆ ಅಂತಹದೇನೂ ಖಾಸ್ ಆಗಿರಲಿಲ್ಲ ಅವು. ಏನೇನೋ ತೋಚಿದ್ದು ಗೀಚುತ್ತ ನನ್ನ ಪಾಡಿಗೆ ಇದ್ದುಬಿಡುತ್ತಿದ್ದ ನನಗೆ ವಿಪರೀತ ಯಾವ ಮಹತ್ವಾಕಾಂಕ್ಷೆಯೂ ಇರಲಿಲ್ಲ. ಈಗ ನೆನಪಾಗುತ್ತೆ. ನೆನಪಾಗಿ ನಗು ಬರುತ್ತೆ! ಅದರೊಟ್ಟಿಗೆ ಮುಖ ಹಿಂಡಿ ಎರಡು ಹನಿ ಕಣ್ಣೀರೂ..

ಸೆಕೆಂಡ್ ಪೀಯು ಮುಗಿಯುತ್ತ ಬಂದಿತ್ತು. ಅಗ ಆಟೋಗ್ರಾಫ್‌ಗಳದ್ದೇ ಕಾರುಬಾರು. ಅವುಗಳಲ್ಲಿ ನನ್ನ ಇಷ್ಟದ ಬಣ್ಣ..., ಇಷ್ಟದ ತಿಂಡಿ...., ಇತ್ಯಾದಿ 'ಫಿಲ್ ಇನ್ ದ ಬ್ಲ್ಯಾಂಕ್'ಗಳು. ಅವುಗಳಲ್ಲಿ ಕಟ್ಟ ಕಡೆಯದು, 'ನನ್ನ ಜೀವನದ ಗುರಿ.....'

ನಾನು ನನ್ನ ಜಿಗಮಿಣಗಿ ಪೆನ್ನಲ್ಲಿ ಶ್ರದ್ಧೆಯಿಂದ ತುಂಬಿದ್ದೆ. "ಒಳ್ಳೆಯ ಮಗಳು, ಹೆಂಡತಿ, ತಾಯಿ ಮತ್ತು ಗೃಹಿಣಿಯಾಗೋದು!" ಕಾಲೇಜುಮೇಟುಗಳೆಲ್ಲ ಛೇಡಿಸಿ ಛೇಡಿಸಿ ನಕ್ಕಿದ್ದರು. 'ಅರ್ಜೆಂಟಲ್ಲಿದಾಳಪ್ಪೋ!' ಅಂದು ಕಿಚಾಯಿಸಿದ್ದರು.

ನಿಜ. ಹಾಗೆಲ್ಲ ಸುಮ್ಮಸುಮ್ಮನೆ ಹೆಣ್ಣಾಗಿ ಇದ್ದುಬಿಡೋದು ಸುಲಭವಲ್ಲ ಅಂತ ಆಗ ನಂಗೆ ಖಂಡಿತ ಗೊತ್ತಿರಲಿಲ್ಲ.

~

ಈಗ ಮತ್ತೆ ಡಿವೈಡರಿನ ಮೇಲೆ.
ಆಚೀಚೆ ಒನ್ ವೇ ರಸ್ತೆಗಳು. ಹೋದ ದಾರಿಯಲ್ಲೇ ಮರಳಿದರೆ ಸಾಕಷ್ಟು ದಂಡ ಕಟ್ಟಬೇಕು, ನಷ್ಟ ಭರಿಸಬೇಕು!
ಅಗೋ, ಆ ಒಂಟಿ ಕಣ್ಣಿನ ಕಾರು ಹಾದು ಹೋದಮೇಲೆ ರಸ್ತೆ ಹಾಯಬೇಕು. 'ಆಟೋ' ಕೂಗಬೇಕು.
ಮನೆಗೆ ಹೋಗಿ ಅಡುಗೆ ಮಾಡಬೇಕೆಂದೇನೂ ಇಲ್ಲ.
ಹೇಗೂ ಒಬ್ಬಳೇ.... ಊಟ ಬೇಜಾರು.



## ಕಳಸಗನ್ನಡಿ ಹಿಡಿದು ನಿಂತವಳು

ನಂಗೆ ಮೊದ್ಲಿಂದ್ಲೂ ಹಾಗೇ. ಉದ್ದುದ್ದ ಜಡೆಯ ಹುಡುಗೀರಂದ್ರೆ ಎಂಥದೋ ಆಕರ್ಷಣೆ. ಅವಳಿಗೂ ಹಾಗೇ ಸೊಂಪು ಕೂದಲಿತ್ತು. ಕಣ್ಣೋ, ಕಾಡಿಗೆ ಕಪ್ಪು. ಮುಖದಲ್ಲಿ, ಭಾವ ಭಂಗಿಯಲ್ಲಿ, ಕಡುಮಲೆನಾಡು.

~

ನನಗಿಂತ ಐದಾರು ವರ್ಷ ಚಿಕ್ಕವಳಿರಬಹುದು. ನಾ ಹೈಸ್ಕೂಲು ಮುಗಿಸೋ ಹೊತ್ತಿಗೆ ಅವಳಿನ್ನೂ ಎರಡನೇ ಕ್ಲಾಸು. ಚೆನ್ನೇಮಣೆ ಆಡೋಣ ಬಾ ಅಂತ ಜೀವ ಹಿಂಡಿ, ನನ್ನ ಸೋಲಿಸಿ, ಊರ ತುಂಬ ಹೇಳ್ಕೊಂಡ್ ಬಂದು ಮಾನ ತೆಗೀತಿದ್ದಳು ಅವಳು. ಗಿಚ್ಚಿ ಕವಡೆ ಆಡುವಾಗಲಂತೂ ಮೈಕೈ ಪರಚಿ ನನ್ನ ಕೆಂಪುಕೆಂಪಾಗಿಸಿಬಿಡ್ತಿದ್ಲು. ಬಜಾರಿ! ಮಂಗನ ಹಾಗೆ ಅವಳು ಸರಸರನೆ ಮರ ಹತ್ತಿ ಪೇರಳೆ ಕೀಳುವಾಗಲಂತೂ ನಂಗೆ ನಾಚ್ಕೆಯಾಗಿ ಅಳುವೇ ಬಂದುಬಿಡ್ತಿತ್ತು!

~

ನನ್ನ ಇಂಜಿನಿಯರಿಂಗು ಮುಗಿದು ಕೆಲಸ ಹುಡುಕಲಿಕ್ಕೆ ಶುರು ಮಾಡಿದ್ದೆ. ಅವಳಾಗ ಪಿಯುಸಿ. ಓದುವ ಗದ್ದಲದಲ್ಲಿ ನಾನು ಅಜ್ಜಿ ಮನೆಗೆ ಹೋಗದೆ ಐದಾರು ವರ್ಷಗಳಾಗಿಹೋಗಿತ್ತು.

"ಎಳ್ಳಾಮಾಸೆಗಾದ್ರೂ ಬಂದ್ ಹೋಗೋ ಮಾಣಿ... ನಂದಿನ್ ಎಷ್ಟ್ ದಿನ ಉಳ್ದದ್ಯೋ ಎಂಥದೋ..?" ಅಜ್ಜಿ ಬ್ಲ್ಯಾಕ್‌ಮೇಲ್ ಮಾಡಿದಾಗ ಗೊಣಗುತ್ತಲೇ ಹೊರಟೆ.
ಬೆಳ್ಳಂಬೆಳಗ್ಗೆ ಬಸ್ಸಿಂದ ಜಿಗಿದಾಗ, ಉಣಗೋಲಿನ ಹಿಂದೆ ಅವಳು!

ಯಾವತ್ತಿನ ಹಾಗೆ ಮೂವತ್ತೆರಡೂ ಹಲ್ಲು ಬಿಟ್ಟು ಕಿಸಿಯದೆ ಹೋಗಿದ್ದಿದ್ದರೆ ನಂಗೆ ಗೊತ್ತೇ ಆಗ್ತಿರಲಿಲ್ಲ. ಅಡಿಕೆ ಮರದ ಹಾಗೆ ಬೆಳೆದು ನಿಂತಿದ್ದಳು ಹುಡುಗಿ. ಚಂದ ಚಂದ ಚಂದವಂದ್ರೆ, ಅಷ್ಟು ಚಂದ! ಅವಳ ಕರಿ ಹಾವಿನ ಜಡೆ ಭುಸುಗುಡುತ್ತ ತೊನೆಯುತ್ತಿತ್ತು.

~

ಈಗ ಅವಳ ಪಗಡೆ ಒಂದು ಮೋಜು.  ಅವಳಿಗೆ ಸೋಲುವುದೇ ಒಂದು ರಸ ಘಳಿಗೆ.
ಗಿಚ್ಚಿಯಲ್ಲಿ ಸೋತು ಕೈಕಾಯಿಸ್ಕೊಳ್ಳೋದು, ಅವಳ ಸ್ಪರ್ಷಕ್ಕೆ ಮುಳ್ಳಾಗೋದು. . .
ಅವಳದು ಮಾತ್ರ ಎಂದಿನ ಸಲುಗೆ. ನಡುವಿನ ಐದು ವರ್ಷಗಳ ಅಂತರ ಲೆಕ್ಕಕ್ಕೇ ಇಲ್ಲ.
ನಾನು ಮಾತ್ರ ಯಾಕೆ ಬದಲಾದೆ?
ಅವಳಿಗೆ ಸ್ಕೂಟರ್ ಕಲಿಯುವ ಆಸೆ. ನಾನಂತೂ ಕಾಯ್ತಲೇ ಇದ್ದೆ, ಅವಳದೊಂದು ಡಿಮ್ಯಾಂಡಿಗಾಗಿ.  ಆದರೂ ಯಾಕೋ ಹಿಂಜರಿಕೆ. ಯಾಕೆ?

~

ನದಿಯ ದಡದಲ್ಲಿ ಕುಂತು ಸುಮ್ಮನೆ ಹಾಡು ಕಟ್ಟಿದೆ. ಏನೇನೋ ಕಥೆ ಹೊಸೆದೆ. ಅವಳು ತಲೆದೂಗಿದಳು. ಕಾರ್ಗಣ್ಣಲ್ಲಿ ನಗೆಮಿಂಚು! ನನ್ನ ಮೈಯ್ಯಲ್ಲಿ ನಡುಕ.
ಕೇಳಿಯೇಬಿಟ್ಟಳು. "ಕಳ್ಳಾ, ನೀನು ಯಾರನ್ನೋ ಲವ್ ಮಾಡ್ತಿದೀ ಅಲ್ಲಾ!?"
ನಾ ಬೆವರುಗಟ್ಟಿ ಹೋದೆ. ನಾಲಿಗೆ ಬಿದ್ದೇ ಹೋಗಿತ್ತು. ಅವಳಂತೂ ಪೀಡಿಸಿಪೀಡಿಸಿ ಸುಸ್ತಾದಳು. "ನಾ ತುಂಬಾ ಕ್ಲೋಸು ಅಂದ್ಕೊಂಡಿದ್ದೆ. ನಿಂದೆಲ್ಲ ಬರೀ ಮೋಸ..." ಅಂದು ಮುಖ ಊದಿಸ್ಕೊಂಡಳು.
ಊಹೂಂ... ನನ್ನ ಕೊರಳಿನ ನರ ಕತ್ತರಿಸಿಹೋಗಿತ್ತು.



ಮುನಿದು ಮುಖ ತಿರುವಿದಳು. ಜಗಮೊಂಡಿ! ನಾನು ಊರಿಗೆ ಹೊರಟು ನಿಂತಾಗಲೂ ಬಾಗಿಲಿಗೆ ಬರಲಿಲ್ಲ. ಕಣ್ಣ ತುಂಬ ಅವಳನ್ನೇ ಹೊತ್ತು ಹೊರಟೆ. 'ಮತ್ಯಾವತ್ತೂ ಬರೋದಿಲ್ಲ' ಅಂದುಕೊಂಡೆ.

~

ಸುಲಗ್ನಾ ಸಾವಧಾನ.. ಸುಮುಹೂರ್ತಾ ಸಾವಧಾನ..
ಹಸೆ ಮೇಲೆ ಪೇಟ ತೊಟ್ಟ ನಾನು. ಎದುರಲ್ಲಿ ಇವಳು, ತಲೆ ತಗ್ಗಿಸಿ ಕುಂತಿದ್ದಾಳೆ. ಪಕ್ಕದಲ್ಲಿ... ಮುಖ ಊದಿಸಿಕೊಂಡೇ ಇರುವ ಅವಳು! ನನ್ನ ಪ್ರೀತಿಯ ಹುಡುಗಿಯ ಹೆಸರು ಹೇಳಿಲ್ಲವೆಂಬ ಕೋಪ ವರ್ಷ ಕಳೆದರೂ ಹೋಗಿಲ್ಲ ಅವಳಿಗೆ, ತೀರಾ ನನ್ನ ಮದುವೆ ಹೊತ್ತಿಗೂ..

ಮಗುವಂಥ ಹುಡುಗಿ! ನಗು ಚೆಲ್ಲಿಬಿಡುತ್ತೇನೋ ಅಂತ ತುಟಿಕಚ್ಚಿ ಕುಂತಿದ್ದಾಳೆ, ಕಳಸಗನ್ನಡಿ ಹಿಡಿದಿದ್ದಾಳೆ. ಚಿಕ್ಕಪ್ಪನ ಮಗಳು. ವರಸೆಯಲ್ಲಿ ಅವಳನ್ನ, ನನ್ನ 'ತಂಗಿ' ಅನ್ನುತ್ತಾರೆ..



---

# ಹೆಣ್ಣು ಜನ್ಮ!

"ಕಳೆದಾರೂ ಜಲ್ಮದಲ್ಲಿ ಪಾಪ ಮಾಡಿದ್ದಕ್ಕೇ ಈ ಜಲ್ಮದಲ್ಲಿ ಸಾಲು ಸಾಲು ಹೆಣ್ಣು ಹೆರ್ತಿರೋದು!" ಹಾಗಂತ ತಕರಾರು ತೆಗೀತಾ ಗೂರಲು ಮುದುಕ ಕೆಮ್ಮಿ ಕ್ಯಾಕರಿಸಿ ಕಫ ಉಗೀಲಿಕ್ಕೆ ಬೌಲು ತಡಕಹತ್ತಿದ. ಮೂಕಿ ಮೊಮ್ಮಗಳು ಅದನ್ನ ಹುಡುಕಿ ತಂದು ಅವನ ಮೂತಿಗೆ ಹಿಡಿದಳು. ಹಿತ್ತಿಲ ಕತ್ತಲಲ್ಲಿ ಸೂಲಗಿತ್ತಿ, ನಾಲ್ಕನೇ ಹೆಣ್ಣು ಹೆತ್ತು ಎಚ್ಚರ ತಪ್ಪಿದ್ದ ಮಹಾತಾಯಿಗೆ ಉಪಚಾರ ಮಾಡ್ತ ಕುಂತಿದ್ದಳು.

ಅಪ್ಪ ಅನಿಸ್ಕೊಂಡವ ನಾಲ್ಕು ವರ್ಷದ ಹಿಂದೆ ಜಾತ್ರೇಲಿ 'ಡಾಗ್ ಶೋ'ದ ಮಿಣಕು ಅಂಗಿಯ ಚಿನಾಲಿ ಹಿಂದೆ ಹೋದವ, ಕಳೆದ ವರ್ಷ ಮತ್ತೆ ವಕ್ಕರಿಸಿ, ಬೀಜ ಬಿತ್ತಿ, ಫೇರಿ ಕಿತ್ತಿದ್ದ.

"ಅಬ್ಬಾ ಗಂಡು ಜಾತಿಯೇ!" ನಿಟ್ಟುಸಿರಿಟ್ಟೂ ಇಟ್ಟೂ ಉಬ್ಬಸವಾಗಿ ಹೋಗಿತ್ತವಳಿಗೆ.
ಒಡೇರ ಪೇಟೆ ಮನೇಲಿ ಕಸ ಮುಸುರೆಗೇಂತ ಹೋಗಿ ಅಲ್ಲೇ ಝೂಂಡಾ ಊರಿದ್ದ ಹದಿನಾರರ ಹಿರಿ ಮಗಳು– ಒಡತೀನೇ 'ಹೋಗಿ ಬಾ' ಅಂದ್ರೂ ಹೊರಟಿರಲಿಲ್ಲ. ಓರಗೆ–ಯ 'ಅಕ್ಕಾವ್ರು' ತಿಂದುಳಿದ ಪಾನಿ ಪೂರಿ– ಗೋಬಿ ಮಂಚೂರಿಗಳ ರುಚಿಗೆ, ತಿದ್ದಿ ತೀಡಿ ಬಿಸಾಡಿದ ಲಿಪ್‌ಸ್ಟಿಕ್‌ಗಳ ರಂಗಿಗೆ, ಮನೆಗೆ ಬಂದು ಹೋಗುವ ಕುಡಿಮೀಸೆ ಹುಡುಗರ ತುದಿಗಣ್ಣ ಇಶಾರೆಗೆ ಚಿತ್ತಾಗಿಹೋಗಿದ್ದಳು.

ಎರಡನೆಯದ್ದೋ– ದೇವರೂ ದೇವರೂಂತ ಉಳ್ಳು ಸೇವೆ ಮಾಡಿದ್ದಕ್ಕೆ ಸವಾಲಾಗಿ ಹುಟ್ಟಿತ್ತು. ಗುಡಿಯಲ್ಲಿನ ದೇವರ ಹಾಗೇ, ಮೂಕವಾಗಿ, ಕಿವುಡಾಗಿ!

ಮೂರನೆ ಮಗಳು ಗೊಂಬೆ ಗೊಂಬೆ. ಕೈ ತೊಳೆದು ಮುಟ್ಟುವಂಥ ರೂಪ. ಬೆಳ್ಳಂಬಿಳಿ ಬಣ್ಣ. ಗೂರಲು ಮುದುಕ, "ಯಾರ ತುಂಡೋ!?" ಅಂತ ಆಗಾಗ ಗೇಲಿ ಮಾಡುವುದಿತ್ತು. ಅದರ ಬಸಿರಿಗೆ ಮುಂಚೆ, ಆಮೇಲೊಂದಷ್ಟು ದಿನ ಆ ಮನೆ ಮೂರು ಹೊತ್ತು ಹೊಟ್ಟೆಗೆ ಕಂಡಿದ್ದು ಸುಳ್ಳಲ್ಲ.

ಇದೀಗ ನಾಲ್ಕನೆ ಮಗಳು... ಮತ್ತೂ ಹೆಣ್ಣು. ಎಚ್ಚರವಾಯ್ತು ಅವಳಿಗೆ.
"ಮತ್ತೆ ಹೆಣ್ಣು?" ಎದ್ದವಳೇ ಸೂಲಗಿತ್ತಿ ಹಾಂಗೆ ತಿರುಗೋದ್ರೊಳಗೇ ಇಟ್ಟಿದ್ದ ಕುದಿನೀರು ಎಳೆಗೂಸಿನ ಮೇಲೆ ಹೊಯ್ದುಬಿಟ್ಟಳು. ಮುದುಕ, 'ಪೀಡೆ ಕಳೀತು' ಅಂದು ಮಗ್ಗುಲಾದ. ಹಸೀ ಬಾಣಂತಿ ಸನ್ನಿ ಹಿಡಿಸ್ಕೊಂಡು ಕೂದಲು ಬಿರಿಹೊಯ್ಕೊಂಡು ರಂಪಾಟಕ್ಕೆ ಶುರುವಿಟ್ಟಳು. ಭಯ ಬಿದ್ದ ಸೂಲಗಿತ್ತಿ ಬಿಳೀ ಪೋರಿಯನ್ನ ಕರಕೊಂಡು ಹೊರಗೋಡಿದಳು. ಮೂಕಿ ಮಗಳು ಅಮ್ಮನ ಕೈಯ್ಯ ಮಚ್ಚಿನಿಂದ ತಪ್ಪಿಸ್ಕೊಳ್ಳಲಾಗದೆ ತೊಣಚಾಡಿದಳು. ಮುದುಕ ಬಿದ್ದುಕೊಂಡಲ್ಲೇ ತೆವಳಹತ್ತಿದ...

ಐದೇ ನಿಮಿಷ! ರಕ್ತ ಮೆತ್ತಿದ ಕತ್ತಿ ಠಣಾರನೆ ನೆಲಕ್ಕೆ ಬಿತ್ತು. ಮಗು ಹೆತ್ತ ಮನೆ, ಸೂತಕವಾಗಿಹೋಯ್ತು... ಸನ್ನಿ ಬಾಣಂತಿ ರಕ್ತ ಮೊಗೆಮೊಗೆದು ಕುಡಿದಳು. ಕುಣಿದಳು. ಬೀದಿಗೋಡಿದಳು. ಕಂಡ ಕಂಡ ಹೆಣ್ಣುಮಕ್ಕಳ ಕುತ್ತಿಗೆ ಹಿಡಿದು 'ಸಾಯಿ... ಸಾಯಿ...' ಕಿರುಚಿದಳು.

ಊರ ಜನ ನಿಂತು ನೋಡಿದರು. ಕುಂತು ನೋಡಿದರು. ಕೂಗಾಡಿದರು.
ಕೊನೆಗೊಂದು ದಿನ ಕಲ್ಲು ಹೊಡೆದೇ ಕೊಂದರು.

ಪಿಂಡ ಕಟ್ಟಿ ಹೋಗಿದ್ದ ಗಂಡ, ಅಂತೂ ಚಟ್ಟ ಕಟ್ಟಲು ಬಂದ.
ಸತ್ತವಳ ಕಿವಿಯಲ್ಲಿ ಕೆಂಪುಕಲ್ಲಿನ ಓಲೆ ಇನ್ನೂ ಜೀವಂತವಿರೋದು ಅವಂಗೆ ನೆನಪಿತ್ತು!



# ಚುಕ್ಕಿ ಚಿತ್ತಾರವಾಗೋದು ಹೀಗೆ...

ಅಂಗಳದಲ್ಲಿ, ಬಣ್ಣ ಬಣ್ಣದ ರಂಗವಲ್ಲಿ. ಅದರ ಒಂದೊಂದು ಚುಕ್ಕೆಯೂ ಅವಳ ಅಕ್ಕರೆಯ, ಶ್ರದ್ಧೆಯ ಬಿಂಬ.

ಅವಳೂ ಹಾಗೇ. ಹೋದಲ್ಲೆಲ್ಲ ಶೋಭೆಯಾಗಿ ನಿಲ್ಲುವ ಚಿತ್ತಾರ. ಯಾವ ಅಮಂಗಳಕ್ಕೂ ಅವಳನ್ನ ಮೀರಿ ನಡೆಯುವ ಧಮ್ಮಿಲ್ಲ. ನಾಲ್ಕು ದಶಕದ ಬಾಳಿನಲ್ಲಿ ಸಾಕಷ್ಟು ನೋವುಗಳ ನುಂಗಿ ನೊಣೆದಿದ್ದಾಳವಳು.



ನೂರುಗಟ್ಟಲೆ ಚುಕ್ಕಿಯಿಟ್ಟು ರಂಗೋಲಿ ಹೆಣೆಯುವವಳ ಹಣೆಯಲ್ಲಿ ಚುಕ್ಕಿ ನಗುವ ಭಾಗ್ಯವಿಲ್ಲ. ಅದನ್ನಾಗಲೇ ಕಳಕೊಂಡು ಎಷ್ಟೂ ವರ್ಷವಾಯಿತೋ, ಅವಳು ಲೆಕ್ಕವಿಟ್ಟಿಲ್ಲ. ಹಾಗಂತ ಅವಳದ್ದೇನೂ ಸಂನ್ಯಾಸಿನಿಯ ಬದುಕಲ್ಲ...


ಮನೆ ಹತ್ತಿರವೇ ಇರುವ ಟಾಕೀಸಿಗೆ ಥೇಂಜು ಥೇಂಜು ಪಿಚ್ಚರಿಗೂ ನೆರೆಯ ಪೋರಿಯರ ಕಟ್ಟಿಕೊಂಡು ಹೋಗಿ ನೋಡಿಬರುತ್ತಾಳೆ. ಕಿಲೋಮೀಟರುಗಟ್ಟಲೆ ನಡೆದು ತನಗಿಷ್ಟವಾಗುವ ಅದೊಂದು ಅಂಗಡಿಯಲ್ಲಿ ಪಾನಿಪೂರಿ ಮುಕ್ಕುತ್ತಾಳೆ. ಬೋಂಡ– ಭಜಿ ಸಮೇತ ನದೀ ತೀರದಲ್ಲಿ ಕುಂತು ಸಂಜೆ ಕಳೆಯುತ್ತಾಳೆ.

ಮದುವೆಯಾದ ಎರಡು ವರ್ಷಕ್ಕೇ ಅಂವ ಕಣ್ ಮುಚ್ಚಿದಾಗ ಜೀವಮಾನವಿಡೀ ಅಳಬಹುದಾದ್ದನ್ನ ವಾರದಲ್ಲಿ ಅತ್ತು ಮುಗಿಸಿದ್ದಳು ಅವಳು. ಎಲ್ಲರೂ 'ಇನ್ನಿವಳೂ ಕೈ ಬಿಟ್ಟ ಹಾಗೇ' ಅಂತ ತೀರ್ಮಾನಿಸಿಯಾಗಿತ್ತು. ಅದುಹೇಗೆ ಗಟ್ಟಿ ಮನಸು ಮಾಡ್ಕೊಂಡಳೋ, ಇದ್ದಕ್ಕಿದ್ದಹಾಗೇ ಒಂದಿನ ಗಂಡ ಬಿಟ್ಟುಹೋದ ಅಂಗಡಿ ತೆರೆದು ಕುಂತಳು. ಚಿಂದಿ ಆಯ್ತಿದ್ದ ಹೆಣ್ಣುಮಕ್ಕಳನ್ನ ಕರೆದು ಕೆಲಸಕ್ಕಿಟ್ಟುಕೊಂಡಳು. ಒಬ್ಬಳು ದುಡ್ಡು ಕದ್ದು ಓಡಿಹೋದಾಗ ಹುಡುಕಿ ಕರೆತಂದು ದುಪ್ಪಟ್ಟು ಅಕ್ಕರೆಯಿಂದ ಕೆಲಸಕ್ಕೆ ಹಚ್ಚಿ ಸರಿದಾರಿಗೆ ತಂದಳು.

ಇವೆಲ್ಲ ಆಗಿ ವರ್ಷಗಳೇ ಕಳೆದಿವೆ. ಕಾಲ, ಜತೆಯಲ್ಲಿ ಅತ್ತೆಯನ್ನೂ ಕೊಂಡೊಯ್ದಿದ್ದಾನೆ. ಮಾವನಿಗೆ ತಾನೇ ಊರುಗೋಲು.

ಕುಡುಕ ಮೈದುನನ್ನ ಬೀದೀಲಿ ನಿಂತು ಪೊರಕೆ ಕುಟ್ಟಿ ಜಡಿಸಿದ್ದಾಳೆ. ನಾದಿನಿಗಂತೂ ಅವಳೇ ಅಮ್ಮ– ಆಸರೆ. ಕಾಲೇಜಿನ ಆ ಹುಡುಗಿಯನ್ನ ಮೈಯೆಲ್ಲ ಕಣ್ಣಾಗಿ ಕಾಯುತ್ತಾಳೆ. ಮಾಳಿಗೆಯಲ್ಲಿ ಕುಂತು ಅವಳಿಗೆ ಮದುವೆ ಮಾಡಿಸುವ, ಮೈದುನ ಸಂಪನ್ನನಾಗಿ ಮನೆಗೆ ಮರಳುವ, ತಾನು ಕಾಶಿ– ರಾಮೇಶ್ವರ ಸುತ್ತಿ ಬರುವ ಕನಸುಗಳನ್ನ ನೇಯುತ್ತಾಳೆ.

ಯಾವ ಸಡಗರವೂ ಇಲ್ಲದ ಆ ಮನೆ ಮುಂದೆಯೂ ರಂಗೋಲಿ ಇಡುತ್ತಾಳೆ.
ಬಣ್ಣ ತುಂಬುತ್ತ ತುಂಬುತ್ತ, ಖುದ್ದು ಚಿತ್ತಾರವಾಗಿ ನಿಲ್ಲುತ್ತಾಳೆ...



# ಅವಳ ಹೆಸರಲ್ಲೀಗ ಕನಸುಗಳಿಲ್ಲ!

ಗೇರು ಗುಡ್ಡದ ನಡುವಿನ ಅದೊಂದು ಪುಟ್ಟ ಮನೆ. ಮಳೆಗೆ ನೆಂದ ಹೆಂಚಿನ ಪರಿಮಳದ ನೆಚ್ಚಿನಲ್ಲಿ ಬೆಚ್ಚಗೆ ಕಂಬಳಿ ಎಳೆದೆಳೆದು ಮುಲುಗುತ್ತ ಮಲಗಿರುವ ಹದಿನೆಂಟರ ಹೆಣ್ಣು.

ಹದಿನೆಂಟಂದ ಮೇಲೆ, ಕನಸುಗಳೂ ನೂರೆಂಟು. ಆಚೀಚೆ ಬಿಡಾರಗಳ ಹೆಂಗಸರು ಕಾಕು ಹೊಡೆಯುತ್ತ ಕರೆಯೋದು ಕೇಳಿಸಿದರೂ ಮನದಲ್ಲಿ ಮೂಡುತ್ತಲೇ ಇರುವ ಬೈಕೇರಿ ಬರುವ

ರಾಜಕುಮಾರನಿಗೆ ತಡೆಯೆಂಬುದಿಲ್ಲ. ಎಂಟೊಂಭತ್ತು ಗಂಟೆಗೆಲ್ಲ 'ಒಡೇರ' ಮನೆಗೆ ಅಡಿಕೆ ಆರಿಸಲು ಹೋಗಬೇಕಿತ್ತು ಅವಳು.

ಒಡೇರ ಮನೆ ಅಂದಮೇಲೆ ಬರುವವರು– ಹೋಗುವವರು ಹತ್ತಾರು ಜನ. ಇವಳೋ, ಕಡೆದಿಟ್ಟ ದೇಹದ ಕಪ್ಪು ಸುಂದರಿ! ಹಾಗೆ ಬಂದ ಹತ್ತಾರು ಜನರಲ್ಲೊಬ್ಬ ಇವಳನ್ನು ಕಂಡ. ಇರುಳಿಡೀ ಕನಸಿ, ಕನವರಿಸಿದ. ಅವಳೂ ಅವನ ಪ್ರೀತಿಗೆ ಸೋತಳು. ಕನಸಿನ ರಾಜಕುಮಾರ ಕಣ್ಣೆದುರು ನಿಂತಿದ್ದ!

ಅವನಪ್ಪ– ಸಮಾಜವಾದಿ. ಖುಶಿಯಿಂದಲೇ ಒಪ್ಪಿಕೊಂಡ. ಅಮ್ಮ, ಅಪ್ಪನ ನೆರಳು. 'ಹೂಂ' ಅಂದಳು.

ಆದರೂ ಮದುವೆ ನಡೆಯದೇ ಹೋಯಿತು!

ಖುದ್ದು ಹುಡುಗಿಯೇ ಮದುವೆಗೆ ಒಪ್ಪಿರಲಿಲ್ಲ!!

~

ಊಹೂಂ... ಯಾವ ಸಿನೆಮಾ ಥರ ಚಿಕ್ಕೊಡೆಯ ಅವಳ ಮೇಲೆ ಕಣ್ಣು– ಕೈ ಹಾಕಿರಲಿಲ್ಲ. ಅದು ಬಿಟ್ಟು ಬೇರೆ ಯಾವ ಬಗೆಯ ಗುಸುಪಿಸುಗಳೂ ಇರಲಿಲ್ಲ. ಇದ್ದದ್ದೆಲ್ಲಾ ಅವಳಪ್ಪ ಮಾಡಿಟ್ಟಿದ್ದ ಸಾವಿರಗಟ್ಟಲೆ ಸಾಲ.

ಮನೆಯ ಜೀತದ ನಾಯಿ ಗೆಳೆಯನ ಕಾರನ್ನೇರುವುದು ಒಡೆಯನಿಗೆ ಬೇಕಿರಲಿಲ್ಲ. ಸಾಲವನ್ನ ಮುಂದೆ ಮಾಡಿದ ಅಂವ, ಮೆಚ್ಚಿದ ಹುಡುಗನ ಹತ್ತಿರ ಕೇಳಿದರೆ ತನ್ನ ಮಾನ ಹಾಳಾಗುತ್ತದೆಂದ.

ಅವಳಪ್ಪ– ಅಮ್ಮನಿಗೋ, ಒಡೇರು ಸಾಕ್ಷಾತ್ ದೇವರು! ಅವಳು... ಆ ದೇವರಿಗೆ ನರ ಬಲಿ!!

~

ಮತ್ತೀಗ, ಅದೇ ಗೇರುಗುಡ್ಡದ ಮನೆ. ಅದೇ ಕಸ ಮುಸುರೆಯ ಬದುಕು.
ಮತ್ತದೇ ಮಳೆಯೇನೋ ಒಂದೇ ಸಮ ಹೊಯ್ಯುತ್ತಿದೆ, ಆದರೀಗ ಅವಳ ಮನಸು ಜಡ್ಡುಗಟ್ಟಿಹೋಗಿದೆ.

ಮೊದಲಿನ ಹಾಗವಳ ಮೈ, ಮಳೆಗೆ ರಝುಮ್ಮೆನ್ನುವುದಿಲ್ಲ. ಬೆಳಗ್ಗೆ ಏಳಲು ತಡವಾಗುವುದಿಲ್ಲ.

ಅವಳ ಕಣ್ಣುಗಳಲ್ಲೀಗ ಕನಸುಗಳೇ ಇಲ್ಲ.....





# ಅಹಂಕಾರಗಳ ಎದುರು ಒಂದು ಗೆಲುವು...

ಅದು ಅವನಿಗೆ ತೀರ ಸುಲಭವಾಗಿತ್ತು.
ಹಾಗೆ 'ಬೇಡ' ಅಂದು ಮುಖ ತಿರುವಿಬಿಡುವುದು ಗಂಡಸರಿಗೆ ತೀರ ಸುಲಭ!
ಕನ್ನಡಿಯೆದುರು ನಿಂತು ಮುಂಗುರುಳು ತೀಡಿಕೊಳ್ಳುವಾಗ ಒಳಗೆಲ್ಲ 'ಝುಮ್'ಗುಡುತ್ತಿತ್ತು. ಇಡಿಯ ಮೈಯಲ್ಲಿ ಏನಿದೆ ಕೊರತೆ? ನೋಡಿಕೊಂಡಳು. "ಜಗವೆಲ್ಲ ನನ್ನ ಹಿಂದೆ, ನಾನು ಅವನ ಹಿಂದೆ!" ಹಾಗಂತ ಹಾಡಿದೆಯಾ? ಮಾಡು ನೋಡಿ ನಕ್ಕಳು. ಖುಶಿ ಜಾಸ್ತಿಯಾದಾಗ ಅಳು ಬರುತ್ತೆ, ಗೊತ್ತು. ದುಃಖ ಜಾಸ್ತಿಯಾದಾಗ ನಗು ಬರೋದು ಗೊತ್ತಾ!?

ಅವಳಿಗೆ ಚೆನ್ನಾಗಿ ಗೊತ್ತು. ಅಂವ ಬೇಡ ಅಂದಿದ್ದಕ್ಕೆ ಕಾರಣ ತನ್ನ ರೂಪವಂತೂ ಅಲ್ಲ. ಗುಣವಲ್ಲ, ಬುದ್ಧಿವಂತಿಕೆ ಕೊರತೆಯಲ್ಲ, ಯಾವುದೂ ಅಲ್ಲ.
ಅದೇ, ತಾನು ಕಾರಣಗಳೇ ಇಲ್ಲದೆ ಅಂವನ್ನ ಬೇಡವೆಂದಿದ್ದರೆ, ಜನದ ಮಾತು ಹೇಗಿರುತ್ತಿತ್ತು?
ತುಟಿ ಕಚ್ಚಿ ನೋಯಿಸ್ಕೊಂಡಳು. ಇನ್ನ್ಯಾರನ್ನ ನೋಯಿಸಿ ಸಿಟ್ಟು ತಣಿಸಿಕೊಳ್ಳಬಹುದಿತ್ತು ಅವಳು?

ಅಂವ ವಿನಾಕಾರಣ ಅವಳನ್ನ ನಿರಾಕರಿಸಿಬಿಟ್ಟಾಗಿನಿಂದ ಅಪ್ಪ ಮಾತುಮಾತಿಗೆ ಸಿಡುಕ ತೊಡಗಿದ್ದ. ಸದಾ ಹಾಡು ಗುನುಗುತ್ತ ಓಡಾಡುತ್ತಿದ್ದ ಹುಡುಗಿ. ಅವಳನ್ನ 'ನೀ ಏನು ಸೂಳೆಗೆ ಕೆಟ್ಟುಹೋದೆಯೇನೇ?' ಅಂತ ಗದರಿಬಿಟ್ಟ. ಪ್ರಭಾವೀ ಗಂಡೊಂದು ಕೈಬಿಟ್ಟ ಉರಿ ಅವನಿಗೆ!

ಅಮ್ಮ ಅಡುಗೆ ಮನೆಯಲ್ಲಿ 'ಮಂಗಳವಾರ ಹುಟ್ಟಿದ ಅನಿಷ್ಟ' ಅಂತ ಒಗ್ಗರಣೆ ಹಾಕಿದಳು. ಅವಳು ಹಾಗೆ ಮಗಳ ಮೇಲೆ ಉರಿಹಾಯಲಿಕ್ಕೆ ಅಸಹಾಯಕತೆಯೇ ಕಾರಣವೇನೋ? ಪಾಪ. ಹುಡುಗಿಗೆ ಅದೆಲ್ಲ ಹೇಗೆ ತಿಳಿಯಬೇಕು?

ತಂಗಿ ಬೇರೆ ಸುಖಾಸುಮ್ಮನೆ ಮುಖ ಊದಿಸ್ಕೊಂಡು 'ಅಕ್ಕ ಅಶೋಕ ಪಿಲ್ಲರಿನ ಹತ್ತಿರ ಯಾವನೋ ಸಾಬಿಯ ಜತೆ ಹರಟುತ್ತ ನಿಂತಿದ್ದಳು' ಅಂತ ಪುಕಾರುಮಾಡತೊಡಗಿದ್ದಳು. ಅವಳ ಮನಸಲ್ಲಿ ಏನಿತ್ತು?

ಹಾಗಂತ, ಹುಡುಗಿ ಅಶೋಕ ಪಿಲ್ಲರಿನ ಬಳಿ ಆ ಚೆಂದದ ಹುಡುಗನೊಟ್ಟಿಗೆ ಮಾತಾಡಿದ್ದೇನೋ ಹೌದು. ಹಾಗವಳು ಪಿಲ್ಲರಿನ ಕೆಳಗೆ ನಿಂತು ಹುಡುಗನ ಪ್ರಪೋಸಲ್ಲನ್ನ ನಿರಾಕರಿಸ್ತಿದ್ದಳು. ಅಪ್ಪ– ಅಮ್ಮನಿಗೆ ಆಘಾತ ಮಾಡಲಾರೆ ಅಂತ ತನ್ನ ಬಯಕೆ ನುಂಗುತ್ತಿದ್ದಳು. ಇರುವೊಬ್ಬ ತಂಗಿಯ ಮದುವೆಗೆ ಅಡ್ಡಿಯಾದರೆ? ಬೆಚ್ಚಿದ್ದಳು. ಹುಡುಗ ಹೃದಯ ಮುರಕೊಂಡು ತಲೆ ತಗ್ಗಿಸಿ ನಡೆದುಬಿಟ್ಟಿದ್ದ.

ಯಾಕೋ ಅನುಮಾನವಾಯ್ತು. ಅಂವ ಏನಾದರೂ ತನ್ನ ಬಗ್ಗೆ ಇಲ್ಲಸಲ್ಲದ....

ಥೂ..! ತನ್ನ ಯೋಚನೆಗೆ ತಾನೇ ಉಗಿದು ಉಪ್ಪು ಹಾಕಿದಳು. ಇವಳು ಒಲ್ಲೆನೆಂದ ಮರುದಿನದಿಂದ ಅಂವ ತನ್ನಪಾಡಿಗೆ ತಾನು ಇದ್ದುಕೊಂಡಿದ್ದ. ಮತ್ತೆ... ಈ ಅವಮಾನದ ಕಾರಣ?

ಅಂವ ಯಾರನ್ನಾದರೂ ಪ್ರೀತಿಸ್ತಿರಬಹುದು. ಅಥವಾ, ಅವನಿಗೆ ಮದುವೆಯೇ ಬೇಡವಿರಬಹುದು. ಇಲ್ಲಾ, ಅದನ್ಯಾವುದನ್ನೂ ಬಾಯ್ಬಿಟ್ಟು ಹೇಳದೆ ಮುಷಂಡಿಯ ಹಾಗೆ ಮುಖತಿರುವಿದ ಅಂವ.... ನಾಮರ್ದನಿರಬಹುದು!?

ಹೀಗೆ ಅನಿಸಿದ್ದೇ, ಅವಳು ಗೆಲುವಾದಳು. ಅವತ್ತಿನ ಸಂಜೆ ಹುಡುಗಿ ತಾನುತಾನೇ ಮನೆಮಂದಿ ಮೈಮೇಲೆ ಬಿದ್ದು ಬಾಯ್ತುಂಬ ಮಾತಾಡಿದಳು. ಸುಳ್ಳುಸುಳ್ಳೆ ನಕ್ಕಳು. “ಅಮ್ಮಾ ತಲೆಗೆ ಎಣ್ಣೆ ಹಾಕೇ” ನುಲಿದಳು. ತಂಗಿಯೊಟ್ಟಿಗೆ ಪಗಡೆ ಆಡಿ ಬೇಕೆಂದೇ ಸೋತಳು.

ಮನೆ ಮಂದಿಯ ಪ್ರತಿ ಉದಾಸೀನಕ್ಕೂ ಅವನ ನಾಮರ್ದತನವನ್ನ ನೆನೆದು ನಕ್ಕು ಸಹಿಸಿಕೊಂಡಳು.
ತನ್ನ ತಲೆಪ್ರತಿಷ್ಠೆಗೆ ಅವಳನ್ನ ಬೇಡ ಅಂದವನ ಅಹಂಕಾರವನ್ನ ಹೀಗೆ ನೀವಾಳಿಸಿದಳು ಹುಡುಗಿ, ತನ್ನ ಅವಮಾನಕ್ಕೆ ಸೇಡು ತೀರಿಸ್ಕೊಂಡಳು!



---

# ಫೋನಿನ ಗುಟ್ಟು ಮತ್ತು ಎದುರು ಸಾಲಿನ ಆಂಟಿಯರು

ಇಲ್ಲೇ... ಹೀಗೆ... ಮನೆಯ ಕಿರು ಓಣಿ ದಾಟಿ ಗೇಟು ತೆಗೆದರೆ, ಮುಖ್ಯ ರಸ್ತೆ ಸೇರುವ ದಾರಿ. ಅದರ ಆಚೀಚೆ ಎರಡೂ ಬದಿಯಲ್ಲಿ ಒಂದಷ್ಟು ಮನೆಗಳು. ಅವುಗಳಿಗೊಂದು ಜಗಲಿ.

ನಾನು ಇನ್ನೇನು ಗೇಟು ದಾಟಿ ರಸ್ತೆಗೆ ಕಾಲು ಹಾಕಬೇಕು, ಫೋನು! ಅಣ್ಣ ಕಳೆದ ಹುಟ್ಟುಹಬ್ಬಕ್ಕೆ ಕೊಡಿಸಿದ ನಾಜೂಕಿನ ಕ್ಯಾಮೆರಾ ಸೆಟ್ಟು... ಅದನ್ನ ಮುದ್ದಾಗಿ ಎತ್ತಿಕೊಂಡು ಕಿವಿಗಿಡುತ್ತೇನೆ.

‘ಹಲೋ!’

ಫೋನಲ್ಲಿ ಮಾತಾಡುವಾಗ ಕೊರಳು ಕೊಂಕದೆ, ತುಟಿ ಡೊಂಕಿಸದೆ, ಹಿಹ್ಹಿಹ್ಹೀ ನಗದೆ, ಮಾತು ಮುಗಿಯುತ್ತದೆಯೇ? ಗೇಟಿನೆದುರಿಂದ ಗಲ್ಲಿಯ ತುದಿಯ ಪ್ರಕಾಶನಂಗಡಿಯವರೆಗೂ ಸಾಗುತ್ತ ಸಾಗುತ್ತ, ಮಾತು ಮುಗಿದುಹೋಗಿರುತ್ತದೆ.
ಮತ್ತೆ ಮುದ್ದಾದ ಆ ನನ್ನ ಸಂಗಾತಿ ಕಾಲೇಜು ಬ್ಯಾಗಿನೊಳಗೆ ಬಂಧಿ. ಅಲ್ಲಿ, ಕಾಲೇಜಿನಲ್ಲಿ



ಸೀನಿಯರ್ ಹುಡುಗರು “ಹಾಯ್ ಬೇಬ್! ಗಿಮ್ಮಿ ಯೋ ನಂಬರ್” ಅನ್ನಬಾರದಲ್ಲ? ಅದಕ್ಕೆ...

ಈ ದಿನವೂ ಹಾಗೇ...
ಬಹುಷಃ ಅಣ್ಣ ಫೋನ್ ತಂದುಕೊಟ್ಟ ಒಂದು ವಾರದಿಂದ ಅದು ಹಾಗೇ... ಕರೆಕ್ಟಾಗಿ ಗೇಟಿನೆದುರು ನಾನು ಬರೋದಕ್ಕೂ, ಫೋನು ಕಿವಿ ಸೇರೋದಕ್ಕೂ ಸರಿಹೋಗುತ್ತೆ! ಅದೇನು ಕೋ ಇನ್ಸಿಡೆನ್ಸೋ, ಒಟ್ಟಿನಲ್ಲಿ ಎದುರು ಮನೆ ಜಗಲಿಯಲ್ಲಿ ಆಚೀಚೆ ಮನೆ ಆಂಟಿಯರೆಲ್ಲ ಹರಟೆಗೆ ಕುಂತಿರುವಾಗಲೇ ಹಾಗೆ ಫೋನು ಕಿವಿಗೇರುತ್ತದೆ, ಕೊರಳು ಕೊಂಕುತ್ತದೆ.

“ಆ ಫೋನ್ ತೆಗ್ದು ಎಸೀತೀನಿ ನೋಡು ಭೋಸುಡಿ! ಯಾರ ಹತ್ತಿರವೇ ನೀನು ಅಷ್ಟೊಂದು ಮಾತಾಡೋದು?”

ಅಣ್ಣ ಮತ್ತು ದೊಡ್ಡಮ್ಮನ ಮಗಳ ವಿನಾ ನನ್ನ ಸೆಲ್ಲಿಗೆ ಕಾಲ್ ಮಾಡುವವರೇ ಇರಲಿಲ್ಲ. ಗೆಳತಿಯರೂ ಕಾಲ್ ಮಾಡುವವರಿಲ್ಲ. . . ಅಸಲಿಗೆ ಗೆಳತಿಯರೇ ನನಗಿಲ್ಲ!
ಮತ್ಯಾಕೆ ಅಮ್ಮ ಹಾರಾಡ್ತಿದಾಳೆ?

ನಾನು ಬುಕ್ಕಲ್ಲಿ ತಲೆ ಹುದುಗಿಸಿ ಕುಂತಿದ್ದೆ. ಅಮ್ಮ ಹಲ್ಲು ಕಚ್ಚುತ್ತ ಬಂದಳು. “ಯಾಕೇ ಹಿಂಗೆ ಹೊಟ್ಟೆ ಉರಿಸ್ತೀಯಾ? ಆ ನನ್ ಮಗ ಅದ್ಯಾವ ಘಳಿಗೇಲಿ ತಂದುಕೊಟ್ನೋ ಈ ಪೀಡೆಯನ್ನ, ಮನೆ ನೆಮ್ಮದಿಯೆಲ್ಲ ಹಾಳಾಗ್‌ಹೋಯ್ತು...” ಅಮ್ಮ ಕೊಂಚ ರಮಾಬಾಯಿಯಂತೆ ರೇಗುತ್ತ, ಲೀಲಾವತಿಯಂತೆ ಕಂಪಿಸುತ್ತ ಪ್ರದರ್ಶನ ಕೊಟ್ಟು ಹೋದಳು.

ಆದರೂ ನಂಗೆ ನಾನು ‘ಅಷ್ಟೊಂದು’ ಮಾತಾಡಿದ್ದು ಯಾವಾಗ ಅಂತ ಗೊತ್ತಾಗ್ಲಿಲ್ಲ. ಮತ್ತೆರಡು ದಿನ ಅಮ್ಮನ ಸದ್ದಿಲ್ಲ. ಅಣ್ಣ ಬೇರೆ ಅವಳಿಗೇ ಬಯ್ದು ಬಾಯಿ ಮುಚ್ಚಿಸಿದ್ದ. ಆದರೆ ಮೊನ್ನೆ ಅಪ್ಪ ಹಾಗೆ ಕೇಳಿಬಿಟ್ಟರಲ್ಲ, ಯಾಕೆ?

“ಮಗಳೇ ಹಾದಿ ಬೀದೀಲಿ ಹೋಗೋರನ್ನೆಲ್ಲ ಪ್ರೀತಿ ಗೀತಿ ಅಂತ ಹಚ್ಕೊಂಡು ನಮ್ ಮರ್ಯಾದೆ ತೆಗೀಬೇಡಮ್ಮಾ” ಅಂತ ಭಾರ ದನಿಯಲ್ಲಿ ಅಂಗಲಾಚಿದ್ದು ಯಾಕೆ? “ಯಾವನೇ ಅವ್ನು, ನಿಜ ಬೊಗಳೇ...” ಅಂತ ಅಮ್ಮ ಮತ್ತೆ ಕೂಗಾಡಿದ್ದು ಯಾಕೆ?

ಯಾಕೆ ಅಂತ ಮೊದಲು ಹೊಳೀಲೇ ಇಲ್ಲ. “ಅಂಥದ್ದೇನೂ ಇಲ್ಲಮ್ಮಾ, ನಿಮ್ಮ ಮರ್ಯಾದೆ ತೆಗಿಯೋ ಅಂಥದ್ದೇನೂ ನಾ ಮಾಡೋಲ್ಲ” ಸಮಜಾಯಿಷಿ ಕೊಡುತ್ತಲೆ ಉಳಿದೆ.

“ಮತ್ಯಾವನ ಹತ್ತಿರವೇ ನೀನು ದಿನವೂ ಹಾಗೆ ಹರಟೋದು? ಸಂಜೆ ನೀನು ಬರುವಾಗ ನಾನೇ ಕಿಟಕಿಯಲ್ಲಿ ನೋಡಿದೆ. ಸರಿಯಾಗಿ ಓಣಿಯೊಳಗೆ ಬರುವಾಗ ಕಟ್ ಮಾಡ್ತೀಯ ನೀನು. ನೀ ಹೀಗೆ ದಿನಾ ಮಾತಾಡ್ತಾ ಬರೋದನ್ನ, ಮನೆಯಿಂದ ಹೊರಹೊರಟ ಕೂಡ್ಲೆ ಫೋನು ಗಲ್ಲಕ್ಕೆ ಹಚ್ಕೋದನ್ನ ಎಲ್ರೂ ನೋಡಿದಾರೆ. ಹಾಗೆ ನಮ್ಮಿಂದ ಕದ್ದು ಮಾತಾಡೋದು ಅಂದ್ರೆ... ಅವ್ರೆಲ್ಲ ಹೇಳಿ ನಮಗೆ ಗೊತ್ತಾಗಬೇಕಾಯ್ತು ವಿಷಯ!” ಅಮ್ಮ ಸೆರಗಿಗೆ ಬಾಯೊತ್ತಿದಳು.

ಸರಿ, ಆದರೆ ನನ್ನ ಈ ಫೋನಿನಾಟ ಅವಳಿಗೆ ಹೇಳಿದ್ದು ಯಾರು?

ಇನ್ಯಾರು? ಎದುರು ಸಾಲಿನ ಆಂಟಿಯರು!

ಎದುರು ಸಾಲಿನ ಆಂಟಿಯರು... ಕೊಕ್ಕರೆ ಮೂತಿಯ, ಬೆದಕು ಕಣ್ಣುಗಳ, ಸದಾ ಏನಾದರೂ ಹುಡುಕುತ್ತಲೇ ಇರುವ ಮಾಟಗಾತಿಯರು!

"ಏನೇ ಇದು? ಮುಂದೆ ಕೊಳದಪ್ಪಲೆ, ಹಿಂದೆ ಹುಣಿಸೆ ಮೂಟೆ!?" ಅನ್ನುತ್ತಿದ್ದರಲ್ಲವೇ ದಿನಾ ಕಾಲೇಜಿಗೆ ಹೋಗುವಾಗ...

"ಓ ಎಷ್ಟೊಂದು ಪಿಂಪಲ್! ಯಾರಿಗಾದ್ರೂ ಲೈನಾ?" ಮತ್ತೂ ಪೋಲಿಪೋಲಿ ಪ್ರಶ್ನೆಗಳು. ಇಶ್ಶೀ... ನನಗವು ಒಂಚೂರೂ ಸೇರವು.

ಆ ದಿನ... ಅಣ್ಣ ಸೆಲ್ ಉಡುಗೊರೆ ಕೊಟ್ಟ ಏಳನೇ ದಿನ, ಅದೇನು ತೋಚಿತೋ ನನಗೆ, ಹಾಗೆ ಅವರೆಲ್ಲರ ಕೆಟ್ಟ ಬಾಯಿಂದ ಕಿವಿ ಮುಚ್ಚಿಕೊಳ್ಳಲು ಫೋನು ಒತ್ತಿಕೊಂಡೆ.

'ಹಲೋ' ಕೊರಳು ಕೊಂಕಿಸಿದೆ. ಆ ದಾರಿ ಮುಗಿಯುವವರೆಗೂ ಸುಮ್ಮಸುಮ್ಮನೆ ನಕ್ಕೆ. ಕೊನೆಕೊನೆಗೆ ಆಂಟಿಯರು ಅಲ್ಲಿ ಕೂತಿಲ್ಲದಾಗಲೂ ಆ ಬೀದಿಯಲ್ಲಿ ಹೋಗುವಾಗ ಕಿವಿಗೆ ಫೋನಿಡುವುದೊಂದು ಗೀಳಾಗಿ ಹೋಯ್ತು ನನಗೆ.

ಈಗ ಅಪ್ಪ ಅಮ್ಮ ಕೇಳ್ತಿದಾರೆ, "ಹೇಳು. ಯಾರ ಹತ್ತಿರ ಮಾತು...?"

ಹೇಗೆ ಹೇಳಲಿ ಅವರಿಗೆ ಈ ನನ್ನ ಹುಚ್ಚನ್ನ? ಕೊಳಕು ಬಾಯಿಯ ಆಂಟಿಯರನೆದುರಿಸಲಾಗದೆ ಮಾಡಿದ ಈ ತಿಕ್ಕಲುತನವನ್ನ? ಅಮ್ಮ ನನಗೆ ತಲೆಕೆಟ್ಟಿದೆಯೆಂದೇ ಎದೆ ಬಡಿದುಕೊಂಡಾಳು ಮತ್ತೆ! ಅಪ್ಪನ ಕಣ್ಣಲ್ಲಿ ಅಸಹಾಯಕತೆ ಒಡೆದೀತು. ಅಣ್ಣ ಕೂಡ ಹುಚ್ಚು ಹುಡುಗಿ ಅಂದು ಮುಖ ತಿರುಗಿಸಿಬಿಟ್ಟಾನು.

ಹೇಗೆ ಹೇಳಲಿ ನಾನವರಿಗೆ ಅದನ್ನೆಲ್ಲ?

ಊಹೂಂ... ನಾನೆಷ್ಟೇ ಸಮಾಧಾನ ಹೇಳಿದರೂ ಅವರಿಗೆ ಸಮಾಧಾನವಾಗಲಿಲ್ಲ. ಫೋನು ಕಸಿದು ಕೈಬಿಟ್ಟರು. ಅಣ್ಣ ಬಿಲ್ ಡೀಟೈಲ್ ತೆಗೆಸಿ ನೋಡಿದ. ಅದರಲ್ಲಿ ಎಂತ ಮಣ್ಣಾಂಗಟ್ಟಿಯೂ ಸಿಗಲಿಲ್ಲ. ಅಂವ ಏನೇ ಇದು? ಅಂತ ತಲೆ ನೇವರಿಸಿ ಸುಮ್ಮಗಾದ.

ಅಪ್ಪ ಅಮ್ಮನ ಪ್ರಶ್ನೆಗಳಿಗೆ ಕೊನೆಯೇ ಇಲ್ಲ. ಅದಾಗಲೇ ಅವರು ನನ್ನ ಜಾತಕ ಹೊರಡಿಸೋ ಮಾತಾಡ್ತಿದಾರೆ! ಸಾಬರವನೋ, ಸುಂಟರವನೋ? ಅಂತ ತಮ್ಮತಮ್ಮಲ್ಲೆ ಪಿಸುಗುಟ್ಟೋದೂ ನನಗೆ ಕೇಳಿಸಿದೆ.

ಇವತ್ತು ಬೆಳಗ್ಗೆಯಂತೂ ಅವಳು, ಅದು ಯಾರು, ಏನು ಕಥೆ ಅಂತ ಹೇಳದೆ ಹೋದ್ರೆ ನಿನ್ನ ಕಾಲೇಜು ಗೀಲೇಜೆಲ್ಲ ಬಂದ್ ಅಂದುಬಿಟ್ಟಿದಾಳೆ.

ಓ! ನಾನು ಇದನ್ನ ಹೇಗೆ ನಿಭಾಯಿಸಲಿ? ಯಾರಾದ್ರೂ ಸಹಾಯಕ್ಕೆ ಬನ್ನಿ ಪ್ಲೀಸ್...!





# ಅವಳಿಗೊಂದು ಮದುವೆಯಾಯಿತು...

"ಏಯ್, ನಿನ್ ಗಂಡ ಬಂದಾ ನೋಡೇ!" ಛೇಡಿಸಿದಾಗ ಹುಡುಗಿ ಓಡಿ ಬಂದು ಅವನನ್ನ ತಬ್ಬಿದ್ದಳು. "ಮಾಮಾ ಚಾಕ್ಲೇಟು..." ಅನ್ನುತ್ತ ಜೇಬು ತಡಕಿದ್ದಳು. ಅವಳನ್ನ ಸೊಂಟಕ್ಕೇರಿಸ್ಕೊಂಡು ಅಂವ ಅಂಗಡಿ ಅಂಗಡಿ ಸುತ್ತಾಡಿಸಿದ್ದ.
ಆರರ ಬಾಲೆಗೆ ಹದಿನೆಂಟರ ಮಾಮ. ಮಾಮ, ಅಮ್ಮನ ತಮ್ಮ.

~

ಅವಳಿಗೆ ಮಾಮ ಅಂದರಾಯ್ತು. ಊಟಕ್ಕೆ, ಆಟಕ್ಕೆ, ಪಾಠಕ್ಕೂ ಅವನೇ ಸಾಥಿ. ಅವನೂ ಅಷ್ಟೆ. ಅವಳಿಗೆ ಜಡೆ ಹೆಣೆಯುತ್ತ, ಮೆಹಂದಿ ಹಾಕುತ್ತ, ಕಣ್ಣೊಳಗೆ ದೀಪ ಹಚ್ಚಿಕೊಂಡು ಕುಂತುಬಿಡುತ್ತಿದ್ದ.
ಅವರೊಡನಾಟ ಕಂಡ ಮನೆಮಂದಿ, "ಗಂಡ– ಹೆಂಡತಿಯಾಗೋರು ಈಗ್ಲಿಂದಲೇ ಹೇಗಿದಾರೆ ನೋಡು!" ಅಂತ ಸಂಭ್ರಮಿಸ್ತಿದ್ದರು. ಮೈನೆರೆದ ಹುಡುಗಿ ಅವರ ಮಾತಿಗೆ ಮುಖ ಕೆಂಪಾಗಿಸ್ಕೊಂಡರೆ, "ನಾಚಿಕೆ ಮುಂಡೇದಕ್ಕೆ!" ಅಂದುಕೊಂಡು ನಗಾಡಿದರು.

~

'ಹದಿ' ಹರೆಯ ಮುಗಿಯಿತಂದ್ರೆ ಸಾಕು, ಹೆಣ್ಣು ಹೆತ್ತವರ ತಲಾಶೆ ಶುರು. ಆದರೆ ಆ ಮನೆಯಲ್ಲಿ ಅಂಥದೇನೂ ಧಾವಂತವಿಲ್ಲ. ಅಕ್ಕನ ಮದುವೆಯಾದಾಗಿನಿಂದ ಅಲ್ಲೇ ಇರುವ ತಮ್ಮ ಇದಾನೆ. ಕೈಯ್ಯಾರ ಹುಡುಗಿಯನ್ನ ಎತ್ತಿ ಆಡಿಸಿದಾನೆ. ಒಳ್ಳೆ ಹುಡುಗ, ಚೆಂದವಿದಾನೆ. ತುಂಬು ಸಂಬಳದ ಕೆಲಸವೂ ಇದೆ. "ಆಹಾ, ಭಾಗ್ಯವೇ ಭಾಗ್ಯ!" ಆಚೀಚೆಯವರು ಕಣ್ಣು ಹಾಕಿದ್ದಿದೆ.

~

ಯಾಕೋ ಇತ್ತೀಚೆಗೆ ಆ ಮನೆಯಲ್ಲಿ ಎಲ್ಲವೂ ಸರಿಯಿಲ್ಲ. ಮಾವ– ಸೊಸೆಯ ಮದುವೆ ದಿನ ಗೊತ್ತು ಮಾಡುವ ಹೊತ್ತಿಗೇ ಅವನಿಗೆ ದೂರದೂರಿಗೆ ವರ್ಗವಾಗಿದೆ. ಹಾಗೆ ಅಂವ ಹೋದಾಗಿನಿಂದ ಅವಳ ದುಗುಡ ಹೆಚ್ಚಾಗಿದೆ.
"ಅದು ಅವನಿಲ್ಲದ ದುಃಖ" ಅಂತ ಮೊದಮೊದಲು ಅಪ್ಪ ಅಮ್ಮ ಸುಮ್ಮನುಳಿದರು. ಮದುವೆಗೆ ತಿಂಗಳಿದ್ದಾಗ "ಮಾಮನ ಜತೆ ಮದುವೆ ಬೇಡ" ಹುಡುಗಿ ಅತ್ತಳು.
ಮನೆ ಮಂದಿಗೆ ತಲೆಬುಡ ಅರ್ಥವಾಗಲಿಲ್ಲ. ಅವಳಿಗೆಲ್ಲೋ 'ಗಾಳಿ' ಸೋಂಕಿರಬೇಕೆಂದು ಚೀಟಿ ಬೂದಿ ಹಾಕಿಸಿದರು. ಊಹೂಂ... ಅವಳ ಅಳು ನಿಲ್ಲಲಿಲ್ಲ. ಅಕ್ಕಿ– ತಾಯಿತ ದಿಂಬಡಿ ಇಟ್ಟು ಮಲಗಿಸಿದರು. ಇಲ್ಲ... ಹುಡುಗಿ ಆಗಲೂ 'ಬೇಡ ಬೇಡ'ವೆನ್ನುತ್ತಲೆ ಉಳಿದಳು.
ಅವಳ ನಿರಾಕರಣೆಯ ಕಾರಣ ಏನೆಂದೇ ಯಾರಿಗೂ ತೋಚಲಿಲ್ಲ. ಬೇರೆ ಯಾರನ್ನಾದರೂ...?

ಸದ್ಯ! ಅವಳು "ಹಾಗೇನೂ ಇಲ್ಲವೇ ಇಲ್ಲ" ಅಂತ ತನ್ನ ಪ್ರೀತಿಯ ಮಾಮನ ಮೇಲೆ ಆಣೆ ಮಾಡಿ ಹೇಳಿದಾಗ ಅವರಿಗೆಲ್ಲ ಜೇನು ತಿಂದಷ್ಟು ಖುಶಿ!

"ಹುಚ್ಚು ಹುಡುಗಿ, ದೂರದ ಊರಂತ ಹೆದರ್ತಿದೆ..." ಮೊಮ್ಮಗಳ ಅಳುವಿಗೆ ಅವಳಜ್ಜಿ ವ್ಯಾಖ್ಯೆ ಬರೆದಳು. ಅಷ್ಟೇ ಸಾಕನ್ನುವ ಹಾಗೆ ಉಳಿದವರೆಲ್ಲ ತಮ್ಮ ಪಾಲಿನ ಸಿದ್ಧತೆ ಮುಂದುವರೆಸಿದರು.

ಮನೆ ಮಂದಿ ಸಿದ್ಧವಾದರು. ಮಂಟಪ ಸಿದ್ಧವಾಯ್ತು. ಊರ ಜನ ಸಿದ್ಧವಾದರು. ಹುಡುಗನಂತೂ ಸಿದ್ಧವೇ ಇದ್ದ. ಇನ್ನು ಹುಡುಗಿಯದೇನು ಮಾತು? ಅವಳನ್ನೂ ಸಿದ್ಧ ಮಾಡಿದರು!
ಹಸೆ ಮೇಲೆ ಹೊಸ ಮದುಮಕ್ಕಳು ಬಾಸಿಂಗ ತೊಟ್ಟು ಕುಂತರು. ಅಂತೂ ಮದುವೆ ಮುಗಿಯಿತು.

~

ಪ್ರಸ್ತದ ಕೋಣೆಯಲ್ಲಿ ಮಲೆನಾಡು ಮುಖದ ಹುಡುಗಿ 'ಧೋ' ಅಂತ ಸುರಿಯುತ್ತಿದ್ದಳು. ಕಣ್ಣಲ್ಲಿ ಸಿಡಿಲು– ಮಿಂಚು. ಅವಳ ಮೊಂಡಾಟದ ಅರಿವಿದ್ದ ಅಂವ ಬಳಿ ಕೂರಲು ಹೆದರಿದ. ಅವಳ ಪಾಡಿಗೆ ಅತ್ತುಕೊಳ್ಳಲು ಬಿಟ್ಟು ಒಬ್ಬನೇ ಮಲಗಿದ. 'ಮೊದಲಾಗಿದ್ದರೆ ಚಾಕಲೇಟು ಕೊಟ್ಟು ಸುಮ್ಮನಿರಿಸಬಹುದಿತ್ತು. ಈಗೇನು ಕೊಡಲಿ?' ಹೊರಳಾಡಿದ.

ಪಾಪದ ಹುಡುಗ. ಅವನಿಗೆ ಅಕ್ಕನ ಮಮತೆಯ ಋಣ. ಭಾವನ ಮನೆ ಉಪ್ಪಿನ ಋಣ. ನಿದ್ದೆ ಬರದೆ ಅಂತೂ ಸಾವರಿಸಿಕೊಂಡು ಪಕ್ಕ ಹೋಗಿ ಕುಂತ. ಎಂದಿನ ಹಾಗೆ ತಲೆ ನೇವರಿಸ್ತ, "ಎಂತದೇ ಮುನ್ನಿ?" ಅಂದ.

~

ಅವನು...
ಲಂಗ ಎತ್ತಿಕೊಂಡು ಸಿಂಬಳ ಸುರಿಸುತ್ತ ತಾನು ಯಾರ ತೊಡೆಯೇರಿ ಕುಳಿತುಕೊಳ್ತಿದ್ದಳೋ ಅದೇ ಅವನು!
ಜ್ವರ ಬಂದಾಗ ರಾತ್ರಿಯಿಡೀ ಬಗಲಲ್ಲಿ ಇದ್ದು ನೆತ್ತಿಗೆ ಒದ್ದೆ ಬಟ್ಟೆ ತಟ್ಟುತಿದ್ದವನು.
ಶಾಲೆಗೆ ಕೈ ಹಿಡಿದು ಕರೆದೊಯ್ತಿದ್ದವನು.
ಗೆಳತಿ ಜತೆಯ ಜಗಳ ಬಿಡಿಸಿದವನು.
ಹೊಸ ಪೆನ್ಸಿಲ್ಲು ರಬ್ಬರ್ರು ಕೊಡಿಸಿದವನು.
ತಾನು ಬರಿ ಕಾಲಲ್ಲಿ ನಡೆದು ಅವಳಿಗೆ ಚಪ್ಪಲಿ ತೆಗೆಸಿಕೊಟ್ಟವನು.

ಕೃಷ್ಣನ ಡ್ರೆಸ್ಸು ಮಾಡಿ, ಸೈಕಲ್ಲಿನ ಬಾರ್ ಮೇಲೆ ಕುಳ್ಳಿರಿಸಿಕೊಂಡು ಹೋಗಿ ಫೋಟೋ ತೆಗೆಸಿದ್ದನಲ್ಲಾ, ಅದೇ ಅವನು!

ತನ್ನ ಮುದ್ದಿಗೂ ಮುನಿಸಿಗೂ ಸೊಪ್ಪು ಹಾಕುತ್ತ ತಾಳಕ್ಕೆ ಕುಣಿದ ಅಪ್ಪನಂಥವನು!!



ಮಾಮನ ಮುಖ ನೋಡುತ್ತ ಮುದ್ದುಗರೆಯುತ್ತ ಅಳುತ್ತಿದ್ದಾಳೆ ಹುಡುಗಿ...
ಕೇಳುತ್ತಿದ್ದಾಳೆ ಹಾಗೇ, "ಅಪ್ಪನಂಥವನ ಜತೆ ನಾ ಹೇಗೆ ಸಂಸಾರ ಮಾಡಲಿ?"



# ಸಾಯುವ ತೆವಲಿನ ಹೆಂಗಸರು

"ನೀವು ಹಿಂಗೇ ಮಾಡ್ತಿರಿ. ಒಂದಿನ ನಾನು ಹೊಳೆ ಹಾರಿ ಸಾಯ್ತೀನಿ" ಅಂತ ಎಂಟು ವರ್ಷಗಳಿಂದಲೂ ಹೆದರಿಸ್ತಲೇ ಇದ್ದವಳು ಕೊನೆಗೂ ತುಂಗೆಯಲ್ಲಿ ಹಾರಿಕೊಂಡು ಸತ್ತಳು. ಹಾಗೆ ಸಾಯುತ್ತ ಒಂಟಿಯಾಗೇನೂ ಸಾಯಲಿಲ್ಲ. ಅದಕ್ಕೆ ಮುನ್ನ ತನ್ನ ನಾಲ್ಕು ವರ್ಷದ ಮಗುವನ್ನು ನೀರಲ್ಲಿ ಮುಳುಗಿಸಿ ಕೊಂದಿದ್ದಳು.

ಹಾಗೆ ಸತ್ತವಳಿಗೆ ಸಾಯಲು ವಿಶೇಷ ಕಾರಣಗಳೇನೂ ಇರಲಿಲ್ಲ. ಅವಳ ಗಂಡ ಒಬ್ಬ ತಿಂಡಿಪೋತನಾಗಿದ್ದ. ಸಾರಲ್ಲಿ ಸಾಸಿವೆ ಹುಡುಕುವಷ್ಟು ರಂಪಾಟದವನಾಗಿದ್ದ. ಅಡುಗೆ ವಿಷಯಕ್ಕೇ ಸಾಕಷ್ಟು ಬಾರಿ ಮನೆಯಲ್ಲಿ ಮಹಾ ಯುದ್ಧವೇ ನಡೆದುಹೋಗುತ್ತಿತ್ತು! ಎಷ್ಟೆಂದರೆ, ಎರಡೂ ಕಡೆಯ ಅಪ್ಪ ಅಮ್ಮಂದಿರು ಬಂದು ಪಂಚಾಯ್ತಿ ಮಾಡುವಷ್ಟು ವಿಪರೀತಕ್ಕೆ ಹೋಗುತ್ತಿದ್ದುದೂ ಉಂಟು!

ಹೀಗೆ ಕಚ್ಚಾಡುತ್ತಲೇ ಮದುವೆಯಾದ ನಾಲ್ಕನೆ ವರ್ಷಕ್ಕೆ ಅವಳೊಂದು ಮಗು ಹೆತ್ತಳು. "ಇನ್ನೇನು, ಜವಾಬ್ದಾರಿ ಬಿದ್ದು ಸರಿ ಹೋಗ್ತಾರೆ" ಅಂತ ಬಂಧುಗಳು ನಿಸೂರಾದರು. ಆ ಹೊತ್ತಿಗೆ ಅಂವ ಕೂಡ ಕೊಂಚ ಸುಧಾರಿಸಿದ್ದ. ಹೊಸ ಜೀವದ ಆಟ ಪಾಠಗಳಲ್ಲಿ ಅವರು ಹುಣ್ಣಿಮೆ–ಅಮವಾಸ್ಯೆ ಮರೆತರು.

ಆದರೆ, ಮರೆವು ಎಷ್ಟು ದಿನ? ಮತ್ತೆ, ಮತ್ತೊಂದು ದಿನ 'ಸಾರಲ್ಲಿ ಉಪ್ಪಿಲ್ಲ, ಹುಳಿ ಇಲ್ಲ, ಕತ್ತೆ ಉಚ್ಚೆ ಇದ್ದ ಹಾಗಿದೆಯಲ್ಲೇ ಇದು!?' ಅಂವ ವರಾತ ತೆಗೆದ. ಮಗುವಿನ ಅಂಡು ತೊಳೆಸುತ್ತಿದ್ದವಳಿಗೆ ರೇಗಿಹೋಯ್ತು. 'ನೀವ್ಯಾವಾಗ ಕುಡಿದು ನೋಡಿದ್ರಿ?' ಕೇಳೇಬಿಟ್ಟಳು.

ಹಸಿದು ಊಟಕ್ಕೆ ಕುಂತಿದ್ದವ ಉರಿದು ಬಿದ್ದ. ಮಗುವಿನೆದುರೇ ಮಾರಾಮಾರಿಯಾಯ್ತು. ಕೊನೆಗೂ ಫಟೀರೆಂಬ ಸದ್ದಿನೊಡನೆ ಅವಳ ಮಾತು ಉಡುಗಿತು. ಅಂವ ಧಡಬಡನೆ ರೂಮಿಗೆ ಹೋಗಿ ಬಾಗಿಲು ಬಡಚಿ ಮಲಗಿದ. ಅವಳು ಅಡುಗೆ ಮನೆ ಮೂಲೆಯಲ್ಲಿ ಮುದುರಿ ಕುಂತಳು. ಮಗು, ಈ ಯಾವ ಕಡೆಯೂ ತಲೆ ಹಾಕದೆ ಕಾರ್ಟೂನು ನೋಡುತ್ತ ಕೂತಿತು.

ಅವಳು ಅಲ್ಲಿ ಕಾಯ್ತಲೇ ಇದ್ದಳು. ಅಂವ ಬಂದು ಸಮಾಧಾನ ಮಾಡ್ತಾನೇನೋ ಅಂದುಕೊಳ್ಳುತ್ತ ಹಾಗೇ ಒರಗಿಕೊಂಡಳು.

ಅಂವ ಕೂಡ ಕಾದಿದ್ದ. ಈಗ ಒಳಬಂದು ಬಳೆ ಸದ್ದು ಮಾಡ್ತಾಳೆ. 'ಹೋ' ಅಂತ ಧುಮುಕ್ತಾಳೆ... ಕಿವಿ ಕಚ್ತಾಳೆ... ಅಂತೆಲ್ಲ ಊಹೂಂ... ಅವನಿಗಾಗಿ ಕಾದು ಹತಾಶಳಾಗಿ ಎದ್ದು ಬಂದವಳೇ, 'ನಾನು ಸಾಯ್ತೀನಿ' ಅಂದಳು.

ದಿನವೂ ಅಭ್ಯಾಸವಾಗಿಹೋಗಿದ್ದ ಅಂವ ಏನೂ ಮಾತಾಡಲಿಲ್ಲ. 'ನಾನು ಹೊಳೆ ಹಾರಿ ಸಾಯ್ತೀನಿ' ಮತ್ತೆ ಕೂಗಿದಳು. ಅಂವ ಈಗ, 'ಸಾಯಿ ಹೋಗು' ಅಂದು ಮುಸುಗು ಹಾಕಿಬಿಟ್ಟ.

~

ಅವಳು ಸತ್ತಳು. ಮಗುವನ್ನೂ ಸಾಯಿಸಿ ಸತ್ತಳು. ತೃಪ್ತಿಯಾಗಿರಬೇಕು ಅವಳ ಆತ್ಮಕ್ಕೆ. ಜನರೆಲ್ಲ, 'ಮಗುವನ್ನ ಕೊಲ್ಲುವಾಗ ಅದೆಷ್ಟು ನೊಂದಿತೋ ತಾಯಿ ಹೃದಯ, ಪಾಪ!' ಅನ್ನುವಾಗ ದೊಡ್ಡ ಸರ್ಟಿಫಿಕೇಟು ಸಿಕ್ಕಂತಾಗಿರಬೇಕು ಅವಳಿಗೆ!!

ಛೀ... ಅಮ್ಮ ಹೇಳ್ತಲೇ ಇದ್ದಳು. ಅವಳ ಮುಖದಲ್ಲಿ ಸತ್ತವಳ ಬಗ್ಗೆ ತಾತ್ಸಾರ ಒಡೆದು ಕಾಣುತ್ತಿತ್ತು. 'ಆ ಗಂಡನ ಪಾಡು ಈಗ ಯಾರಿಗೂ ಬೇಡವಂತೆ, ಅಂವನ್ನ ಹುಚ್ಚಾಸ್ಪತ್ರೆ ಸೇರಿಸಿದಾರಂತೆ!' ವರದಿ ಒಪ್ಪಿಸಿದಳು.

ಆಮೇಲೆ ನಾನು ಅಮ್ಮ ಇಬ್ಬರೂ ಅಪ್ಪನ ಅಂದಿನ ದಿನಗಳ ರೌದ್ರಾವತಾರ ನೆನೆದು ನಕ್ಕೆವು. ಉಪ್ಪಿಟ್ಟು ಗಂಟಾಗಿದೆ ಅಂತ ಬಾಣಲೆ ತೆಗೆದು ಎಸೆದಿದ್ದು, ಶಾವಿಗೆ ಅಂಟಾಗಿದೆ ಅಂತ ತಟ್ಟೆ ತೆಗೆದು ಬೀಸಿದ್ದು... ಎಲ್ಲಾ ನೆನೆಸಿಕೊಂಡೆವು.

ಅಮ್ಮನ ಮದುವೆಯಾದ ಮೂವತ್ತು ವರ್ಷಗಳು ಹೀಗೇ ಕಳೆದುಹೋಗಿದ್ದವು. ಅವಳು 'ಸಾಯ್ತೀನಿ' ಅಂತ ಹೆದರಿಸ್ತಲೇ ಬದುಕಿ ತೋರಿಸಿದ್ದಳು. ಅಪ್ಪ ಕೂಡ 'ಸಾಯಿ ಹೋಗು' ಅನ್ನುತ್ತಲೇ ಅವಳನ್ನ ಉಳಿಸಿಕೊಂಡಿದ್ದ. ಸದ್ಯ! ಅಮ್ಮ ನಮ್ಮನ್ನ ಕೊಲ್ಲಲಿಲ್ಲ!! ಅವಳ ಮೇಲೆ ಪ್ರೀತಿ ಉಕ್ಕಿತು. ಹಾಗೇ, ಮಗುವನ್ನು ಕೊಂದು ಸತ್ತ ಹಿಂದಿನ ಬೀದಿ ಹೆಂಗಸಿನ ಮೇಲೆ ಕೋಪವೂ...



# ಬೇತಾಳ ಪ್ರಶ್ನೆ

ಅದ್ಯಾವಾಗ ಬೇತಾಳ ವಿಕ್ರಮಾದಿತ್ಯನ ಬೆನ್ನು ಬಿಡ್ತೋ, ನನ್ನ ಬೆನ್ನು ಬಿದ್ದಿದೆ. ಅದು ಹೇಳಿದ ಕಥೆ ಕೇಳಿ.

ಒಂದೂರು. ಆ ಊರಲ್ಲೊಬ್ಬ ಚಾಂದ್ ಚಕೋರಿ. ಅವಳಿಗೊಬ್ಬ ಭಂಡ ಗಂಡ. ಹಗಲಾಗೆದ್ದು ಹೊಂಟ ಅಂದ್ರೆ ಮುಗೀತು. ಹಾದಿ ಬೀದಿ ಪಂಚಾಯ್ತಿ ಮುಗ್ಸಿ, ಇಸ್ಪೀಟೆಲೆ ಕಲಸಿ, ಕಂಠಮಟ್ಟ ಕುಡ್ಕೊಂಡ್ ಬಂದ ಅಂದ್ರೆ, ದಿನ ಕಳೀತು.



ಹೀಂಗಿರುವಾಗ ಆ ಊರಿಗೊಬ್ಬ ಮಾಸ್ತರ್ ಬಂದ. ಬಂದವ ಸುಮ್ನಿದ್ನಾ? ಚಕೋರಿ ಮಗ ಓದಲ್ಲಿ ಹಿಂದೆ ಅಂತ ಅವಳ ಮನೆಗೆ ದೂರು ತಂದ. ದೂರು ತಂದ, ಮಾತು ತಂದ, ಚಕೋರಿ ಮುಖದಲ್ಲಿ ಹುಣ್ಣಿಮೆ ತಂದ.

ಬದುಕಂದರೇನು? ಅವಳಿಗೆ ಗೊತ್ತಾಯಿತು. ಒಲವೊಲವಾದಳು ಚಕೋರಿ, ಗೆಲು ಗೆಲುವಾದಳು! ಮಾಸ್ತರನ ಅಕ್ಕರೆಗೆ ಸೋತು ಹೋದಳು ಅವಳು. ಹಾಲು ಸಕ್ಕರೆ ಬೆರೆತು ಸಿಹಿಯಾಯಿತು.

ಪಂಚಾಯ್ತಿ ಕಟ್ಟೆಯಲ್ಲಿ ಕುಂತವನ ಕಿವಿಗೆ, ಗಾಳಿ ಸುದ್ದಿ ತಂದಿತು. ಯಾಕೆ ಹೀಗಾಯ್ತು? ಉಡಾಫೆಯ ದೂಳೆರಚಿ ಇಷ್ಟೂ ದಿನ ಹಾಳುಗೆಡವಿದ್ದರ ಲೆಕ್ಕ ಸಿಕ್ಕಿತವನಿಗೆ. ಇಸ್ಪೀಟೆಲೆ ಗಾಳಿಗೆ ತೂರಿದ. ಹೆಂಡದ ಹಂಡೆ ಬಾವಿಗೆಸೆದ. ಹಗಲೂ ಇರುಳೂ ಗದ್ದೆ ತೋಟ ತಿರುಗಿದ. ಗೆಳೆಯರ ಮನೆ– ಮನ ಹೊಕ್ಕು ಮಾತು ಕಲಿತು ಬಂದ.


ಗಂಡ, ಭಂಡತನ ಕಳಕೊಂಡು ಗಂಡುಗಂಡಾದ! ರಾತ್ರಿ ಚಕೋರಿಯ ಪಕ್ಕದಲ್ಲಿ ಕುಂತು 'ಚಂದ್ರ ಮಂಚಕೆ ಬಾರೇ' ಅನ್ನತೊಡಗಿದ! ಅವಳಾಗಲೆ ತುಳಸಿಕಟ್ಟೆ ದಾಟಿಯಾಗಿತ್ತು. ಮಾಸ್ತರ್ ಹೃದಯ, ಮನಸ್ಸು, ದೇಹ– ಎಲ್ಲದರಲ್ಲೂ ಹೊಕ್ಕು ಕುಂತಿದ್ದ.

ಇದೀಗ ಗಂಡ ಬದಲಾಗಿ ಎದ್ದು ಬಂದು, 'ಇಡಿ ಇಡಿಯಾಗಿ ಮರಳಿ ಬಾರೇ ಅನ್ನುತ್ತಿದ್ದಾನೆ!

– ಇಷ್ಟು ಕಥೆ ಹೇಳಿದ ಬೇತಾಳ ಒಂದೇ ಸಮ ತಲೆ ತಿಂತಿದೆ.

'ಹೇಳು! ಚಕೋರಿ ಯಾರೊಟ್ಟಿಗೆ ಇರಬೇಕು, ಯಾರನ್ನ ಬಿಡಬೇಕು? ತಪ್ಪು ಉತ್ತರ ಹೇಳಿದರೆ, ನಿನ್ನ ಕನಸುಗಳೊಡೆದು ಸಾವಿರ ಚೂರಾಗೋದು ಖಂಡಿತ!'





# ಎಲ್ಲ ಗದ್ದಲದ ಆಚೆಗೂ?

ಚೇತನಾ ತೀರ್ಥಹಳ್ಳಿ ನನಗೆ ಪರಿಚಯವಿರುವುದು "ಪುರುಷಾಕಾರ"ವನ್ನು ಬೆಚ್ಚಿಸಬಲ್ಲ ಅವರ ಬರಹಗಳ ಮೂಲಕ. ಪುಟ್ಟ ಪುಟ್ಟ ಬರಹಗಳು ಅವು. ಕಾವ್ಯದ ಶಕ್ತಿಯೊಂದಿಗೆ ಕೆಲವೇ ಮಾತುಗಳಲ್ಲಿ ಮಾರ್ಮಿಕವಾಗಿ, ಆದರೆ ಬಲು ನಿರಾಯಾಸವಾಗಿ, ಹೇಳಬೇಕಾದ್ದನ್ನು ಹೇಳಿ ಮುಗಿಸಬಲ್ಲ ಸಹಜವಂತಿಕೆಯಿಂದ ಅವರ ಬರಹಗಳು ಗಮನ ಸೆಳೆಯುತ್ತವೆ. ಅವರು ಕವಿತೆಯನ್ನೂ ಬರೆಯುತ್ತಾರೆ ಎಂಬುದು ಗೊತ್ತಾದದ್ದೇ ಮೊನ್ನೆ.

ಅಳಲು, ಸಿಟ್ಟು ಮತ್ತು ಪ್ರತಿಭಟನೆಯನ್ನು ಹಾಹಾಗೇ ವ್ಯಕ್ತಪಡಿಸುವ ಯಾವುದೇ ಮನೆಯ ಹುಡುಗಿಯ ಹಾಗೆ ಚೇತನಾ ಅವರ ಅಭಿವ್ಯಕ್ತಿ. ಹಾಗಾಗಿಯೇ ಚೇತನಾ ಎಷ್ಟೋ ಸಲ ಗೋಳು ಮತ್ತು ಗೋಜಲುಗಳ ಕಥೆಗಳಲ್ಲಿ ಮುಳುಗಿಹೋಗಿದ್ದಾರೆ ಎನ್ನಿಸಿದರೂ, ಅವರು ಹೇಳುತ್ತಿರುವುದು ಮಾತ್ರ ಹಲವು ಹುಡುಗಿಯರ ಕಥೆಯನ್ನು ಎಂಬುದೂ ನಿಚ್ಚಳ. ವೈಯಕ್ತಕ ಸಂಕಟಗಳ ಕತ್ತಲ ಕೋಣೆಯ ಬಾಗಿಲಿಂದಾಚೆಯೂ ನಿರುಕಿಸುವ ಧ್ಯಾನ ಅವರದು. ಅದ–ರಿಂದ, ಒಂದಿಡೀ ಸಮುದಾಯದ ಆತ್ಮಕಥನವಾಗಲು ತವಕಿಸುವ ಮಿಂಚಿನ ಧಾರೆಗಳು ಕೂಡ ಅವರ ಬರಹಗಳಲ್ಲಿ ಗೋಚರವಾಗುತ್ತವೆ.

"ಹನ್ನೆರಡು ಮನೆ
ಕುಂಟೋಬಿಲ್ಲೆಯ ಹುಡುಗಿ
ಹಿತ್ತಿಲಲ್ಲಿ ಕುಂಟುತ್ತಿದ್ದಾಳೆ,
ಆಟ ಸೋತಿದ್ದಾಳೆ."

ಇಲ್ಲಿನ ಬಹುಪಾಲು ಕವಿತೆಗಳಲ್ಲಿ ಇರುವವರು ಹೀಗೆ "ಆಟ ಸೋತ" ಹುಡುಗಿಯರು. "ಬಲಗಾಲಿಟ್ಟು ಶುರುವಾಗುವ ಆಟ"ದಲ್ಲಿ ಸೋತವರು. ಇವರದೆಲ್ಲ "ನೋವುಗಳ ಬಗೆಬಗೆದು ಹೊರಗೆಳೆದು ಅಳು"ವ ಸ್ಥಿತಿ. ಹಾಗಿದ್ದೂ ಬೇರೆಯವರ ಅನುಕಂಪದ ನೋಟ ಇವರನ್ನು ಸಂತೈಸುವುದಿಲ್ಲ; ಬದಲಾಗಿ ಇನ್ನಷ್ಟು ತಲ್ಲಣಗೊಳಿಸುತ್ತದೆ. ನಿರ್ದಯಿ ಲೋಕದಲ್ಲಿ ನಗುವಾಗಿ ಅವತರಿಸುವ ಶಕ್ತಿವಂತೆಯರು ಇವರು.

"ಎಷ್ಟು ದಿನಗಳಾಗಿ ಹೋಗಿವೆ
ನನ್ನ ನೆರಳು ನೋಡಿ ನಾನು!"

ಹೆಣ್ಣೊಬ್ಬಳ "ಗೃಹಬಂಧನ" ಅವಸ್ಥೆಯನ್ನು ನಿರೂಪಿಸುವುದಕ್ಕೆ ಇದಕ್ಕಿಂತ ಬೇರೆ ಸಾಲುಗಳು ಬೇಕಿಲ್ಲವೇನೊ. ಒಂದು ನಿರೀಕ್ಷೆಯಿಂದ, ಸುಂದರ ಕನಸಿನಿಂದ ಶುರುವಾಗುವ ಬಾಳು ಯಾವ ಹಂತಕ್ಕೆ ಮುಟ್ಟಿದೆಯೆಂದರೆ, ಈಗ ಸೂರ್ಯನ ಮುಖ ನೋಡದೆ ದಿನಗಳು ಹುಟ್ಟುವುದು, ಮುಗಿದುಹೋಗುವುದು ಅಭ್ಯಾಸವೇ ಆಗಿಹೋಗಿದೆ.

ಇಂಥ ಹಲವು ಕಥನಗಳನ್ನು ಚೇತನಾ ಕವಿತೆಗಳು ನುಡಿಸುತ್ತವೆ. ಹಲವು ದಿಗ್ಭ್ರಮೆಗಳ ಮೊತ್ತವನ್ನು ಗಂಟು ಕಟ್ಟಿಕೊಂಡು ಸಾಗಿರುವ ಹುಡುಗಿಯರ ದನಿಯನ್ನು ಇವರ ಕವಿತೆಗಳ ತೀರದಲ್ಲಿ ಕೇಳಿಸಿಕೊಳ್ಳಬಹುದಾಗಿದೆ.

ನನಗೆ ತುಂಬ ಇಷ್ಟವಾದ ಚೇತನಾ ಅವರ ಮತ್ತೊಂದು ಕವಿತೆಯ ಬಗ್ಗೆ ಒಂದು ಮಾತು ಹೇಳಲೇಬೇಕು. ಈ ಕವಿತೆಯಲ್ಲಿ ಅವರು, ಸಮಾಜದ ಪುರುಷ ಪ್ರಧಾನ ಧೋರಣೆಯನ್ನು ಅಣಕಿಸುವ ಬಗೆ ಬಲು ಸೂಕ್ಷ್ಮವಾಗಿದೆ. ಮಹಾದೇವಿ ಅಕ್ಕ ಆದದ್ದು, ಮೀರಾ ಸಂತಳೆನಿಸಿದ್ದು ನಿಜವಾಗಿಯೂ ಹೇಗೆ ಎಂಬ ಪ್ರಶ್ನೆಗಳನ್ನು ಈ ಕವಿತೆ ಉತ್ತರಿಸುತ್ತದೆ. ಅವರಿಬ್ಬರೂ ಕ್ರಮವಾಗಿ "ಕಲ್ಲು" ಚೆನ್ನಮಲ್ಲಿಕಾರ್ಜುನನನ್ನು, "ಗೊಂಬೆ" ಮಾಧವನನ್ನು ಗಂಡನೆಂದು ಬಗೆದರು. ಆದರೆ ಅವರ ಹಾಗೆಯೇ ಗಂಡನ್ನ ಬಿಟ್ಟು ಮತ್ತಾರನ್ನೋ ಗಂಡನೆಂದು ಬಗೆದ ಹೊಸ ಸಮಾಜದ ಹೆಣ್ಣುಮಗಳೊಬ್ಬಳು ಪಡೆದದ್ದು ಹಾದರಗಿತ್ತಿಯ ಪಟ್ಟ. ಯಾಕೆಂದರೆ, ಅವಳು ಗಂಡನೆಂದು ಧೇನಿಸಿದ್ದು ಕಲ್ಲನ್ನೊ, ಗೊಂಬೆಯನ್ನೊ ಆಗಿರಲಿಲ್ಲ; "ಸಜೀವ ಗಂಡಸಾಗಿದ್ದ!"

ಇದನ್ನು ಇನ್ನೂ ವಿವರಿಸುವುದು ಬೇಕಿಲ್ಲ. ಅಲ್ಲದೆ ಇದಕ್ಕಿಂತ ಹೆಚ್ಚಾಗಿ ನಾನಿಲ್ಲಿ ಚೇತನಾ ಅವರ ಕವಿತೆಗಳ ಭಾಗಗಳನ್ನು ಉದ್ಧರಿಸುವುದಕ್ಕೂ ಬಯಸುವುದಿಲ್ಲ. ಹೇಳಿಕೊಳ್ಳುವ, ಹೇಳುವ ತೀವ್ರತೆ ಅವರೊಳಗೆ ಗಾಢವಾಗಿದೆ ಎಂಬುದಷ್ಟೇ ಮುಖ್ಯವಾಗಿ ಕಂಡಿದೆ. ಈ ತೀವ್ರತೆಯೇ ಅವರನ್ನು ಮುನ್ನಡೆಸಬಲ್ಲುದು.

–ವೆಂಕಟ್ರಮಣ ಗೌಡ

ಭಾಮಿನಿ ಷಟ್ಪದಿ/

ಭಾಮಿನಿ ಷಟ್ಪದಿ/

ಭಾಮಿನಿ ಷಟ್ಪದಿ/

ಭಾಮಿನಿ ಷಟ್ಪದಿ/

ಭಾಮಿನಿ ಷಟ್ಪದಿ/

ಭಾಮಿನಿ ಷಟ್ಪದಿ/

ಭಾಮಿನಿ ಷಟ್ಪದಿ/